
ಶ್ರೀ ರಾಮಚಂದ್ರಜಿ ಮಹಾರಾಜ
ಷಾಹಜಹಾನಪುರ (ಉ. ಪ್ರ.) ಅವರ

# ನುಡಿಮುತ್ತುಗಳು



ಶ್ರೀ ರಾಮಚಂದ್ರಜಿ ಮಹಾರಾಜ
ಶಾಹಜಹಾನಪುರ (ಉ. ಪ್ರ.) ಅವರ

# ನುಡಿಮುತ್ತುಗಳು

ಸಂಗ್ರಾಹಕ :
ಶ್ರೀ ಆ. ಸರ್ನಾಡ

ಯೋಗಾಶ್ರಮ ಕಮೀಟಿ
# ೫೩. ಬನಶಂಕರಿ ನಗರ, ಕೆಲಗೇರಿ ರಸ್ತೆ
ಧಾರವಾಡ-೫೮೦ ೦೦೮

Nudi muthugulu : a collection of sayings and writings of Poojya Shri Ramchandraji Maharaj (Babuji), Founder - President, Sri Ramchandra Mission, Shahajhanpur, (U.P.) (in Kannada) Published by : Yogashram Committee, 53, Banashankari Nagar, Kelgeri Road, Dharwad - 580 008


Page : 86

Third Edition : September 2014

Price : Rs. 50/-

ಮುದ್ರಕರು :

ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ
ದೂರವಾಣಿ : ೦೮೩೬ – ೨೭೯೦೦೩೦, ೨೭೪೧೯೮೪
ಮೊಬಾಯಿಲ್ : ೯೧೪೧೨೦೧೧೭೦



ಸಮರ್ಥ ಸದ್ಗುರು ಶ್ರೀ ರಾಮಚಂದ್ರಜಿ (ಬಾಬೂಜಿ)
ಮಹಾರಾಜರು, ಷಾಹಜಹಾನಪುರ

# ಸಂಗ್ರಾಹಕನ ಮಾತು

ಶ್ರೀ ಬಾಬೂಜಿಯವರು ಅತ್ಯಂತ ಕುಶಲ ಸಂಭಾಷಣಕಾರರು. ಅವರ ಮಾತುಗಳಲ್ಲಿ ಅಂತಃಕರಣದ ಒಂದು ವಿಲಕ್ಷಣ ಸೆಳೆತವಿರುತ್ತದೆ. ನಮಗೆ ತಿಳಿಯದಂತೆಯೆ ನಾವು ಆ ಮೋಡಿಗೊಳಗಾಗಿಬಿಡುತ್ತೇವೆ. ಅಲೌಕಿಕವಾದ ಆ ಆನಂದವನ್ನು ಶಬ್ದಗಳಿಂದ ವರ್ಣಿಸಲು ಸಾಧ್ಯವಿಲ್ಲ. ಉಪನಿಷತ್ತಿನ ಧಾಟಿಯಲ್ಲಿ 'ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ' ಎಂದು ಮಾತ್ರ ಹೇಳಬಹುದು.

ಶ್ರೀ ಗುರುಗಳ ಸಾನ್ನಿಧ್ಯದ ಸೌಭಾಗ್ಯವೊದಗಿದಾಗಲೆಲ್ಲಾ ಇತ್ತೀಚೆಗೆ ನಾನು ಅವರಾಡುತ್ತಿದ್ದ ಮಾತುಗಳನ್ನು ಗುರುತು ಹಾಕಿಕೊಳ್ಳುತ್ತ ಬಂದೆ. ಉರ್ದು ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಅವರು ಆಡಿದಂತೆ ಬರೆದುಕೊಂಡು ಅನಂತರ ಅವರೆದುರಿಗೆ ಓದಿ ತೋರಿಸಿ ಹೆಚ್ಚು ಕಡಿಮೆಯಾಗದಂತೆ ಬರೆದುಕೊಂಡಿರುವೆನೆಂಬುದನ್ನು ಖಚಿತ ಪಡಿಸಿಕೊಳ್ಳುತ್ತಿದ್ದೆ. ಆದರೆ ಅದನ್ನೆಲ್ಲ ಕನ್ನಡಕ್ಕೆ ಪರಿವರ್ತಿಸುವಾಗ ನನಗೆ ಅರ್ಧ ಜೀವವೇ ಹೊದಂತಾಯಿತು. ಮೂಲದ ಆ ಸತ್ತ್ವ-ಸೌಂದರ್ಯಗಳೆಲ್ಲಿ ? ಅನುವಾದವೆಲ್ಲಿ ? ಆದರೂ ನಾನು ಇದಕ್ಕೆ ಮೆರುಗು ಕೊಡುವ ಗೋಜಿಗೆ ಹೋಗಲಿಲ್ಲ. ಹಾಗೇನಾದರೂ ಮಾಡಿದ್ದರೆ ಅವರ ಮಾತುಗಳನ್ನೂ ವಿಚಾರಗಳನ್ನು ವಿಪರ್ಯಾಸಗೊಳಿಸಿದ ಅಪರಾಧಕ್ಕೆ ಗುರಿಯಾಗುತ್ತಿದ್ದೆ.

ನನ್ನ ಗುರುಬಂಧುಗಳಾದ ರಾಘವೇಂದ್ರರಾಯರೂ, ತ. ಶ್ರೀಕಂಠಯ್ಯನವರು ಹಾಗೂ ಇತರರು ಈ ಸಂಗ್ರಹಕ್ಕೆ ಅಲ್ಲಲ್ಲಿ ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಅವರಿಗೆ ನಾನು ಋಣಿ.

ಈ ಸಂಗ್ರಹದಲ್ಲಿ ಕೆಲಭಾಗ ಮೂರು ವರ್ಷಗಳ ಹಿಂದೆ 'ಪ್ರದೀಪ'ದಲ್ಲಿ ಪ್ರಕಟವಾಯಿತು. ಅದರ ಸಂಪಾದಕರಾದ ಶ್ರೀ ವಿನೀತ

ರಾಮಚಂದ್ರರಾಯರೇ ಇದರ ಪ್ರಕಟನೆಗೆ ಮೊಟ್ಟಮೊದಲು ಪ್ರೇರೇಪಿಸಿದರು. ಅವರ ಸ್ನೇಹವನ್ನು ನೆನೆಯದಿರಲಾರೆ.

ಇವೆಲ್ಲವನ್ನೂ ವಿಷಯಾನುಗುಣವಾಗಿ ಬೇರೆ ಬೇರೆ ಶೀರ್ಷಿಕೆಗಳ ಕೆಳಗೆ ಕೊಡಬೇಕೆಂಬ ವಿಚಾರವಿದ್ದಿತ್ತು. ಆದರೆ ಸಮಯ ಸಿಗದಿದ್ದರಿಂದಲೂ ಇದನ್ನು ಆದಷ್ಟು ಬೇಗನೆ ಪ್ರಕಟಿಸಬೇಕೆಂದು ಸತ್ಸಂಗಿ ಬಾಂಧವರೆಲ್ಲ ಒತ್ತಾಯ ಮಾಡಿದ್ದುದರಿಂದಲೂ ಉಪಾಯವಿಲ್ಲದೆ ಇದ್ದ ಸ್ಥಿತಿಯಲ್ಲಿಯೇ ಇದನ್ನು ಪ್ರಕಟಿಸಲಾಗಿದೆ.

ಶ್ರೀ ಆ. ಸರ್ನಾಡ

ಮೈಸೂರು
ಪರಿಧಾವೀ ಸಂವತ್ಸರ
ವೈಶಾಖ ಬಹುಳ ಪಂಚಮಿ

# ಶ್ರೀ ಗುರು ಬಿನ್ನಪ

ಈ ದೇಹ ಈ ಆತ್ಮ
ಚಿತ್ತ–ಮನ–ಬುದ್ಧಿಗಳು
ನಿನ್ನವೇ ಆಗಿರಲು
ನಿನ್ನ ಮನಬಂದಂತೆ ಅವುಗಳನು ಬಳಸು।
ಕೀಲುಗೊಂಬೆಯು ನಾನು
ಸೂತ್ರಚಾಲಕ ನೀನು
ಮಾಡುವವ ನಾನೆಂಬ ಅರಿವನ್ನೆ ಅಳಿಸು ॥

ಇಡಿಯ ಚೈತನ್ಯಕ್ಕೆ
ನಿನ್ನ ಮುದ್ರೆಯನೊತ್ತಿ
ನೈಜ ಅಸ್ತಿತ್ವದಲಿ ಅದನು ಲಯಗೊಳಿಸು ।
ಎನ್ನ ಸರ್ವಾಂಗದಲಿ
ನಿನ್ನ ಪ್ರಾಣಾಹುತಿಯ
ದಿವ್ಯ ಸ್ಪಂದನವನ್ನು ನಿತ್ಯಶ್ರುತಪಡಿಸು ॥

ನನ್ನ ಇಂದ್ರಿಯಗಳನು
ನಿನ್ನ ಬಣ್ಣದಲದ್ದು;
ಉಸಿರು ಉಸಿರಲಿ ನಿನ್ನ ಪರಿಮಳವ ಬೀರು ।
ನಿನಗಾಗಿ ನಿನ್ನಿಂದ
ನಿನ್ನೊಳಗೆ ಜೀವಿಸುವ
ಗುಟ್ಟು ಕರಗತವಾಗುವಂತೆ ದಯೆದೋರು ॥

ಶ್ರೀಪತಿ ಸರ್ನಾಡ

# ಸಮರ್ಥಗುರು ಶ್ರೀ ಮಹಾತ್ಮಾ ರಾಮಚಂದ್ರಜಿ ಮಹಾರಾಜ, ಫತೆಹ್‌ಗಡ, ಇವರ ಸ್ಮರಣಾರ್ಥ ಶ್ರದ್ಧಾಂಜಲಿ

ಅಧ್ಯಾತ್ಮಲೋಕವನು ಬೆಳಗಿಸಿದ ಭಾನು !
ಪರಮಾತ್ಮನರಿವನ್ನು ಪಡೆದುಕೊಂಡವನು
ಜಿಜ್ಞಾಸುಗಳಿಗೆ ನೀ ಮಾರ್ಗದರ್ಶನ ಗೈದೆ
ಪಾರಮಾರ್ಥಿಕೆ ದೇಹ–ಪ್ರಾಣ ನೀನು.

ನಿನ್ನ ಜೀವಿತದ ಪ್ರತಿಯೊಂದು ರೀತಿಯಲಿ
ಪರಮಾರ್ಥವೈಭವವು ಕಾಣುತಿತ್ತು;
ಪ್ರತಿ ಹಾವಭಾವದಲಿ ವ್ಯಕ್ತವಾಗುತಲಿತ್ತು
ಲೋಕವನು ಬೆಳಗಿಸುವ ದಿವ್ಯ ತೇಜಸ್ಸು.

ಪರಮಾತ್ಮನಲಿ ನೀನು ಐಕ್ಯನಾದರು, ಇನ್ನೂ
ಗದ್ದಿಗೆಯ ಮೇಲಿಹುದು ಎಂಥ ಬೆಳಕು !
ಪ್ರತಿಯೊಂದು ಕಣದಲ್ಲು ಎದ್ದು ಕಾಣುತಲಿಹುದು
ಪರಮಾರ್ಥಜೀವನದ ಸೊಂಪು – ಥಳಕು !

ಸುತ್ತಲೂ ಕವಿದಿದ್ದ ಅಂಧಕಾರವ ನೋಡಿ
ಅಧ್ಯಾತ್ಮಕ್ಷೇತ್ರದಲಿ ಕ್ರಾಂತಿಗೊಳಿಸಿ;
ಸಹಜಮಾರ್ಗವ ರಚಿಸಿ, ಹೊಸ ತಳಹದಿಯಲೊಂದು
ಪರಮಾರ್ಥಸೌಧವನು ನಿರ್ಮಿಸಿರುವಿ.

ನಿನ್ನೊಂದು ಭ್ರೂಚಲನದೊಳಗೇನು ಭವ್ಯತೆಯೊ !
ಹೇಳಬಲ್ಲವರಾರು ಗುಟ್ಟನರಿದು ?
ಅದರ ತೇಜದಿ ಬೆಳಗಿ ತೊಳಗಿತ್ತು ಸುತ್ತಲಿನ
ಪರಮಾರ್ಥದಾಕಾಶ, ತಮವು ಹರಿದು !

ನೀನು ಊದಿದ ಪ್ರಾಣಬಲದಿ ಪ್ರವಹಿಸುತಿಹುದು
ಇಂದಿಗೂ ಅದರನುಗ್ರಹದ ಧಾರೆ;
ಹಸನಾಗಿ ಎಲ್ಲೆಡೆಗು ಅರಳಿನಿಂತಿದೆ ಈಗ
ಪರಮಾರ್ಥ-ಹೂದೋಟ ಮುದವ ಬೀರೆ.

ನಿನ್ನ ಆ ಒಂದೊಂದು ಮಾತಿನಲ್ಲಿಯು ಪ್ರೇಮ-
ಪೀಯೂಷ ತುಂಬಿ ಹರಿಯುತ್ತಲಿತ್ತು;
ನಿನ್ನ ಆ ಒಂದೊಂದು ನೋಟವೂ ಪರಮಾರ್ಥ-
ದೊಂದೊಂದು ಕಥೆಯನ್ನು ಸಾರುತ್ತಿತ್ತು.

ಸಹನೆ-ಅವಿಚಲನಿಷ್ಠೆಗಳ ದಿವ್ಯ ಸಂಸಿದ್ಧಿ
ದರ್ಶನೀಯವು; ನಿನಗಾಗಿ ಪ್ರಾಣಕೊಡಲು
ಸಿದ್ಧರಿದ್ದರು ತಮ್ಮ ನೂರು ಪ್ರಾಣಗಳಿಂದ
ಅಧ್ಯಾತ್ಮದಭಿಲಾಷೆಯುಳ್ಳ ಜನರು.

'ತೆರೆಯುವುದು ಸಾಧಕರ ಸುಪ್ತಸೌಭಾಗ್ಯವದು;
ಬೆಳಗುವುದು ತಾನೆ ಪರಮಾರ್ಥ ತೇಜಸ್ಸು
ಸೆಳೆಯುವುದು ಭಕ್ತರ, ಪತಂಗವಂ ದೀಪದೊಲು'
ಎಂದ ನಿನ್ನಯ ಮಾತು ಸತ್ಯವಾಯ್ತು.

ನಿನ್ನ ಕೃಪೆ, ನಿನ್ನನುಗ್ರಹದಿಂದ ಇಂದು
ಬೀರುತಿದೆ ಆ ಜ್ಯೋತಿ ದಿವ್ಯಪ್ರಭೆಯ.
ಪರಮಾತ್ಮ ಪ್ರೇಮಿಗಳು ಪಡೆದುಕೊಳ್ಳುತಲಿಹರು
ಪರಮಾರ್ಥದಾಲೋಕ ಮೋದದಿಂದ.

ಸತ್ಯದೃಷ್ಟಿಯನುಳ್ಳ 'ಬಿಸ್ಮಿಲ್'*
ನೋಡಿಕೋ ಸಂತೋಷದಿ !
ಪಾರಮಾರ್ಥದ ಪುಷ್ಪವನವದು
ಹೇಗೆ ವಿಕಸಿತವಾಗಿದೆ.

ಮದನ ಮೋಹನಲಾಲ್ ಶ್ರೀವಾಸ್ತವ
ವಕೀಲ, ಬದಾಯೂನ್

---

* ಇದು ಕವಿಯ ಅಂಕಿತ

## ಪ್ರಾರ್ಥನೆ

ಗುರುವೆ, ಎನ್ನ ಇರವಿನಲ್ಲಿ
ಎಂತೊ ಏನೋ ಬಂದು ನೀನು
ಬಾಳಿಗೊಂದು ಹೊನ್ನಸ್ಪರುಶ
ನೀಡಿಹೋಗಿಹೆ.

ಮೌನ ಧ್ಯಾನ ಹಣತೆಯುರಿಸಿ
ಎದೆಯ ಗೂಡಿನೊಳಗೆ ಇರಿಸಿ
ಜ್ಞಾನಾಂಜನ ಕಣ್ಣಿಗೊರಸಿ
ಕತ್ತಲೆಯ ದೂಡಿದೆ.

ಎಡವುತಿರಲು ಕೈಯ ಹಿಡಿದೆ
ಮತ್ತೆ ಬೀಳಲೆತ್ತಿಕೊಂಡೆ
ಕೂಸಿಗಿಂತ ಮೆಲ್ಲನೆಂಬ
ತೆರದಲೆನ್ನ ನಡೆಸಿದೆ.

ಸಲುಗೆಯಿಂದ ಬಳಿಯ ಸಾರಿ
ಪ್ರೀತಿಯಿಂದ ಬೆನ್ನಸವರಿ
ಎದೆಗವಚುತ ಕರುಣೆತೋರಿ
ವಾತ್ಸಲ್ಯವನೂಡಿದೆ.

ಶಿಶಿರ–ಋತುವಿನೆಲೆಗಳಂತೆ
ಉದುರಿ ಹೋದುವೆನ್ನ ಚಿಂತೆ
ನವಚೇತನ ಪಡೆದು ಮತ್ತೆ
ಬಾಳಿನ ಸವಿಯುಂಡೆನು.

ಇಂಥ ಪ್ರೀತಿಲೋಕದಲ್ಲಿ
ಕಂಡರಿಯೆನು ಜನುಮದಲ್ಲಿ
ಶಿವಶಿವ ನೀ ಮನುಜನೆಲ್ಲಿ ?
ದೇವತ್ವದ ಮೂರ್ತಿಯು.

ನಿನ್ನ ಪಾದಕೆನ್ನ ಮನವ
ನಿನ್ನ ಕಾರ್ಯಕೆನ್ನ ತನುವ-
ನರ್ಪಿಸುವೆನು ಒಪ್ಪುಗೊಳ್ಳು
ದೀನನ ಈ ಕಾಣಿಕೆ

ಇದರಲು ನಾ ಸ್ವತಂತ್ರನಲ್ಲ
ಗೈವೆನೆಂಬ ಮಾತೆ ಹೊಲ್ಲ
ನಿಂತು ನೀನೆ ಮಾಡಿಸೆಲ್ಲ
ಇಷ್ಟೆ ನನ್ನ ಪ್ರಾರ್ಥನೆ.

೨೮-೧೧-೧೯೬೮ ಶ್ರೀ ಆ. ಸರ್ನಾಡ

# ಶ್ರೀ ಬಾಬೂಜಿಯವರು ಆಗಾಗ ನಿರೂಪಿಸಿದ ಪರಮಪೂಜ್ಯ ಲಾಲಾಜಿಯವರ ಜೀವನಸ್ಮೃತಿಗಳು

೧

"ಲಾಲಾಜಿಯವರು ತಮಗೆ ಬರುತ್ತಿದ್ದ ಅಲ್ಪ ಸಂಬಳದಲ್ಲಿ ಬಹಳ ಕಷ್ಟದಿಂದ ಜೀವನ ಸಾಗಿಸುತ್ತಿದ್ದರು. ಅವರ ಕಡೆಗೆ ಅನೇಕ ಅತಿಥಿಗಳು ಮೇಲಿಂದ ಮೇಲೆ ಬರುತ್ತಿದ್ದರು. ಅವರಿಗೆಲ್ಲ 'ಶಂಕರ ಪಾಳೆ'ಯನ್ನೋ ಮತ್ತಾವುದಾದರೂ ತಿನಿಸನ್ನೋ ಕೊಡಲಾಗುತ್ತಿತ್ತು. ಆಗಿನ ಕಾಲದಲ್ಲಿ ಚಹದ ರೂಢಿ ಅಷ್ಟಾಗಿ ಇದ್ದಿಲ್ಲ. ಸ್ವತಃ ಲಾಲಾಜಿಯವರೇ ಚಹ ತೆಗೆದುಕೊಳ್ಳುತ್ತಿದ್ದಿಲ್ಲ. ಧೂಮ್ರಪಾನ ಮಾಡುತ್ತಿದ್ದಿಲ್ಲ. ಚಹ ಕುಡಿಯುವ ಚಟವಿದ್ದವರು ಬಂದರೆ ಅವರಿಗಾಗಿ ಮಾತ್ರ ಮಾಡಿಕೊಡುತ್ತಿದ್ದರು. ತಾವು ಸ್ವತಃ ಯಾವಾಗಲಾದರೂ ತುಳಸಿಯ ಕಷಾಯವನ್ನು ತೆಗೆದುಕೊಳ್ಳುತ್ತಿದ್ದರು."

"ಒಮ್ಮೆ ನಾನು ಲಾಲಾಜಿಯವರಲ್ಲಿಗೆ ಹೋದಾಗ ರಾತ್ರಿ ಇಬ್ಬರೂ ಒಂದೇ ತಟ್ಟೆಯಲ್ಲಿ ಊಟಕ್ಕೆ ಕುಳಿತೆವು. (ಇದು ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ರೂಢಿ.) ಲಾಲಾಜಿ ತಮ್ಮ ಕಡೆಗೆ ತಂಗುಳ ಪಲ್ಯೆ, ಚಪಾತಿ ಬಡಿಸಿಕೊಂಡು ನನ್ನ ಕಡೆಗೆ ಬಿಸಿ, ಪಲ್ಯೆ, ರೊಟ್ಟಿಯನ್ನು ಬಡಿಸಿದ್ದರು. ನನಗೆ ಇದು ಗೊತ್ತಾಯಿತು. ಆಗ ನನ್ನ ಮನಸ್ಸಿನಲ್ಲಾದ ಕಳವಳವನ್ನು ವರ್ಣಿಸಲು ಸಾಧ್ಯವಿಲ್ಲ. ನಾನು ಮೊದಲು ಅವರ ಕಡೆಗಿದ್ದ ಚಪಾತಿಯನ್ನೇ ತಿನ್ನಲು ಆರಂಭಿಸಿದೆ. ಲಾಲಾಜಿ ಎಷ್ಟು ತಡೆದರೂ ಕೇಳಲಿಲ್ಲ. 'ಮೊದಲು ಆರಿದ್ದನ್ನುಂಡು ಆಮೇಲೆ ಬಿಸಿಯದನ್ನುಂಡರೆ ಚೆನ್ನಾಗಿರುವುದಿಲ್ಲವೆ ?' ಎಂದು ಹೇಳುತ್ತ ಊಟಕ್ಕೆ ಮೊದಲು ಮಾಡಿದೆ."

"ಮತ್ತೊಮ್ಮೆ ಒಂದು ಚಮತ್ಕಾರವೇ ಆಯಿತು. ಒಮ್ಮಿಂದೊಮ್ಮೆ ಕೆಲಜನ ಅತಿಥಿಗಳು ಬಂದುಬಿಟ್ಟರು. ಅದಕ್ಕಿಂತ ಸ್ವಲ್ಪ ಮುಂಚೆ

ಲಾಲಾಜಿ ಹಿಟ್ಟನ್ನು ಬೀಸಿಕೊಂಡು ಬರಲು ಗೋಧಿಯನ್ನು ಗಿರಣಿಗೆ ಕೊಟ್ಟು ಕಳಿಸಿದ್ದರು. ಆದರೆ ಎಷ್ಟು ಹೊತ್ತಾದರೂ ಬೀಸಿಕೊಂಡು ಬರಲು ಹೋದ ಮನುಷ್ಯ ತಿರುಗಿ ಬರಲೇ ಇಲ್ಲ. ಹತ್ತಿರವಿದ್ದ ಮನೆಗಳಲ್ಲಿ ಕಡ ಕೂಡ ದೊರೆಯಲಿಲ್ಲ. ತುಂಬಾ ಹೊತ್ತಾಗಿದ್ದುದರಿಂದ ಅತಿಥಿಗಳು ಹಸಿದಿದ್ದರು. ಇನ್ನೇನು ಮಾಡುವುದು ? ಲಾಲಾಜಿ ವಿಚಾರಮಗ್ನರಾದರು. ಅಂಗಡಿಯಿಂದ ಫಲಾಹಾರ ತರಿಸಿ ಅಷ್ಟರಮೇಲೆಯೇ ಮುಗಿಸಬೇಕೋ ಹೇಗೆಂದು ಯೋಚಿಸುತ್ತಿರುವಾಗಲೇ ಶ್ರೀಮಂತ ಮನುಷ್ಯನೊಬ್ಬ ಹತ್ತಿಪ್ಪತ್ತು ಜನರಿಗೆ ಸಾಲುವಷ್ಟು ಪಕ್ವಾನ್ನಾದಿಗಳನ್ನು ತಂದು ಲಾಲಾಜಿಯವರಿಗೆ, ಸ್ವೀಕರಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಂಡನು. ಎಲ್ಲರಿಗೂ ತುಂಬ ಆಶ್ಚರ್ಯವಾಯಿತು. ಸಂತೋಷದಿಂದ ಊಟ ಮಾಡಿದರು."

೨

"ಒಮ್ಮೆ ಚಳಿಗಾಲದಲ್ಲಿ ನಾನು ಕೆಲ ಮಿತ್ರರೊಂದಿಗೆ ಫತೆಹ್‌ಗಡಕ್ಕೆ ಹೋದೆ. ನಾವು ಫತೆಹ್‌ಗಡ ಸ್ಟೇಷನ್ನಿನಲ್ಲಿ ಇಳಿದಾಗ ರಾತ್ರಿ ಸುಮಾರು ಒಂದು ಗಂಟೆಯಾಗಿರಬೇಕು. ಮೈ ಕೊರೆಯುವಂತಹ ಚಳಿ. ಕೆಲವರು ಸ್ಟೇಷನ್ನಿನಲ್ಲಿಯೇ ಮಲಗಿಕೊಂಡು ಮುಂಜಾನೆ ಗುರುಗಳ ಮನೆಗೆ ಹೋದರಾಯಿತೆಂದು ಸೂಚಿಸಿದರು. ಆದರೆ ಎಷ್ಟೇ ಅಪರಾತ್ರಿಯಾಗಿದ್ದರೂ ಗುರುಗೃಹಕ್ಕೆ ಹೋಗೀಯೆ ಬಿಡಬೇಕೆಂದು ನನ್ನ ಒಳಮನಸ್ಸು ಹಂಬಲಿಸುತ್ತಿತ್ತು. ಅವೇಳೆಯಲ್ಲಿ ಮನೆಯವರನ್ನು ಎಬ್ಬಿಸಿದಂತಾಗುವುದಲ್ಲ ಎಂಬ ಸಂಕೋಚ ಬೇರೆ. ಕೊನೆಗೆ ಗಟ್ಟಿಮನಸ್ಸಿನಿಂದ ಹೋಗಿಯೆ ಬಿಡಬೇಕೆಂದು ನಿರ್ಧಾರ ಮಾಡಿ ನಡೆದುಬಿಟ್ಟೆವು."

"ಯಾರೋ ಬಾಗಿಲು ತೆಗೆದರು. ನಾವು ಹೆಚ್ಚು ಗೊಂದಲ ಮಾಡದೆ ಸ್ಥಳ ಸಿಕ್ಕಲ್ಲಿ ಮಲಗಿಕೊಂಡೆವು. ನನಗೆ ಅಂಗಳದಲ್ಲಿ ಆಕಳು ಕಟ್ಟುವ ಸ್ಥಳದ ಹತ್ತಿರ ಜಾಗ ಸಿಕ್ಕಿತು. ಅಲ್ಲಿಯೆ ಒಂದು ಕಂಬಳಿಯನ್ನು ಹಾಸಿಕೊಂಡು ಒಂದು ಕಂಬಳಿಯನ್ನು ಹೊದೆದುಕೊಂಡು ಮಲಗಿದೆ.

ಮರುದಿನ ಮುಂಜಾನೆ ಲಾಲಾಜಿಯವರ ಮಗ ಇದನ್ನು ನೋಡಿದರು. 'ಅಣ್ಣಾ ಅವರು ರಾತ್ರಿ ಆಕಳು ಕಟ್ಟುವ ಜಾಗದ ಹತ್ತಿರ ಮಲಗಿಕೊಂಡಿದ್ದರು' ಎಂದು ಲಾಲಾಜಿಗೆ ತಿಳಿಸಿದರು. ಆದರೆ ಇದಕ್ಕೆ ಅಷ್ಟು ಕಿವಿಗೊಡದೆ ಅವರು ಸುಮ್ಮನಾದರು. ಅವರಿಗೆ ಇದೆಲ್ಲಾ ತಿಳಿದೇ ಇದ್ದಿತು. ಮತ್ತು ನಾನಾದರೂ ಅವರ ಸಾನ್ನಿಧ್ಯ ಸುಖವನ್ನು ಪ್ರತಿಕ್ಷಣವೂ ಅನುಭವಿಸುತ್ತ ಎಳ್ಳಷ್ಟೂ ಚಳಿಯನ್ನನುಭವಿಸದೆ ಸುಖವಾಗಿ ನಿದ್ರಿಸಿದೆ."

೩

"ಲಾಲಾಜಿಯವರ ಮನೆಯವರು (ಹೆಂಡತಿ) ಸಿಡುಕಿನ ಸ್ವಭಾವದವರು. ಇದಕ್ಕೆ ವಿರುದ್ಧವಾಗಿ ಲಾಲಾಜಿ ತುಂಬ ಶಾಂತ ಸ್ವಭಾವದವರು. 'ಫಕೀರ(ಸಂತ)ನ ಹೆಂಡತಿ ಸಿಡುಕಿನವಳೇ ಇರಬೇಕು' ಎಂದು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು. ಇದರಿಂದ ಸಹಿಷ್ಣುತೆಯ ಪಾಠ ಕಲಿಯಲು ಒಳ್ಳೆಯ ಅನುಕೂಲವಾಗುವುದೆಂದು ಅವರ ಅಭಿಪ್ರಾಯವಾಗಿದ್ದಿತು."

೪

"ಒಮ್ಮೆ, ಅಲ್ಲಿಯ ಕಲೆಕ್ಟರನ ಮಗನಿಗೆ ವಿಷಮಜ್ವರ ಬಂದಿತು. ಯಾವ ಚಿಕಿತ್ಸೆಯಿಂದಲೂ ಗುಣವಾಗಲಿಲ್ಲ. ಆಗ ಯಾರೋ ಒಬ್ಬರು ಲಾಲಾಜಿಯ ಆಧ್ಯಾತ್ಮಿಕ ಸಾಮರ್ಥ್ಯಗಳನ್ನು ಕುರಿತು ಅವರಿಗೆ ಹೇಳಿದರು. ಸರಿ, ಕಲೆಕ್ಟರರು ಲಾಲಾಜಿಯ ಹತ್ತಿರ ಧಾವಿಸಿ ಬಂದರು. ಬಹಳ ಕಷ್ಟದಿಂದ ಅವರ ಮನವೊಲಿಸಿ ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮರುದಿನವೇ ಜ್ವರ ಇಳಿಯಲಾರಂಭಿಸಿತು; ಮತ್ತು ಕೆಲ ದಿನಗಳಲ್ಲಿ ಹುಡುಗನಿಗೆ ಸಂಪೂರ್ಣ ಗುಣವಾಯಿತು. ಕಲೆಕ್ಟರನಿಗೆ ಬಹಳ ಸಂತೋಷವಾಗಿ ಲಾಲಾಜಿಯವರನ್ನು ಗೌರವದಿಂದ ಕಾಣತೊಡಗಿದ. ಆದರೆ ಯಾರೋ ಮತ್ತೊಬ್ಬರು, 'ಲಾಲಾಜಿಯವರು ದುಷ್ಟಶಕ್ತಿಗಳನ್ನು ಸಾಧಿಸಿಕೊಂಡಿದ್ದಾರೆ. ಅದರ ಪ್ರಭಾವದಿಂದಲೇ ನಿಮ್ಮ ಮಗನಿಗೆ ಜ್ವರ ಬಂದದ್ದು' ಎಂದು ಅವರ ವಿರುದ್ಧ ಚಾಡಿ

ಹೇಳಿದರು. ಆಗ ಲಾಲಾಜಿ ನಿರ್ಭಯರಾಗಿ, 'ಸ್ವಾಮೀ, ಅಂಥ ದುಷ್ಟತನ ನನಗೆ ಗೊತ್ತಿಲ್ಲ. ನಾನು ಈ ರೀತಿ ಜನರನ್ನು ವಂಚಿಸುವ ಫಕೀರನಲ್ಲ. ನಿಮಗೆ ನನ್ನ ಸಾಧುತ್ವದಲ್ಲಿ ನಂಬುಗೆಯಿರದಿದ್ದರೆ ನನ್ನ ಹತ್ತಿರ ಬಂದಿರಾದರೂ ಏಕೆ ? ದಯವಿಟ್ಟು ಇನ್ನೊಮ್ಮೆ ಇಂಥ ಮಾತುಗಳನ್ನಾಡಬೇಡಿರಿ' ಎಂದು ಉತ್ತರ ಕೊಟ್ಟರು. ಪಾಪ, ಕಲೆಕ್ಟರರು ಅಪಮಾನ ಹೊಂದಿದವರಂತೆ ಮೋರೆಯನ್ನು ಕೆಳಕ್ಕೆ ಹಾಕಿಕೊಂಡು ಸುಮ್ಮನಾದರು; ಮತ್ತು ಎಂದಿನಂತೆ ಲಾಲಾಜಿಯವರನ್ನು ಗೌರವದಿಂದಲೇ ಕಾಣತೊಡಗಿದರು.

೫

"ಲಾಲಾಜಿಯವರು ಬಾಲ್ಯವನ್ನು ಬಹಳ ಕಷ್ಟದಲ್ಲಿ ಕಳೆದರು. ಅವರನ್ನು ಒಬ್ಬ ತಾಯಿಯು ನೋಡಿಕೊಳ್ಳುತ್ತಿದ್ದಳು. ಅವಳೇ ಅವರ ಅನೇಕ ಆವಶ್ಯಕತೆಗಳನ್ನು ಪೂರೈಸುತ್ತಿದ್ದಳು. ಎಷ್ಟೋ ವೇಳೆ ಅವರಿಗೆ ಸಾಯಂಕಾಲದ ಊಟ ಸಿಗುತ್ತಿರಲಿಲ್ಲ. ಬರೀ ಸ್ವಲ್ಪ ಹಾಲು ಕುಡಿದು ಮಲಗುತ್ತಿದ್ದರು. ಅವರು ತಮ್ಮ ತಮ್ಮನ ಸಲುವಾಗಿ ಬಹಳ ತ್ಯಾಗ ಮಾಡಿದರು. ತಮಗೆ ಉದರ ನಿರ್ವಾಹಕ್ಕೆ ದೇವರ ದಯದಿಂದ ನೌಕರಿ ಇದೆಯೆಂದು ಹೇಳಿ ತಮ್ಮ ಪಾಲಿನ ಆಸ್ತಿಯನ್ನು ತಮ್ಮನಿಗೇ ಬಿಟ್ಟುಕೊಟ್ಟರು."

೬

"ಲಾಲಾಜಿಯವರು ಅತ್ಯಂತ ಮಿತಭಾಷಿಗಳಾಗಿದ್ದರು. ಅನೇಕ ಗಂಟೆಗಳ ಕಾಲ ಅವರು ಸತ್ಸಂಗಿಗಳೊಡನೆ ಪಿಟ್ಟೆನ್ನದೆ ಸುಮ್ಮನೆ ಕುಳಿತಿರುತ್ತಿದ್ದರು. ಆದರೆ, ಬಂದವರಿಗೆ ಇದರಿಂದ ಬಹಳ ಬೇಸರವಾಗುತ್ತಿದೆಯೆಂದು ತಿಳಿದಕೂಡಲೇ ಮಾತನಾಡಲು ಆರಂಭಿಸುತ್ತಿದ್ದರು. ಆಗ ಅವರು ಕೊನೆಯಿಲ್ಲದೆ ತುಂಬ ಹರಟೆ ಹೊಡೆಯುತ್ತಿದ್ದರು. ಜನರು ಮಂತ್ರಮುಗ್ಧರಂತೆ ಅವರ ಮಾತುಗಳನ್ನು ಕೇಳುತ್ತಿದ್ದರು."

(ಅದೇ ಸ್ವಭಾವ ನನ್ನಲ್ಲಿಯೂ ಬೆಳೆದುಬಂದಿದೆ.)

"ಸ್ವಲ್ಪಕಾಲವೇ ಏಕಾಗಲೊಲ್ಲದು, ಲಾಲಾಜಿಯುವರ ಸಂಪರ್ಕವನ್ನು ಪಡೆದವರು, ಅವರೊಬ್ಬ ದೊಡ್ಡ ಸಂತರೆಂಬ ಭಾವನೆಯನ್ನೇ ಹೊಂದುತ್ತಿದ್ದರು. ಅವರಲ್ಲಿ ಅಷ್ಟು ಸರಳತೆ ಹಾಗೂ ನಿಷ್ಕಲ್ಮಷತೆ ಇದ್ದುವು. ಅವರು ತೀರ ಮಿತಭಾಷಿಗಳಾಗಿದ್ದರೂ ಜನರಿಗೆ ಈ ಬಗೆಯ ಭಾವನೆಯುಂಟಾಗುತ್ತಿದ್ದಿತು."

(ಆದರೆ ನನ್ನಲ್ಲಿ ಅಂಥದೇನೂ ಇಲ್ಲ. ಜನರು ನನ್ನನ್ನು ಬೆಪ್ಪನೆಂದೇ ಭಾವಿಸುವರು. 'ನಿನ್ನ ಸರಳತನದಿಂದ ಜನರು ಮೋಸ ಹೋಗುವರು' ಎಂದು ಒಮ್ಮೆ ಲಾಲಾಜಿ ಹೇಳಿದ್ದರು. ಆ ಮಾತು ತೀರ ಸತ್ಯವಾಗಿದೆ.)

೭

"ಲಾಲಾಜಿಯವರ ಬಳಿ ೫೦-೬೦ ಜನ ಸಂನ್ಯಾಸಿಗಳು ಬ್ರಹ್ಮವಿದ್ಯೆಯುನ್ನು ಕಲಿಯುಲು ಬರುತ್ತಿದ್ದರು. ಆದರೆ ಅವರಲ್ಲೊಬ್ಬರಿಗಾದರೂ ಲಾಲಾಜಿ, ಅನ್ಯರಿಗೆ ತರಬೇತಿ ಕೊಡಲು ಅಪ್ಪಣೆ ಕೊಡಲಿಲ್ಲ. ಇದರ ರಹಸ್ಯವೇನು ಗೊತ್ತೆ? ಹಾಗೆ ಅವರು ಮಾಡಿದುದೇ ಆಗಿದ್ದರೆ ಸಂನ್ಯಾಸಿಗಳಲ್ಲಿ ವಿಪರೀತ ಅಹಂಕಾರ ಬೆಳೆದುಬಿಡುತ್ತಿತ್ತು."

೮

"ಲಾಲಾಜಿಯವರು ಮಹಾಸಮಾಧಿಯನ್ನು ಹೊಂದಿದ ನಂತರ ಹಲವಾರು ವರ್ಷಗಳು ಕಳೆದುವು. ನಾನು ಅವರ ಉತ್ತರಾಧಿಕಾರಿ (Representative)ಯಾಗಿ ಕೆಲಸ ಮಾಡಬೇಕೆಂದು ಅವರ ಆದೇಶವಾಯಿತು. ಅಭ್ಯಾಸಿಗಳಿಗೆ ಪ್ರಾಣಾಹುತಿ ಕೊಡುವಾಗಲೆಲ್ಲ ನನ್ನ ಹೃದಯದೊಳಗಿಂದ ದಪ್ಪನಾದ ಬೆಳಕಿನ ಧಾರೆಯೊಂದು ಪ್ರವಹಿಸುತ್ತಿರುವಂತೆ ಅನುಭವವಾಗುತ್ತಿತ್ತು. ಅನೇಕ ಅಭ್ಯಾಸಿಗಳಿಗೆ ಅದನ್ನು ತಡೆದುಕೊಳ್ಳುವುದು ಸಾಧ್ಯವಾಗುತ್ತಿದ್ದಿಲ್ಲ. ಒಮ್ಮೆ ಒಬ್ಬ ವೃದ್ಧ

ಸತ್ಸಂಗಿಗಳು ಬಂದರು. ಅವರಿಗೆ ಪೂಜೆ ಮಾಡಿಸುತ್ತಿರುವಾಗ ಅವರು ಒಮ್ಮೆಂದೊಮ್ಮೆಲೇ 'ಇದೇನು ನೀವು ಮಾಡುತ್ತಿರುವುದು ? ಹೀಗೆ ನೀವು ಪ್ರಾಣಾಹುತಿ ಕೊಟ್ಟರೆ ಯಾರು ತಾನೆ ತಡೆದುಕೊಂಡಾರು ? ಲಾಲಾಜಿಯವರ ಕಾರ್ಯ ನಡೆಯಬೇಕಾದರೂ ಹೇಗೆ ?' ಎಂದು ಗಟ್ಟಿಯಾಗಿ ಕೂಗಿಕೊಂಡರು. ನಾನು ಕೇಳಿದೆ : 'ಬಂಧು, ಇದು ನನ್ನ ನಿತ್ಯದ ಪಾಡಾಗಿದೆ. ದಯವಿಟ್ಟು ಇದನ್ನು ಹೇಗೆ ನಿಯಂತ್ರಿಸಬೇಕೆಂದು ಹೇಳುವಿರಾ ?' ಅದಕ್ಕೆ ಆ ವೃದ್ಧರು ಲಾಲಾಜಿ ಯವರನ್ನು ಕುರಿತು ಪ್ರಾರ್ಥನೆ ಮಾಡುವಂತೆ ಸೂಚನೆ ಕೊಟ್ಟರು. ನಾನು ಹಾಗೆಯೆ ಮಾಡಿದೆ. ಲಾಲಾಜಿ ತುಂಬ ಸಂತೋಷಪಟ್ಟು, 'ಈ ಸಾಮರ್ಥ್ಯವು ನಿನ್ನ ಸ್ವಾರ್ಜಿತವಾದ ಕಾರಣ ನಿನ್ನ ಅನುಮತಿಯಿಲ್ಲದೆ ಅದನ್ನು ತಡೆಯಬಾರದೆಂದೆ ಯೋಚಿಸಿ, ನೀನು ಈ ಬಗ್ಗೆ ಪ್ರಾರ್ಥನೆ ಮಾಡುವುದನ್ನೇ ಕಾಯುತ್ತಿದ್ದೆ' ಎಂದು ಹೇಳಿದರು. ಅಂದಿನಿಂದ ನನ್ನ ಪ್ರಾಣಾಹುತಿಯಲ್ಲಿ ಸೌಮ್ಯತ್ವ ಬಂದಿತು."

೬

"ಶ್ರೀ ಲಾಲಾಜಿಯವರ ಶಕ್ತಿ–ಸಾಮರ್ಥ್ಯಗಳು ಅಪರಿಮಿತವಾಗಿದ್ದುವು. ಅಂಥ ಮತ್ತೊಂದು ಉದಾಹರಣೆ ನನಗಂತೂ ಗೊತ್ತಿಲ್ಲ. ಜನರನ್ನು ಅವರು ಕೇವಲ ದೃಷ್ಟಿ ಮಾತ್ರದಿಂದ ಪರಿವರ್ತಿಸಬಲ್ಲವರಾಗಿದ್ದರು. ಒಮ್ಮೆ ಅವರು ದಾರಿಹೋಕನೊಬ್ಬನನ್ನು ಆಧ್ಯಾತ್ಮಿಕ ತರಬೇತಿಗಾಗಿ ಆರಿಸಿಕೊಂಡರು. ಆತನೋ ಕೆಟ್ಟ ವ್ಯಭಿಚಾರಿ. ಆದರೆ, ಲಾಲಾಜಿಯವರ ಸಾಮರ್ಥ್ಯ ನೋಡಿರಿ. ಆತನು ತರಬೇತಿ ಪಡೆಯಹತ್ತಿದ ನಂತರ ಎಷ್ಟು ಸಲ ವ್ಯಭಿಚಾರ ಮಾಡಲು ಹೋದನೋ ಅಷ್ಟು ಸಲವೂ ಆತನು ನಪುಂಸಕತ್ವವನ್ನನುಭವಿಸಿದ. ಈ ಆತಂಕದಿಂದ ಅವನು ನೂರಾರುಸಲ ಒದ್ದಾಡಿದ. ಕೊನೆಗೆ ಈ ಕುಕೃತ್ಯವನ್ನು ಸಂಪೂರ್ಣ ಬಿಟ್ಟುಬಿಡಬೇಕಾಯಿತು. ಆತನು ಇನ್ನೂ ಜೀವಿಸಿದ್ದಾನೆ. ಲಾಲಾಜಿಯವರ ಹೆಸರನ್ನೆತ್ತಿದರೆ ಸಾಕು, ಕಣ್ತುಂಬ ನೀರು ತಂದು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾನೆ."

೧೦

"ಲಾಲಾಜಿಯವರ ಹತ್ತಿರ ಅನೇಕ ಜನರು ತರತರದ ತಿನಿಸುಗಳನ್ನೂ ಹಣ್ಣುಗಳನ್ನೂ ತೆಗೆದುಕೊಂಡು ಬರುತ್ತಿದ್ದರು. ನಾನು ಫತೆಹ್‌ಗಡಕ್ಕೆ ಹೋದಾಗಲೆಲ್ಲ ಯಥೇಷ್ಟ ದ್ರಾಕ್ಷಿ ತಿನ್ನುತ್ತಿದ್ದೆ."

೧೧

"ಲಾಲಾಜಿಯವರ ನೆರೆಯಲ್ಲಿ ಒಬ್ಬ ಮೌಲ್ವಿ ಸಾಹೇಬರು ಇರುತ್ತಿದ್ದರು. ಒಮ್ಮೆ ಲಾಲಾಜಿಯವರಿಗೆ ಹೊಟ್ಟೆನೋವುಂಟಾದಾಗ ಆ ಮೌಲ್ವಿ ಸಾಹೇಬರು ಅದನ್ನು ಗುಣಪಡಿಸಿದರು. ಅಂದಿನಿಂದ ಲಾಲಾಜಿಗೆ ಅವರಲ್ಲಿ ವಿಶೇಷ ಗೌರವಾದರಗಳುಂಟಾದುವು. ಒಮ್ಮೆ ಇಬ್ಬರೂ ಕೂಡಿ ಮುಸಲ್ಮಾನ ಸಂತನೊಬ್ಬನನ್ನು ನೋಡಲು ಹೋದರು. ಆ ಸಂತನು ಇವರನ್ನು ಬಾಗಿಲ ಹೊರಗೆ ಬಹಳ ಹೊತ್ತು ಕಾಯಿಸಿ ನಂತರ ಆಳಿನೊಂದಿಗೆ, 'ದೇವರೊಡನೆ ಸಂಬಂಧವಿಟ್ಟುಕೊಂಡವರಿಗಷ್ಟೆ ನನ್ನ ಭೆಟ್ಟಿ' ಎಂಬರ್ಥದ ಅಪಮಾನಕಾರಕ ಮಾತನ್ನು ಹೇಳಿಕಳಿಸಿದ. ಲಾಲಾಜಿಯವರು ತಮ್ಮ ಅವಮಾನವನ್ನು ಸಹಿಸಿಕೊಂಡರಾದರೂ ಆ ಮೌಲ್ವಿ ಸಾಹೇಬರಿಗಾದ ಮುಖಭಂಗವನ್ನು ಸಹಿಸಲಿಲ್ಲ. ಆಗ ಅವರು ಒಂದು ಚಮತ್ಕಾರವನ್ನು ತೋರಿಸಿದರು. ಆ ಸಾಧು ಒಮ್ಮಿಂದೊಮ್ಮೆ ಹೊಟ್ಟೆಯಲ್ಲಿ ಉರಿಯುವುದೆಂದು ಹೊರಳಾಡಹತ್ತಿದ. ವಿನಯಭಾವದಿಂದ ಇವರಿಬ್ಬರಿಗೂ ಒಳಗೆ ಬರಬೇಕೆಂದು ವಿನಂತಿಸಿಕೊಂಡು ಆಳನ್ನು ಕಳಿಸಿದ. ಆಗ ಲಾಲಾಜಿ ಕೇಳಿದರು: 'ದೇವರೊಡನೆ ನನ್ನ ಸಂಬಂಧವಿದೆಯೋ ಇಲ್ಲವೋ ಎಂಬುದನ್ನು ಈಗಲಾದರೂ ದೃಢಪಡಿಸಿಕೊಂಡಿರಾ? ನನ್ನೊಡನೆ ಬಂದಿದ್ದ ಈ ಹಿರಿಯರನ್ನು ಹೀಯಾಳಿಸಿದ್ದಕ್ಕಾಗಿ ನಿಮಗೆ ಈ ಶಿಕ್ಷೆಯನ್ನನುಭವಿಸಬೇಕಾಯಿತು, ತಿಳಿಯಿತೇ?' ಸಾಧು ತನ್ನ ತಪ್ಪನ್ನೊಪ್ಪಿಕೊಂಡು ಕ್ಷಮೆ ಬೇಡಿದಾಗಲೇ ಆತನ ಹೊಟ್ಟೆಯುರಿ ಶಮನವಾಯಿತು. ಸಾಧುವಿನಲ್ಲಿ ಇಂಥ ದುರಹಂಕಾರವಿರಬಾರದೆಂದು

ತಿಳಿಯಹೇಳಿ ಲಾಲಾಜಿ ಆ ಮೌಲ್ವಿ ಸಾಹೇಬರೊಂದಿಗೆ ತಿರುಗಿ ಬಂದರು."

೧೨

"ಲಾಲಾಜಿಯವರ ಹತ್ತಿರ ಒಂದು ಚಿಕ್ಕ ಪುಸ್ತಕವಿದ್ದಿತು. ಅದರಲ್ಲಿ, ಚಮತ್ಕಾರಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ವರ್ಣಿಸಲಾಗಿತ್ತು. ನಾನು ಅವರ ಮಗನಿಗೆ, ಆ ಪುಸ್ತಕವನ್ನು ಓದಬೇಕೆಂಬ ಅಪೇಕ್ಷೆಯಿಂದ, ಅದನ್ನು ಬೇಡಿದೆ. ಅದರೆ ಲಾಲಾಜಿಯವರು, 'ನೀನದನ್ನು ಓದಬೇಡ' ಎಂದು ಅಪ್ಪಣೆ ಮಾಡಿದರು. ನಾನು ಅದನ್ನೋದಿದರೆ ಎಲ್ಲಿ ಕೆಟ್ಟುಹೋಗುವೆನೋ ಎಂದು ಅವರು ಶಂಕಿಸಿರಬಹುದು. ವಾಸ್ತವವಾಗಿ, ಚಮತ್ಕಾರವು ತೀರ ಸಣ್ಣ ವಿಷಯ. ಅದರಲ್ಲಿ ಇಚ್ಛಾಶಕ್ತಿಯು ಅಗತ್ಯವಿದೆ. ಲಾಲಾಜಿಯವರು ತಮ್ಮ ಜೀವಿತಕಾಲದಲ್ಲಿ ಅನೇಕ ಚಮತ್ಕಾರಗಳನ್ನು ಮಾಡಿದರು. ಆದರೆ ಎಲ್ಲಿಯೂ ಅವುಗಳ ಉಲ್ಲೇಖವಿಲ್ಲ. ಚಮತ್ಕಾರಗಳ ಕಡೆಗೆ ಅವರ ದೃಷ್ಟಿ ಎಂದಿಗೂ ಹರಿಯಲಿಲ್ಲ."

೧೩

"ಲಾಲಾಜಿಯವರ ಮನೆಯಲ್ಲಿ ಪ್ರಸಾದ ನೈವೇದ್ಯ ಮಾಡಿದಾಗಲೆಲ್ಲ ಅದನ್ನು ಮೊದಲು ಚಿಕ್ಕಮಕ್ಕಳಿಗೆ ಕೊಡಬೇಕೆಂದು ಅವರು ಹೇಳುತ್ತಿದ್ದರು. ಓಣಿಯೊಳಗಿನ ಮಕ್ಕಳನ್ನು ಕರೆಕರೆದು ಪ್ರಸಾದ ಕೊಡುತ್ತಿದ್ದರು. 'ಮಕ್ಕಳು ಪ್ರಸಾದವನ್ನು ತುಂಬ ಸಂತೋಷದಿಂದ ತಿನ್ನುವರು' ಎಂದು ಲಾಲಾಜಿ ಹೇಳುತ್ತಿದ್ದರು."

೧೪

"ಲಾಲಾಜಿಯವರು ಯಾವಾಗಲೂ ಹೀಗೆ ಹೇಳುತ್ತಿದ್ದರು: 'ನೋಡಿ, ಪ್ರತಿಯೊಬ್ಬ ಮನುಷ್ಯನಲ್ಲಿಯೂ ಒಂದಿಲ್ಲೊಂದು ದೌರ್ಬಲ್ಯವಿದ್ದೇ ಇರುತ್ತದೆ. ನಮ್ಮ ದೃಷ್ಟಿ ಅವರ ಸದ್ಗುಣಗಳ ಕಡೆಗೆ ಹರಿಯಬೇಕಲ್ಲದೆ ದೌರ್ಬಲ್ಯಗಳ ಕಡೆಗಲ್ಲ' ನಾನಂತೂ ಲಾಲಾಜಿಯವರ ಒಂದಾದರೂ ದೌರ್ಬಲ್ಯವನ್ನು ಕಾಣಲಿಲ್ಲ."

೧೫

“ಲಾಲಾಜಿಯವರು ಬಹಳ ಕಡಿಮೆ ಊಟ ಮಾಡುತ್ತಿದ್ದರು. ಅವರ ಹಸಿವು ತೀರ ಸ್ವಲ್ಪ. ಕೇವಲ ಎರಡು ರೊಟ್ಟಿಗಳನ್ನು ತಿಂದು ಇರುತ್ತಿದ್ದರು. ಅವರಲ್ಲಿ ಎಷ್ಟೋ ವಿಷಯಗಳು ಅನುಕರಣೀಯವಾಗಿದ್ದರೂ ಇದನ್ನೇ ನಾನು ಅನುಕರಣ ಮಾಡಿದೆ. ಲಾಲಾಜಿಯವರಲ್ಲಿ ಒಂದಾದರೂ ದೋಷವಿದ್ದಿಲ್ಲ. ಅವರು ಸದ್ಗುಣಗಳ ಖನಿಯಾಗಿದ್ದರೂ ಅವರ ಒಂದೇ ಒಂದು ಗುಣವನ್ನಾದರೂ ನಾನು ಅನುಕರಣ ಮಾಡಲಿಲ್ಲವಲ್ಲ, ಎಂದು ಒಂದು ದಿನ ತುಂಬ ದುಃಖವಾಯಿತು. ಆದರೆ ಈ ವಿಚಾರ ತಲೆಯಲ್ಲಿ ಬರುತ್ತಲೇ ಮೇಲಿನಿಂದ ಒಂದು ಧ್ವನಿ ಹೀಗೆ ಕೇಳಿಬಂದಿತು : 'ಇದುವರೆಗೆ ಯಾರೂ ಮಾಡದಿದ್ದ ಲಯಾವಸ್ಥೆಯ ಅನುಕರಣವನ್ನು ನೀನು ಮಾಡಿರುವಿಯಲ್ಲ.”

೧೬

“ಲಾಲಾಜಿಯವರ ಒಂದು ಅಸಾಧರಣ ಯೋಗ್ಯತೆಯೆಂದರೆ ಪ್ರಶ್ನೆಗಳಿಗೆ ಉತ್ತರಕೊಡುವ ಅವರ ಅನನುಕರಣೀಯ ರೀತಿ. ಹಳ್ಳಿಗರಿಗೆ ಹಳ್ಳಿಯ ಭಾಷೆಯಲ್ಲಿಯೂ ವಿದ್ವಾಂಸರಿಗೆ ವಿದ್ವತ್ಪೂರ್ಣ ಶೈಲಿಯಲ್ಲಿಯೂ ತಿಳಿಸಿಕೊಡುತ್ತಿದ್ದರು. ಸಮಸ್ಯೆಗಳನ್ನು ಅತ್ಯಂತ ಲೀಲಾಜಾಲವಾಗಿ ಮತ್ತು ಸ್ವಾರಸ್ಯಮಯವಾಗಿ ಬಿಡಿಸಿ ಹೇಳುತ್ತಿದ್ದರು.”

# ಇತರ ಸಂಕೀರ್ಣ ವಿಷಯಗಳು

೧

ನಮ್ಮ ತಂದೆಯವರಿಗೆ ನಾನು ಮಾಡುತ್ತಿದ್ದ ಧ್ಯಾನಾದಿಗಳು ಸೇರುತ್ತಿರಲಿಲ್ಲ. ಇಂಥವನ್ನೆಲ್ಲ ಮುಪ್ಪಿನ ಕಾಲದಲ್ಲಿ ಮಾಡಬೇಕೆಂದು ಅವರು ಹೇಳುತ್ತಿದ್ದರು. ನನಗೆ ಕೆಲವು ಸ್ತೋತ್ರಗಳನ್ನೂ, ಗಾಯತ್ರೀ ಮಂತ್ರವನ್ನೂ ಕಲಿಸಿದ್ದರು. ಅವಿಷ್ಟನ್ನೇ ನಾನು ಪಠನಮಾಡಿದರೆ ಸಾಕೆಂದು ಅವರು ಭಾವಿಸಿದರು. ಆದರೆ ಈ ಅಭಿಪ್ರಾಯ ತಪ್ಪು. ಮುಪ್ಪಿನ ಕಾಲದಲ್ಲಿ ಮನುಷ್ಯನಿಗೆ ತನ್ನ ವಿಚಾರಗಳ ಮೇಲೆ ನಿಯಂತ್ರಣವುಳಿಯುವುದಿಲ್ಲ. ಅವುಗಳ ಒತ್ತಡವನ್ನು ತಡೆಯಲು ಅಸಮರ್ಥನಾದಾಗ ಅವನು ಅಶಾಂತಿಯಿಂದ ಒದ್ದಾಡುತ್ತಾನೆ. ಆದುದರಿಂದ ಚಿಕ್ಕಂದಿನಿಂದಲೇ ಆಧ್ಯಾತ್ಮಿಕ ತರಬೇತಿ ಕೊಡಬೇಕೆಂದು ನನ್ನ ಅಭಿಪ್ರಾಯ.

ನಮ್ಮ ತಂದೆಯವರ ಇನ್ನೊಂದು ವಿಚಾರವೆಂದರೆ, ಯೋಗ್ಯ ಗುರುವಿಲ್ಲದೆ ಪ್ರಾಣಾಯಾಮವನ್ನು ಮಾಡಬಾರದೆಂಬುದು, ಇದು ತೀರ ನಿಜ.

೨

**Philosophy is thinking; Yoga is doing; and Realisation is undoing.**

೩

ಸಾಕ್ಷಾತ್ಕಾರದ ಒಂದು ಮುಖ್ಯ ಲಕ್ಷಣವೆಂದರೆ ಸಾಕ್ಷಾತ್ಕಾರ ಹೊಂದಿದವನಲ್ಲಿ ಸ್ವಾರ್ಥದ ಲವಲೇಶವೂ ಇರುವುದಿಲ್ಲ. ಏಕೆಂದರೆ ಆತನಲ್ಲಿ ತನ್ನತನ (self)ವು ಸಂಪೂರ್ಣ ಇಲ್ಲದಂತಾಗಿರುತ್ತದೆ.

೪

ಸಚ್ಚಿದಾನಂದವು ಮಗುವಿನ ಕೈಯಲ್ಲಿಯ ಆಟಿಕೆಯಿದ್ದಂತೆ, ನಾವು ಅದಕ್ಕಿಂತ ಬಹುದೂರ ಮುಂದೆ ಹೋಗುವೆವು.

೫

ಮಾತನಾಡದಿರುವುದು ನಿಜವಾದ ಮೌನವಲ್ಲ, ಅದರಿಂದ ಯಾವ ಲಾಭವೂ ಆಗುವುದಿಲ್ಲ. ನಮ್ಮ ವಿಚಾರಗಳು, ಇಂದ್ರಿಯಗಳು ಮೌನ ತಾಳಬೇಕು. ಅದೇ ನಿಜವಾದ ಮೌನ.

೬

ಅವತಾರಿಗಳೆಲ್ಲ ಮಹಾಮಾಯಾಮಂಡಲದಿಂದ ಬರುವರು. ಅವರು ವಿಭೂತಿ ಪುರುಷರಿಗಿಂತ (Special Personalities) ಹೆಚ್ಚಿನ ಶಕ್ತಿಯನ್ನೇನೋ ತರುವರು. ಆದರೆ ಮೂಲದವರೆಗೆ ಮುಟ್ಟಿಸಲು ವಿಭೂತಿಪುರುಷರೇ ಸಮರ್ಥರು. ಅವತಾರಿಗಳಿಗೆ ಇದು ಸಾಧ್ಯವಿಲ್ಲ.

೭

'ರಾಮಚಂದ್ರ ಕೀ ಜಯ'; 'ಶಂಕರಜೀ ಕೀ ಜಯ' ಎಂದೆಲ್ಲ ಜನ ಹೇಳುವರು. ಅದರರ್ಥವೇನು ಗೊತ್ತೆ ? 'ಭಗವಂತನ ಇಚ್ಛೆಯೇ ಗೆಲ್ಲಲಿ; ಆತನ ಇಚ್ಛೆಯಂತೆಯೇ ಎಲ್ಲವೂ ನಡೆಯಲಿ' ಎಂಬುದೇ ಅದರ ಅರ್ಥ. ಇನ್ನು, ಭಗವಂತನ ಇಚ್ಛೆಯೇನಿರಬಹುದು ? ನಾವು ನಮ್ಮ ಮೂಲ ಸ್ವರೂಪವನ್ನು ಹೊಂದಬೇಕೆಂಬುದೇ ಆತನ ಇಚ್ಛೆ.

೮

ಅಹಂಕಾರವನ್ನು ಕುರಿತು ಬಹಳಷ್ಟು ಆಲೋಚಿಸಬಾರದು. ಯಾವ ವಿಷಯವೇ ಆಗಲಿ, ಅದರ ಬಗ್ಗೆ ನೀವು ಯೋಚಿಸಿದಷ್ಟೂ ಅದು ಹೆಚ್ಚು ಆಳವಾಗಿ ಚಿತ್ತದಲ್ಲಿ ಬೇರು ಬಿಡುವುದು; ಮತ್ತು ಬಲ ಪಡುವುದು. ಈ ಪ್ರಕಾರ, ನೀವು ತೊಲಗಿಸಬೇಕೆಂಬ ವಿಷಯಕ್ಕೆ ಮತ್ತಷ್ಟು ಪುಷ್ಟಿ ದೊರೆಯುವುದು. ಆದುದರಿಂದ ಅದನ್ನು ದುರ್ಲಕ್ಷಿಸುವುದೇ ಉತ್ತಮ ಉಪಾಯ.

೯

ಧ್ಯಾನ ಹಾಗು ಏಕಾಗ್ರತೆಗಳಲ್ಲಿ ವ್ಯತ್ಯಾಸವೇನು ? ಧ್ಯಾನದಲ್ಲಿ ಯಾವುದಾದರೊಂದು ವಸ್ತುವಿನ ಪ್ರತೀಕ್ಷೆಯಿರುತ್ತದೆ. ಏಕಾಗ್ರತೆಯಲ್ಲಿ ಪ್ರತೀಕ್ಷೆಯಿರುವುದಿಲ್ಲ. ಯಾವುದನ್ನು ನಾವು ಪ್ರತೀಕ್ಷಿಸುವುದಿಲ್ಲವೋ, ಬೇಡುವುದಿಲ್ಲವೋ ಅದು ನಮಗೆ ದೊರೆಯುವುದಾದರೂ ಹೇಗೆ ?

೧೦

ಹೃದಯವು ತನ್ನನ್ನು ತಾನು ಪೋಷಿಸಿಕೊಳ್ಳಲು ವಿದ್ಯುತ್ತನ್ನು ಹುಟ್ಟಿಸುವುದು. ಅದರಂತೆ ವಿಚಾರಗಳಾದರೂ ತಮ್ಮ ಪೋಷಣೆಗಾಗಿ ಸ್ವಲ್ಪ ವಿದ್ಯುತ್ತನ್ನು ಹುಟ್ಟಿಸುವುವು. ಹೀಗೆ ನಮ್ಮೊಳಗೆ ವಿಚಾರಗಳ ಸಂಗ್ರಹವಾದಾಗ ಅವುಗಳೊಂದಿಗೆ ವಿದ್ಯುತ್ತೂ ಸಂಗ್ರಹವಾಗುವುದು. ಧ್ಯಾನದಿಂದ ನಮ್ಮ ಹೃದಯದಲ್ಲಿ ನಿರ್ವಾತ ಪ್ರದೇಶವುಂಟಾಗುವುದು. ಆಗ ವಿಚಾರಗಳು ತಮ್ಮ ಸ್ಥಾನಬಿಟ್ಟು ಕದಲುವುವು. ಅವು ಸ್ಥಾನ ಭ್ರಷ್ಟವಾದಾಗ ಅವುಗಳಿಗೆ ವಿದ್ಯುತ್ತು ದೊರೆಯದೆ ಹೋಗಿ ಅವು ದುರ್ಬಲವಾಗ ತೊಡಗುವುವು. ಆದರೆ ದುರ್ದೈವವೆಂದರೆ, ನಾವೇ ಅವುಗಳ ಬಗ್ಗೆ ಮತ್ತೆ ಮತ್ತೆ ಆಲೋಚಿಸಿ ಅವನ್ನು ಪ್ರಬಲಗೊಳಿಸುವೆವು.

೧೧

ನಾವು ವಸ್ತುಗಳನ್ನು ಮೊದಲ ಸಲ ನೋಡಿದಾಗ ನಮ್ಮೊಳಗೆ ತೀರ ಹಗುರವಾದ ಸಂಸ್ಕಾರವುಂಟಾಗುವುದು. ಅವನ್ನು ಪುನಃ ಪುನಃ ನೋಡಿದರೆ ಸಂಸ್ಕಾರವು ಬಲಗೊಳ್ಳುವುದು.

೧೨

ಯಾರಾದರೂ 'ಸಚ್ಚಿದಾನಂದ'ದ ಪ್ರಶಂಸೆ ಮಾಡಿದರೆ ನನಗೆ ಮೈಯೆಲ್ಲ ಉರಿದು ಹೋಗುವುದು. ಇದು, ಸಗಣಿಯನ್ನು ತಿಂದು ಜೀವಿಸುತ್ತ ಅದರ ರುಚಿಯನ್ನು ವರ್ಣಿಸಿದಂತೆ. ಲಯಾವಸ್ಥೆಯ ಮುಂದೆ ಸಚ್ಚಿದಾನಂದವು ಏನೂ ಅಲ್ಲ.

೧೩

ಪ್ರಕಾಶವು ನಮ್ಮ ಹಾಗು ಭಗವಂತನ ನಡುವೆ ಒಂದು ತೆರೆ ಮಾತ್ರ. ಅದರಾಚೆಗೆ ನಮ್ಮ ದೃಷ್ಟಿ ಹೋದಾಗಲೇ ಭಗವದ್ದರ್ಶನ ವಾಗುವುದು. ಆತನ ದರ್ಶನ ಪಡೆಯಬೇಕಾದರೆ ನಾವು ಪ್ರಕಾಶವನ್ನು ದಾಟಿ ಹೋಗಲೇಬೇಕು.

೧೪

ಜಾಣರೆನ್ನಿಸಿಕೊಳ್ಳುವವರು ಯೋಚಿಸಿ ಯೋಚಿಸಿ ವಿಚಾರಗಳ ಅನೇಕ ಪ್ರಣಾಲಿ (channels)ಗಳನ್ನು ಮಾಡಿಕೊಳ್ಳುವರು. ಮೂರ್ಖನಾದರೋ ಒಂದೇ ಪ್ರಣಾಲಿಯನ್ನು ಮಾಡಿಕೊಳ್ಳುವನು. ನಿಜವಾಗಿ ನೋಡಿದರೆ ಮೂರ್ಖನೇ ಜಾಣ.

೧೫

ನಾನು ಯಾವಾಗಲೂ ಸ್ವತಂತ್ರ ವಿಚಾರಿ. ಯಾರಾದರೂ ಶಾಸ್ತ್ರಗಳ ಬಗೆಗೆ ಪ್ರಶ್ನೆ ಮಾಡಿದರೆ ನಾನು ಬಹುಶಃ ಉತ್ತರ ಕೊಡಲಾರೆ. ಶಾಸ್ತ್ರಗಳ ಆಧಾರದಿಂದ ನನ್ನ ಸ್ವಾತಂತ್ರ್ಯವನ್ನೇ ಕಸಿದುಕೊಂಡಮೇಲೆ ನಾನು ಉತ್ತರ ಕೊಡುವುದಾದರೂ ಹೇಗೆ?

೧೬

ಯಾವನು ತನ್ನನ್ನು ತಾನೇ ಮರೆತಿರುವನೋ ಅವನೇ ನಿಜಾರ್ಥದಲ್ಲಿ ಭಗವಂತನನ್ನು ನೆನೆಯಬಲ್ಲ. ನಾನಂತೂ, ಬಂಧು, ಆಗಾಗ ನಾಸ್ತಿಕನಾಗುತ್ತಿರುತ್ತೇನೆ.

ನಮಗೆ ಕೇವಲ ಹಸಿವೆ-ನೀರಡಿಕೆಗಳನ್ನು ತಣಿಸುವುದಷ್ಟೇ ಗೊತ್ತು. ಭಗವಂತನ ವಿಷಯವಾಗಿ ನಮ್ಮಲ್ಲಿ ಘೋರ ಅಜ್ಞಾನವು ಮನೆಮಾಡಿದೆ.

೧೭

ಮನ, ಬುದ್ಧಿ, ಚಿತ್ತ, ಅಹಂಕಾರ (ಅಂತಃಕರಣ ಚತುಷ್ಟಯ) ಇವು ಪ್ರಜ್ಞೆಯ ಘಟಕಗಳು.

೧೮

ಮೋಕ್ಷವು ಬಹಳ ಅಗ್ಗದ ವಸ್ತು. ಜನರು ಅದನ್ನು ದಾಟಿ ಮುಂದೆ ಹೋಗಬಯಸುವುದಿಲ್ಲ. ಅವರ ದೃಷ್ಟಿ ಮೇಲಕ್ಕೆ ಹೋಗುವುದೇ ಇಲ್ಲ.

೧೯

ಪ್ರಾಚೀನ ರಾಜ್ಯಗಳ ಭಗ್ನಾವಶೇಷಗಳು ನಮಗೆ ವೈರಾಗ್ಯದ ಪಾಠ ಕಲಿಸುವ ಉತ್ತಮ ಸಾಧನಗಳೆಂದು ಹೇಳಬಹುದು. ಸ್ವಲ್ಪ ವಿಚಾರಿಸಿ ನೋಡಿರಿ; ಒಂದಾನೊಂದು ಕಾಲದಲ್ಲಿ ಈ ಸ್ಥಳಗಳಲ್ಲಿ ಅರಸರು ಅದೆಷ್ಟು ವೈಭವ ಹಾಗೂ ದರ್ಪಗಳಿಂದ ಮೆರೆದಿರಬಹುದು! ಅದೆಷ್ಟು ಜನಸಂದಣಿ, ಗಡಿಬಿಡಿ ಇದ್ದಿರಬಹುದು! ಇದೆಲ್ಲವೂ ನಮ್ಮ ಜೀವನ ಎಷ್ಟು ಟೊಳ್ಳು, ಅಹಂಕಾರ ಎಷ್ಟು ವ್ಯರ್ಥ ಎಂಬುದನ್ನು ತೋರಿಸಿಕೊಡುವುದಿಲ್ಲವೆ ?

೨೦

ಯಾರಲ್ಲಿ ಪ್ರಾಂತೀಯ ಹಾಗೂ ಜಾತೀಯ ಮನೋಭಾವಗಳು ಬೇರೂರಿರುವುವೋ ಅವರು, ಲೌಕಿಕ ವಿಷಯಗಳಲ್ಲಿ ಸಹ ಮುಂದುವರಿಯಲಾರರು. ಅಧ್ಯಾತ್ಮವಂತೂ ದೂರದ ಮಾತಾಯಿತು. ಒಮ್ಮೆ ನನ್ನ ಕಡೆಗೆ ಒಬ್ಬ ಮೌಲ್ವಿ ಸಾಹೇಬರು ಬಂದರು. ಅವರಿಗೆ ತಮ್ಮ ಗುರುವಿನಿಂದ ಯಾವ ಹೆಚ್ಚಿನ ಸಹಾಯವೂ ಸಿಗದೆ ಅವರ ಆಧ್ಯಾತ್ಮಿಕ ಪ್ರಗತಿ ಕುಂಠಿತವಾಗಿದ್ದಿತು. ನಾನು ಧ್ಯಾನದ ಒಂದೇ ಬೈಠಕದಲ್ಲಿ ಅವರ ಆತಂಕಗಳನ್ನೆಲ್ಲ ದೂರಮಾಡಿ ಪ್ರಗತಿಗೆ ಅವಕಾಶ ಮಾಡಿಕೊಟ್ಟೆ, ಆದರೆ ಆ ಮನುಷ್ಯ ಮತ್ತೊಮ್ಮೆ ನನ್ನ ಕಡೆಗೆ ಸುಳಿಯಲೇ ಇಲ್ಲ. ಮತಾಂಧತೆಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ ?

೨೧

ಆಧ್ಯಾತ್ಮಿಕ ಪ್ರಗತಿಗಾಗಿ ಮೊಟ್ಟಮೊದಲು ಗುರಿಯು ಯಾವಾಗಲೂ ನಮ್ಮ ಕಣ್ಣೆದುರಿಗೆ ಇರಬೇಕು. ಎರಡನೆಯದಾಗಿ,

ಸಾಧನದಲ್ಲಿ ನಮಗೆ ಅಭಿರುಚಿಯಿರಬೇಕು. ಆ ಬಗ್ಗೆ ನಾವು ಚಿಂತೆಯನ್ನು ಹುಟ್ಟಿಸಿಕೊಳ್ಳಬೇಕು. ಯಾರ ಉದ್ದೇಶವು ಕೇವಲ ಪ್ರಾಪಂಚಿಕ ತೊಂದರೆಗಳಿಂದ ಪಾರಾಗುವುದಷ್ಟೇ ಇದೆಯೋ ಅಂಥವರು ಬ್ರಹ್ಮವಿದ್ಯೆಗೆ ಅರ್ಹರಲ್ಲ. ಅಧ್ಯಾತ್ಮವು ದುರ್ಬಲರ ಹಾಗು ಮೂರ್ಖರ ಕ್ಷೇತ್ರವಲ್ಲ.

೨೨

ಯಾವ ವಸ್ತುವಿನಿಂದ ನಮ್ಮ ಉನ್ನತಿಯಾಗುವುದೋ ಅದೇ ವಸ್ತುವಿನಿಂದ ನಮ್ಮ ಅವನತಿಯೂ ಆಗುವುದು. ಭಗವಂತನ ರಾಜ್ಯದಲ್ಲಿ ಹೀಗೆಯೇ ನಿಯಮವಿದೆ.

೨೩

ಉನ್ನತ ಸ್ತರಗಳಲ್ಲಿ ನಮ್ಮ ವಿಚಾರಗಳು ತಮ್ಮ ಗಾಢತೆಯನ್ನು (intensity) ಕಳೆದುಕೊಳ್ಳುವುವು. ನಾವು ದೇವರಿಂದ ದೂರವಿರುವವರೆಗೆ ಮಾತ್ರ ಆತನ ಸ್ಮರಣೆ, ಭಕ್ತಿಗಳಿರುವುವು. ಆತನ ಮನೆಯನ್ನು ಮುಟ್ಟಿದ ಮೇಲೆ ಇವೆಲ್ಲ ಮಾಯವಾಗುವುವು. ಈಗ, ನೀವು ನಿಮ್ಮ ತಂದೆಯಿಂದ (ಅಥವಾ ಮತ್ತಾರಾದರೂ ಸಮೀಪದ ಸಂಬಂಧಿಕರಿಂದ) ದೂರವಿರುವಿರೆಂದು ತಿಳಿಯಿರಿ. ದೂರವಿರುವಷ್ಟು ಕಾಲ ನೀವು ಅವರನ್ನು ಬಹಳ ನೆನೆಸುವಿರಿ. ಒಮ್ಮೆ ಮನೆಗೆ ಬಂದುಬಿಟ್ಟರೆ ಯಾವ ಹೆಚ್ಚಿನ ಆಕರ್ಷಣೆಯೂ ಇಲ್ಲದೆ ಎಂದಿನಂತೆ ಇದ್ದುಬಿಡುವಿರಿ.

೨೪

ಆಧ್ಯಾತ್ಮಿಕ ಕ್ಷೇತ್ರದಲ್ಲಿ ವಿಚಾರ ಹಾಗು ಆಚರಣೆ – ಇವು ರಥದ ಎರಡು ಗಾಲಿಗಳಿದ್ದಂತೆ. ಇವು ಜೊತೆ ಜೊತೆಗೇ ನಡೆಯದಿದ್ದರೆ ಪ್ರಗತಿಯು ಅಸಂಭವ.

೨೫

ಲೋಕದ ಜನರು ಯೋಗಿಯ ಸಾಮಾನ್ಯ ವ್ಯವಹಾರವನ್ನೇ ಪರೀಕ್ಷಿಸುವರು. ಆತನು ಸಮಯಕ್ಕೆ ಸರಿಯಾಗಿ ಊಟಮಾಡುವನೋ

ಇಲ್ಲವೋ ? ಆತನು ಎಂಥ ಬಟ್ಟೆ ಉಡುವನು ? ಅಚ್ಚುಕಟ್ಟಾಗಿ ಉಡುವನೋ ಇಲ್ಲವೋ ? ಸರ್ವಸಾಮಾನ್ಯವಾದ ಚಟಗಳೇನಾದರೂ ಆತನಲ್ಲಿವೆಯೋ ಹೇಗೆ ? ಇತ್ಯಾದಿ. ಈ ಎಲ್ಲ ಅಚ್ಚುಕಟ್ಟುತನದಲ್ಲಿ ಸ್ವಲ್ಪ ವ್ಯತ್ಯಾಸವಾದರೆ ತಪ್ಪೇನು ? ಸಂತನು ಇವೆಲ್ಲವುಗಳನ್ನೂ ಮೀರಿ ಮೇಲಿನ ಮಟ್ಟದಲ್ಲಿರುವನು.

೨೬

ಮಾಡುವವರು ನೀವು ಎಂಬುದನ್ನು ಮರೆತು ಕಾರ್ಯ ಮಾಡಿರಿ. ಆಗ ನಿಮ್ಮ ಎಲ್ಲ ಕರ್ಮವೂ ಅಕರ್ಮವಾಗುವುದು. ಯಾವುದೂ ಬಂಧನಕ್ಕೆ ಕಾರಣವಾಗಲಾರದು.

೨೭

ಪ್ರಕಾಶವು ಸಾಧನದಲ್ಲಿ ಆಸಕ್ತಿ-ಶ್ರದ್ಧೆಗಳನ್ನು ಹುಟ್ಟಿಸಲು ಸಹಾಯಕವಾದರೂ ಅದೇ ಗುರಿಯಲ್ಲ. ಒಂದು ರೀತಿಯಿಂದ ಅದು ಅಂತಿಮ ಸಾಕ್ಷಾತ್ಕಾರಕ್ಕೆ ಬಾಧಕವೇ ಆಗಿದೆ.

೨೮

ತೀರ ಸರಳವಾದ ವಿಷಯವನ್ನು ತಿಳಿದುಕೊಳ್ಳುವುದು ಬಲುಕಠಿಣ. ಅದರ ಸರಳತನವೇ ಒಂದು ಆವರಣವಾಗಿಬಿಡುತ್ತದೆ.

೨೯

ಜನರು ಪರಂಪರೆಯನ್ನು ವಿಚಾರಮಾಡದೆ ಒಪ್ಪಿಬಿಡುವರು. ನಮ್ಮ ಪೂರ್ವಜರಿಗೆ ಗೌರವ ಕೊಡೋಣ. ಆದರೆ ಅವರು ಆಚರಿಸಿದುದನ್ನೆಲ್ಲ ವಿಮರ್ಶಾದೃಷ್ಟಿಯಿಂದ ವಿಚಾರಿಸದೆ ನಾವು ಅದನ್ನೇ ಆಚರಿಸಬಾರದು. ಯಾರೋ ಒಬ್ಬರು ಒಳ್ಳೆಯ ಆಢ್ಯತೆಯಿಂದ ನನ್ನನ್ನು ಕೇಳಿದರು : 'ಮಂದಿರಗಳನ್ನು ಕಟ್ಟಿ ಮೂರ್ತಿಪೂಜೆಯನ್ನು ರೂಢಿಯಲ್ಲಿ ತಂದ ನಮ್ಮ ಹಿರಿಯರು ಮೂರ್ಖರಿದ್ದರೇನು ?' ನಾನು ತಡೆಯಬೇಕೆಂದರೂ ನನ್ನ ಬಾಯಿಂದ ತತ್‌ಕ್ಷಣ, 'ಅವರು ಮೂರ್ಖರಿದ್ದಿಲ್ಲವೆಂದು ನಿಮ್ಮ ಹತ್ತಿರ ಪುರಾವೆಯೇನಿದೆ ?' ಎಂಬ ಶಬ್ದಗಳು ಹೊರಬಿದ್ದವು. ಪಾಪ, ಅವರು ನಿರುತ್ತರರಾದರು.

ನಮ್ಮ ಪೂರ್ವಜರು ಯಾವುದೋ ಕಾರಣದಿಂದ ಜೈಲಿಗೆ ಬಿದ್ದಿದ್ದರೆಂದು ತಿಳಿಯಿರಿ, ನಾವೂ ಅವರಂತೆ ಜೈಲನ್ನನುಭವಿಸಬೇಕೆಂದು ಇದರರ್ಥವೇನು ? ಸಮಸ್ಯೆ ನಮ್ಮದು; ನಮ್ಮ ಪೂರ್ವಜರದಲ್ಲ. ನಮ್ಮ ಸಮಸ್ಯೆಯನ್ನು ನಮಗೆ ಸಮರ್ಪಕ ಕಾಣುವ ರೀತಿಯಲ್ಲಿ ಬಿಡಿಸಬೇಕು.

೩೦

ಸೂಫಿ ಸಂತನೊಬ್ಬನ ಹತ್ತಿರ ಹಿಂದೂ ಸಾಧಕನೊಬ್ಬನು ಅಧ್ಯಾತ್ಮ ವಿದ್ಯೆಯನ್ನು ಕಲಿಯಲು ಹೋದ. ಸಾಧಕನು ತನ್ನ ಶಿಖೆಯನ್ನು ಕತ್ತರಿಸಿಕೊಂಡು ಯಜ್ಞೋಪವೀತವನ್ನು ಹರಿದೊಗೆದು ಬಂದರೆ ಮಾತ್ರ ಆತ್ಮವಿದ್ಯೆಯನ್ನು ಕಲಿಸುವುದಾಗಿ ಆ ಸಂತನು ಹೇಳಿದನಂತೆ. ಇದರಿಂದ ಏನು ತಿಳಿದು ಬರುವುದು ಗೊತ್ತೆ ? ಅಂಥವರು ಅನಂತದವರೆಗೆ ಮುಟ್ಟಿಯೆ ಇಲ್ಲ. ಅಲ್ಲಿಯವರೆಗೆ ಮುಟ್ಟಿದವರು ಇಂಥ ಕ್ಷುಲ್ಲಕ ಮಾತುಗಳನ್ನಾಡುವುದೇ ಇಲ್ಲ.

೩೧

ಒಂದು ಕಾಲಕ್ಕೆ ಒಂದೇ ಸಾಧನೆಯನ್ನು ಅನುಷ್ಠಾನ ಮಾಡಬೇಕು. ಏಕಕಾಲಕ್ಕೆ ಅನೇಕ ವಿಧದ ಸಾಧನೆಗಳನ್ನನುಸರಿಸುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಯಾವುದೇ ಒಂದು ಸಾಧನೆಯಿಂದ ಪ್ರಗತಿಯು ಕಂಡು ಬರದಿದ್ದರೆ ಅದನ್ನು ಬಿಟ್ಟುಕೊಡುವುದೇ ಮೇಲು. ಸಾಧನೆಗಳ ಕಲಸುಮೇಲೋಗರ ಉಪಯೋಗವಿಲ್ಲ.

೩೨

ಎಲ್ಲ ಧರ್ಮಗಳ ತಳಹದಿ ಪ್ರಲೋಭನ ಮತ್ತು ಭಯ – ಸ್ವರ್ಗದ ಪ್ರಲೋಭನ ಹಾಗು ನರಕದ ಭಯ. ಎಲ್ಲಿಯವರೆಗೆ ನಮ್ಮಲ್ಲಿ ಪ್ರಲೋಭನ ಮತ್ತು ಭಯಗಳು ನೆಲೆಸಿರುವುವೋ ಅಲ್ಲಿಯವರೆಗೆ ನಾವು ಸತ್ಯವಸ್ತುವಿನಿಂದ ತುಂಬ ದೂರವಿರುವೆವು. ಸತ್ಯ ವಸ್ತುವನ್ನು ಪಡೆಯಲು ನಾವು ಧರ್ಮಕ್ಕಿಂತ ಮೇಲೆ ಏರಬೇಕು.

೩೩

ಜನರು ಭಗವಂತನನ್ನೇನೋ ಪೂಜಿಸುವರು, ಆದರೆ ಭಗವಂತನಿಗೆ ಅವರು ಮಾಡುವ ಪೂಜೆಯ ಅರಿವೇ ಇಲ್ಲ.

೩೪

ವಿವಿಧತೆಯಲ್ಲಿ ಏಕಸೂತ್ರತೆಯೆಂದರೇನು ? ಸಿಂಧುವಿನಲ್ಲಿ ಬಿಂದುವಿರುವುದೆಂಬುದನ್ನು ಎಲ್ಲರೂ ಬಲ್ಲರು. ಆದರೆ ಬಿಂದುವಿನಲ್ಲಿ ಸಿಂಧುವಿರುವುದನ್ನು ಕ್ವಚಿತ್ತಾಗಿಯೆ ತಿಳಿದಿರುವರು. ಬಿಂದುವಿನಲ್ಲಿ ಸಿಂಧುವಿರುವುದೆಂಬುದನ್ನು ಅನುಭವಿಸಿದಾಗ ಮಾತ್ರ ವಿವಿಧತೆಯಲ್ಲಿ ಏಕಸೂತ್ರತೆಯ ಸಾಕ್ಷಾತ್ಕಾರವಾಗುವುದು.

೩೫

ಇಂದಿನ ನಮ್ಮ ಬೇರೆ ಬೇರೆ ಸಂಘಟನೆಗಳ ದೋಷವೇನು ? ನಾವು ನಮ್ಮ ಪರಿಮಿತಿ ಸಾಧನಗಳಿಂದ ಕೆಲಸ ಮಾಡುತ್ತಿದ್ದೇವೆ. ಅಪರಿಮಿತವಾದ ದೈವೀಶಕ್ತಿಯ ಅಸ್ತಿತ್ವವನ್ನು ಅರಿತು, ಅನುಭವಿಸುತ್ತ ಕಾರ್ಯ ಮಾಡಿದ್ದಾದರೆ ಸಣ್ಣತನ, ಕಲಹ, ದ್ವೇಷ ಮುಂತಾದ ಅವಗುಣಗಳು ಕಾಣಿಸಿಕೊಳ್ಳುವುದಿಲ್ಲ. ದೈವೀಶಕ್ತಿಯ ಅಸ್ತಿತ್ವದ ಮರೆವೇ ಎಲ್ಲ ಅನರ್ಥಗಳ ಮೂಲವಾಗಿವೆ.

೩೬

ಗುರುವನ್ನು ದೇವರೆಂದು ತಿಳಿಯಬೇಕೆಂದು ಶಾಸ್ತ್ರಗಳು ಹೇಳುವುವು. ಆದರೆ ನಾನು ಮಾತ್ರ ಗುರುವನ್ನು ಸೇವಕನೆಂದು ತಿಳಿಯಬೇಕೆಂದು ಹೇಳುವೆನು.

೩೭

ಸಂನ್ಯಾಸಿಗಳಲ್ಲಿ ಎರಡು ವಿಧ : ಸಂನ್ಯಾಸಿ ಹಾಗೂ ಸತ್ಯಾನಾಶಿ. ನೂರಕ್ಕೆ ತೊಂಬತ್ತೊಂಬತ್ತು ಜನ ಸತ್ಯಾನಾಶಿಗಳೇ ಕಾಣಸಿಗುವರು. ತಾವೂ ಸತ್ಯಾನಾಶವಾಗಿ ಜನರನ್ನೂ ಸತ್ಯಾನಾಶ ಮಾಡುವರು.

೩೮

ಕೆಲವರು ತಾವು ಮಾಡುವ ಪೂಜೆ-ಜಪಾದಿಗಳು ಯಾರಿಗೂ ಗೊತ್ತಾಗಬಾರದೆಂದು ಗೋಪ್ಯವಾಗಿಡುವರು. ಇದಂತೂ ನಾವೂ ಕಳ್ಳತನ ಮಾಡುವುದು ಯಾರಿಗೂ ತಿಳಿಯಬಾರದೆಂದಹಾಗಾಯಿತು. ಒಳ್ಳೆಯ ಕೆಲಸ ನಾಲ್ಕು ಜನರಿಗೆ ಗೊತ್ತಾಗಿ ಅವರೂ ಮಾಡತೊಡಗಿದರೆ ತಪ್ಪೇನು ?

೩೯

ಧಾರ್ಮಿಕ ಕಟ್ಟರತೆ ಆಧ್ಯಾತ್ಮಿಕ ಪ್ರಗತಿಗೆ ಬಹುದೊಡ್ಡ ಪ್ರತಿಬಂಧವಾಗಿದೆ. ಇದನ್ನು ನಾವು ಮುಸಲ್ಮಾನರಿಂದ ಕಲಿತುಕೊಂಡಿದ್ದೇವೆ. ಮುಸಲ್ಮಾನರಿಂದಲೂ ಬ್ರಿಟಿಷರಿಂದಲೂ ನಾವು ಯಾವ ಒಳ್ಳೆಯ ಗುಣಗಳನ್ನೂ ಕಲಿಯದೆ ದುರ್ಗುಣಗಳನ್ನು ಮಾತ್ರ ಕಲಿತೆವು.

೪೦

ಪವಾಡಗಳೆಂದರೆ ಈಶ್ವರನ ಮಾರ್ಗದಲ್ಲಿ ದಾರಿತಪ್ಪುವುದು. ಪವಾಡಗಳನ್ನು ಮಾಡುವವರು ಈಶ್ವರನವರೆಗೆ ಮುಟ್ಟಲಾರರು. ಈಶ್ವರನನ್ನು ಪಡೆದವರಲ್ಲಿ ಎಲ್ಲ ಪವಾಡಗಳೂ ಇರುತ್ತವೆ. ಆದರೆ ಪ್ರಸಂಗಾನುಸಾರ ಅವು ತಾವಾಗಿಯೆ ಪ್ರಕಟವಾಗುವುವು.

೪೧

ಕೆಲವರು ಕೇಳುವರು : 'ನಾವು ಗುರುವನ್ನು ಮಾಡಿಕೊಂಡ ನಂತರವೂ ನಮಗೆ ಕಷ್ಟಗಳೇಕೆ ಬರಬೇಕು ?' ಇದಕ್ಕೆ ನನ್ನ ಉತ್ತರ ಇದು : 'ನೀವು ಇದುವರೆಗೆ ಮಾಡಿದ ಕರ್ಮಗಳ ಹೊಣೆಯನ್ನು ಗುರುವಿಗೆ ಎಲ್ಲಿ ಒಪ್ಪಿಸಿದಿರಿ ? ಅವುಗಳ ಕರ್ತೃ ನೀವೇ ಎಂದ ಮೇಲೆ, ಅವುಗಳ ಫಲಗಳನ್ನೂ ನೀವೇ ಅನುಭೋಗಿಸಬೇಕು.'

೪೨

ಯಾರು ತಮ್ಮ ಹಾಗು ಶಿಷ್ಯರ ನಡುವೆ ಎಳ್ಳಷ್ಟೂ ಅಂತರವನ್ನಿಡುವುದಿಲ್ಲವೋ ಅವರೇ ಶ್ರೇಷ್ಠ ಗುರುಗಳೆನ್ನಿಸಿಕೊಳ್ಳಲು ಅರ್ಹರು.

೪೩

ಹಿಂದುಗಳ ಅಧಃಪತನದ ಕಾರಣವೆಂದರೆ ಸೋಮಾರಿತನ, ನಮ್ಮ ಬಡತನಕ್ಕೂ ಸೋಮಾರಿತನವೇ ಕಾರಣವಾಗಿದೆ.

೪೪

ಇಚ್ಛೆಯೆಂದು ಯಾವುದಕ್ಕೆ ಎನ್ನಬೇಕು ? ಯಾವುದರಲ್ಲಿ 'ಅಹಂ'ಕಾರ, 'ಮಮ'ಕಾರಗಳಿರುವುವೋ ಅದೇ ಇಚ್ಛೆಯೆನಿಸುವುದು. ಹಸಿವು–ನೀರಡಿಕೆಗಳಲ್ಲಿ 'ಅಹಂ'ಕಾರ, 'ಮಮ'ತ್ವಗಳಿರುವುದಿಲ್ಲವಾದ ಕಾರಣ ಅವು ಇಚ್ಛೆಗಳೆನಿಸುವುದಿಲ್ಲ. ಅದರಂತೆಯೆ ಭಗವತ್‌ಪ್ರಾಪ್ತಿಯೂ ಇಚ್ಛೆಯಲ್ಲ. ಅವೆಲ್ಲ ಕರ್ತವ್ಯಗಳು. ಕರ್ತವ್ಯಗಳಿಗೆ ಇಚ್ಛೆಗಳೆನ್ನಲು ಬರುವುದಿಲ್ಲ.

೪೫

ಹಠಯೋಗವೆಂದರೆ ದೇವರಿಗಾಗಿ ಮೂಗನ್ನು ಕೊಯ್ದುಕೊಳ್ಳುವುದು. ಇದರಿಂದ ಎಂದಾದರೂ ದೇವರು ಸಿಗುವನೇ ?

೪೬

ಭಗವಂತನ ಮಾರ್ಗದಲ್ಲಿ ನಾವು ಮುನ್ನಡೆಯುವಾಗ ಹಾನಿಯು ಲಾಭವಾಗಿ ಮಾರ್ಪಡುವುದು.

೪೭

ಯಾವುದಾದರೊಂದು ರಾಷ್ಟ್ರದ ಅಧಃಪತನವಾಗ ಬೇಕಾದರೆ ಮೊಟ್ಟ ಮೊದಲು ಜನರ ವಿವೇಕ ನಷ್ಟವಾಗುವುದು. ಅನಂತರ ಅವರಲ್ಲಿ ಭಯವು ಪ್ರವೇಶಿಸುವುದು.

೪೮

ಕೊನೆಯೆಂಬುದರ ಕೊನೆಯೆ ಅನಂತ.

೪೯

ನಿಮ್ಮೊಳಗೆ ಸುಳಿಯುವ ಕೆಟ್ಟ ವಿಚಾರಗಳನ್ನು ತಿರಸ್ಕರಿಸುವುದರಿಂದ ನಿಮ್ಮಲ್ಲಿ ತಿರಸ್ಕಾರದ ಬೀಜವನ್ನು ಬಿತ್ತಿದಂತಾಗುವುದು. ಅದು ಧ್ಯಾನದಲ್ಲಿ ಮತ್ತಷ್ಟು ದೃಢವಾಗುವುದು. ಆದುದರಿಂದ ಅಂಥ ವಿಚಾರಗಳ ಬಗೆಗೆ ಲಕ್ಷ್ಯಕೊಡದಿರುವುದೇ ಒಳ್ಳೆಯದು.

೫೦

ಕೈದಿಯೊಬ್ಬನು ಕಾರಾಗೃಹದಲ್ಲಿ ಬಂಧಿತನಾಗಿದ್ದರೆ ಒಬ್ಬ ಅರಸನು ತನ್ನ ರಾಜ್ಯದಲ್ಲಿ ಬಂದಿಯಂತಿರುವನು. ಅದರಂತೆ ಯೋಗಿಯು ಅನಂತದಲ್ಲಿ ಸೆರೆಯಾಗಿರುವನು. ಈ ಅನಂತದ ಕಲ್ಪನೆಯಿಂದಲೂ ಮಿಂಚಿಹೋದವನೇ ನಿಜವಾದ ಮುಕ್ತನು.

೫೧

ಅಷ್ಟಗ್ರಹಯೋಗದ ಅನಿಷ್ಟ ನಿವಾರಣೆಗಾಗಿ ಕೆಲವರ್ಷಗಳ ಹಿಂದೆ ನಮ್ಮ ದೇಶದ ಸಾಧು-ಸಂನ್ಯಾಸಿಗಳು ವಿವಿಧ ಯಜ್ಞಗಳನ್ನು ಮಾಡಿ ಎಷ್ಟು ತುಪ್ಪ ಹಾಳುಮಾಡಿದರು. ಗೊತ್ತೆ? ನಮ್ಮ ಮಕ್ಕಳಿಗೆ ಅದನ್ನು ವರ್ಷಗಟ್ಟಲೆ ಪೌಷ್ಟಿಕ ಆಹಾರದಂತೆ ವಿತರಣ ಮಾಡಬಹುದಾಗಿತ್ತು.

೫೨

ನನಗೆ ನನ್ನ ಪೂಜ್ಯಗುರುಮಹಾರಾಜರಾದ ಲಾಲಾಜಿಯವರು ಎಷ್ಟು ಓದಿಸಿರುವರೋ ಅದನ್ನೇ ಬರೆಯುತ್ತಿದ್ದೇನೆ; ಅವರು ಏನನ್ನು ಕಲಿಸಿರುವರೋ ಅದನ್ನೇ ನುಡಿಯುತ್ತಿದ್ದೇನೆ.

೫೩

ಧ್ಯಾನವೆಂದರೆ ಒಂದು ಹೊಂಡದ ತಳದಲ್ಲಿ ಬಿದ್ದ ರತ್ನವನ್ನು ಹುಡುಕುವ ಕ್ರಿಯೆಯಿದ್ದಂತೆ.

೫೪

ನಿಮ್ಮ ಮನಸ್ಸಿನಿಂದ ಅನ್ಯರ ಬಗೆಗಿನ ದ್ವೇಷ, ತಿರಸ್ಕಾರಗಳನ್ನು ತೆಗೆದುಹಾಕಿಬಿಡಿರಿ; ವಿಶ್ವಪ್ರೇಮ ವಿಶ್ವಬಾಂಧವ್ಯಗಳು ತಾವಾಗಿಯೆ ನೆಲೆಸುವುವು.

೫೫

ಮೊಟ್ಟಮೊದಲು ನಿಮ್ಮ ವಿಚಾರಗಳ ಸೃಷ್ಟಿಯನ್ನು ನಾಶಮಾಡಿರಿ. ಆಗ ಉಳಿದುಕೊಳ್ಳುವುದು ಭಗವಂತನ ಸೃಷ್ಟಿ ಒಂದೇ.

೫೬

ಮಾನವನಲ್ಲಿಯ ಪಶುತ್ವವನ್ನು ಪಳಗಿಸಿ ಆತನಲ್ಲಿಯ ಸುಪ್ತ ಸೌಂದರ್ಯವನ್ನು ಜಾಗೃತಗೊಳಿಸುವ ಕ್ರಿಯೆಯೆ ಧ್ಯಾನ.

೫೭

ಪ್ರಜ್ಞೆಯ ಅತ್ಯುನ್ನತ ಸ್ತರದಲ್ಲಿ ನೆಲೆನಿಲ್ಲುವುದೇ ಆತ್ಮತತ್ತ್ವ.

೫೮

ದೇಹಬಿಟ್ಟ ಗುರುವಿಗಿಂತಲೂ ಜೀವಂತ ಗುರುವಿನ ಸಂಪರ್ಕವು ಸಾಧನೆಯಲ್ಲಿ ಬಹಳ ಸಹಾಯಕವಾಗುವುದು. ಒಂದು ವೇಳೆ (ನಿಮ್ಮ) ಗುರು (ಮುಕ್ತ) ವಿದೇಹಿಯಾಗಿದ್ದರೆ, ನಿಮ್ಮಲ್ಲಿ ಗ್ರಹಣಶಕ್ತಿಯುಂಟಾಗುವವರೆಗೂ ಆತನ ಕೃಪೆ ನಿಮ್ಮೊಳಗೆ ಹರಿದು ಬರಲಾರದು.

೫೯

ಅನೇಕ ಇಚ್ಛೆಗಳಿದ್ದರೂ ಮುಕ್ತನಾಗಲು ಸಾಧ್ಯ. ಯಾವ ಇಚ್ಛೆಯಿಲ್ಲದಿದ್ದರೂ ಬಂಧನದಲ್ಲಿಯೆ ಇರುವುದೂ ಸಾಧ್ಯ.

೬೦

'ಪ್ರಪಂಚದಲ್ಲಿ ಇಷ್ಟೆಲ್ಲ ಕಷ್ಟಗಳೇಕೆ ಇವೆ ?' ಎಂಬ ಪ್ರಶ್ನೆಯು ಅನೇಕರನ್ನು ಬಾಧಿಸುತ್ತಿದೆ. ಪ್ರಕಾಶವಿದ್ದಲ್ಲಿ ನೆರಳೂ ಇರುವುದು ಸ್ವಾಭಾವಿಕ ತಾನೆ ? ಕಷ್ಟಗಳು ದೀಪದ ಹಿಂದಿನ ಕತ್ತಲೆಯ ಭಾಗವಿದ್ದಂತೆ. ಅದನ್ನೇಕೆ ನಾವು ಗಮನಿಸಬೇಕು ? ಪ್ರಕಾಶವನ್ನು ನೋಡಿ ಸಂತೋಷಪಟ್ಟರಾಯಿತು.

ಇದೇ ಪ್ರಶ್ನೆಯನ್ನು ಒಬ್ಬರು ಲಾಲಾಜಿಯವರಿಗೆ ಕೇಳಿದರು. ಲಾಲಾಜಿಯವರು ಕೊಟ್ಟ ಉತ್ತರ ತುಂಬ ತಮಾಷೆಯದಾಗಿದ್ದಿತ್ತು. 'ದೇವರು ಪ್ರಪಂಚವನ್ನು ಸೃಷ್ಟಿಸುವಾಗ ನನ್ನನ್ನಾಗಲಿ ನಿಮ್ಮನ್ನಾಗಲಿ ಕೇಳದೆ ತಪ್ಪುಮಾಡಿದ. ಒಂದು ವೇಳೆ ಕೇಳಿದ್ದರೆ ಕಷ್ಟಗಳನ್ನು ಹುಟ್ಟಿಸಬೇಡವೆಂದು ಹೇಳುತ್ತಿದ್ದೆವು.'

೬೧

ಆಸಕ್ತಿ ಹಾಗು 'ಅಹಂ' ಭಾವದಿಂದ ನೀವು ಮಾಡುವ ಎಲ್ಲ ಕ್ರಿಯೆಗಳೂ ಸಂಸ್ಕಾರಗಳನ್ನುಂಟುಮಾಡುವುವು. ಆ ಸಂದರ್ಭದಲ್ಲಿ ಭೋಗವು ಆವಶ್ಯಕವಾಗುವುದು. ಎಲ್ಲ ಇಚ್ಛೆಗಳಲ್ಲಿಯೂ ಭೋಗದ ಬೀಜವಿರುವುದಿಲ್ಲ.

೬೨

ನಿಮ್ಮದೇ ಆದ ಸೃಷ್ಟಿಯನ್ನು ರಚಿಸುವುದು ಬಲು ಸುಲಭ. ಆದರೆ ಅದನ್ನು ನಾಶಮಾಡುವುದು ತುಂಬ ಕಷ್ಟ.

೬೩

ಆಧ್ಯಾತ್ಮಿಕ ವಿಷಯಗಳಲ್ಲಿ ನಾನು ದೇವರಿಗೆ ಎಂದೂ ಭಿಕ್ಷೆಬೇಡಿಲ್ಲ. ಯಾವಾಗಲೂ ಲಾಲಾಜಿಯವರೊಂದಿಗೇ ಸಮಾಲೋಚಿಸುತ್ತ ಬಂದಿದ್ದೇನೆ. ಆದರೆ ಪ್ರಾಪಂಚಿಕ ವಿಷಯಗಳಲ್ಲಿ ಒಮ್ಮೊಮ್ಮೆ ದೇವರನ್ನು ಪ್ರಾರ್ಥಿಸುವುದುಂಟು. ಆತನು ಒಮ್ಮೊಮ್ಮೆ ನನ್ನ ಮೇಲೆ ಸಿಟ್ಟಾಗುವನು ಕೂಡ. ಆಗ ನಾನು ಹೇಳುವೆನು :

'ಮಹಾಶಯರೆ, ನನ್ನಂತೆ ಮುನಿಸುಗೊಳ್ಳುವ ನೀವು ಎಂಥ ದೇವರು ? ನಾನೂ ಸೆಟಗೊಳ್ಳುವೆನು. ನನಗೂ ನಿಮಗೂ ವ್ಯತ್ಯಾಸವೆಲ್ಲಿ ಉಳಿಯಿತು ? ವಸ್ತುಸ್ಥಿತಿ ಏನೆಂದರೆ, ಲಾಲಾಜಿಯವರ ಕೃಪೆಯಿಂದ ನಾನು ದೇವರ ಪರವೆಯನ್ನೂ ಇಟ್ಟಿಲ್ಲ.'

೬೪

ನಾನು ಅಜ್ಞಾನಿಯಾದಾಗ ತತ್ತ್ವಜ್ಞಾನಿಯಾಗುವೆ; ಜಾಣನಾದಾಗ ವಿಜ್ಞಾನಿಯಾಗುವೆ.

೬೫

ಸಮಗ್ರ ದಾರಿಯನ್ನು ಅಳೆದುನೋಡಿ ಅದರ ಏರು ಪೇರುಗಳನ್ನು ಬಲ್ಲ ಗುರುವಿಗೆ ಶರಣು ಹೋಗುವುದರ ಹೊರತು ಬೇರೆ ಮಾರ್ಗವಿಲ್ಲ.

೬೬

ಹೃದಯದಲ್ಲಿ ದೈವೀಪ್ರಕಾಶದ ಮೇಲೆ ಧ್ಯಾನಮಾಡುವುದಕ್ಕಿಂತ ಪ್ರಕಾಶವಿದೆಯೆಂಬ ಕಲ್ಪನೆಯ ಮೇಲೆ ಧ್ಯಾನಮಾಡುವುದು ಹೆಚ್ಚು ಸುರಕ್ಷಿತ. ಏಕೆಂದರೆ, ಮನಸ್ಸು ಬೆಳಕಿನ ರೂಪವನ್ನು ಕಲ್ಪಿಸತೊಡಗಿ ಮುಂದೆ ಅದರಿಂದ ಚಿತ್ತವಿಭ್ರಮವಾಗುತ್ತದೆ. ಗುರು ಅತ್ಯಂತ ಉನ್ನತ ಮಟ್ಟದವನಿದ್ದು ನಿಸರ್ಗದೊಂದಿಗೆ ಏಕರಸವಾಗಿದ್ದರೆ ಮಾತ್ರ ಆತನ ಆಕಾರದ ಮೇಲೆ ಧ್ಯಾನಮಾಡುವುದು ಬಹಳೇ ಲಾಭದಾಯಕ.

೬೭

ದೈವೀಕರಣ (Divinization) ಎಂಬುದು ಒಂದು; ಆಸುರೀಕರಣ (Devilization) ಎಂಬುದು ಇನ್ನೊಂದು. ನಾವು ಎರಡನೆಯದನ್ನು ಬಿಟ್ಟು ಮೊದಲನೆಯದರ ಕಡೆಗೆ ಸಾಗಬೇಕಾಗಿದೆ.

೬೮

ಭಗವಂತನಿಗೆ ಪ್ರಣಿಪಾತ ಹೇಗೆ ಮಾಡಬೇಕೆಂದರೆ, ಬಾಗಿದವರು ಏಳಲೇಬಾರದು.

ನಾವು ಎಲ್ಲ ಕಡೆಗೂ ಕೆಡುಕನ್ನು ಕಾಣುವುದರ ಕಾರಣವೆಂದರೆ, ಕೆಡುಕಿನ ಬೀಜ ನಮ್ಮೊಳಗೇ ಇರುತ್ತದೆ. ನಮ್ಮ ಮನಸ್ಸಿನಲ್ಲಿಯೆ ಕೆಡುಕು ಮನೆ ಮಾಡಿಕೊಂಡಿರುವುದರಿಂದಲ್ಲೇ ನಮಗೆ ಎಲ್ಲೆಲ್ಲಿಯೂ ಕೆಡುಕೇ ಕಣ್ಣಿಗೆ ಬೀಳುತ್ತದೆ.

೭೦

ನಮ್ಮ ಹೊರಗಡೆ ಏನೆಲ್ಲ ನಡೆಯುವುದೋ ಅದು ಒಳಗೂ ಉಂಟಾಗುತ್ತ ಹೋಗುವುದು.

೭೧

ಈ ಪ್ರಪಂಚವು ಪರಸ್ಪರ ಕೊಡು-ಕೊಳುಗಳ ಮನೆ.

೭೨

ಪ್ರತಿಯೊಬ್ಬರೂ ನನ್ನನ್ನು ಪ್ರೀತಿಸುವರು. ಆದರೆ ಪ್ರೀತಿಯೆಂದರೇನು, ಹೇಗೆ ಪ್ರೀತಿಸಬೇಕು ಎಂಬುದು ಯಾರಿಗೂ ತಿಳಿಯದು.

೭೩

ನಾನು ಪ್ರತಿಯೊಬ್ಬರೆದುರಿಗೂ ಇದ್ದಂತೆಯೆ ಕಾಣಿಸಿಕೊಳ್ಳುವೆನು; ಮತ್ತು ಸೇವೆಯೆ ನನ್ನ ಧರ್ಮ.

೭೪

ನನ್ನ ಅಭಿಪ್ರಾಯದಲ್ಲಿ ಕಾಷಾಯವಸ್ತ್ರ ಒಂದು ಸೂಚಕ ಗೌನು ಇದ್ದಂತೆ. 'ಸಂನ್ಯಾಸಿಯಾದವನಿಗೆ ಇನ್ನು ಸಾಧಿಸಬೇಕಾದುದೇನೂ ಇಲ್ಲ' ಎಂಬುದನ್ನು ಅದು ಸೂಚಿಸುತ್ತದೆ. ಉಪದೇಶ ಮಾಡುವುದೇ ಆತನ ಕರ್ತವ್ಯ. ಪೂಜ್ಯ ಲಾಲಾಜಿಯವರೂ ಹೀಗೆಯೇ ಹೇಳುತ್ತಿದ್ದರು.

೭೫

ಸಹಜಮಾರ್ಗದ ವೈಶಿಷ್ಟ್ಯವೆಂದರೆ, ಇಲ್ಲಿ ಜನರು ಶಾಂತಿ ದೊರೆತರೂ ತೃಪ್ತರಾಗುವುದಿಲ್ಲ.

೭೬

ಅನಂತ ಮತ್ತು ಸಾಂತಗಳ ಸಂಬಂಧವೇನು ? ನಿಜವಾಗಿ ನೋಡಿದರೆ, ಅನಂತದ ಕಲ್ಪನೆ ಮಾಡುವುದೇ ಅಶಕ್ಯ. ಹಾಗೆ ಮಾಡಿದ್ದಾದರೆ ಅದರ ಅಸ್ತಿತ್ವವನ್ನು ಸೀಮಿತಗೊಳಿಸಿದಂಗಾಗುವುದು.

೭೭

ಎಲ್ಲಿ ಸೃಷ್ಟಿಯ ಪ್ರಶ್ನೆ ಬರುವುದೋ ಅಲ್ಲಿ ಸಾಂತತೆ ಬಂದೇ ಬಿಡುವುದು. ಅದರ ಸ್ಥಿತಿ ಹಾಗು ಲಯಗಳೂ ಕಲ್ಪನೆಯಲ್ಲಿ ಬರುವುವು. ನಾವು ದೇವರನ್ನು 'ಅನಂತ' ಎಂದು ಹೇಳುವ ಕಾರಣವೆಂದರೆ, ಆತನ ವಿಷಯದಲ್ಲಿ ನಮ್ಮ ಬುದ್ಧಿ ಕೆಲಸ ಮಾಡುವುದಿಲ್ಲ.

೭೮

ನಮ್ಮಲ್ಲಿ ಗುರುಗಳೆನ್ನಿಸಿಕೊಳ್ಳುವವರ ದೊಡ್ಡ ದೋಷವೆಂದರೆ ಅವರು ತಮ್ಮನ್ನು ಜನಸೇವಕರೆಂದು ಭಾವಿಸುವುದರ ಬದಲು ಜನತೆಯ ಒಡೆಯರೆಂದು ಭಾವಿಸತೊಡಗಿದರು.

೭೯

ತಾನು ಸಾಕ್ಷಾತ್ಕಾರ ಹೊಂದಿಯೇ ತೀರುವೆನೆಂಬ ಆತ್ಮವಿಶ್ವಾಸ ಪ್ರತಿಯೊಬ್ಬ ಅಭ್ಯಾಸಿಯಲ್ಲಿಯೂ ಇರುವುದು ಅತ್ಯಗತ್ಯ.

೮೦

ನನ್ನಲ್ಲಿ ಸಂವೇದನಶೀಲತೆ ಬಹಳ ಇದೆ. ಯಾರಾದರೂ ನನ್ನ ಎದುರಿನಲ್ಲಿ ಹಾಯ್ದು ಹೋದರೆ ಸಾಕು, ಅವರ ಸ್ವಭಾವ ಎಂಥದೆಂಬುದನ್ನು ತಿಳಿದುಕೊಂಡು ಬಿಡುತ್ತೇನೆ.

೬೧

ನಾನು ಕೇವಲ ಎರಡು–ಮೂರು ನಿಮಿಷ ಮಾತ್ರ ಧ್ಯಾನಮಾಡುತ್ತಿದ್ದೆ; ಮತ್ತೇನೂ ಇಲ್ಲ. ಇದನ್ನು ಲಾಲಾಜಿಯವರ ಮುಂದೆ ಹೇಳಿದಾಗ ಅವರು ಸುಮ್ಮನೆ ಇದ್ದರು. ಅದರಿಂದ ನಾನು ಮಾಡುತ್ತಿರುವುದು ಸರಿ ಎಂದು ತಿಳಿದುಕೊಂಡೆ. ಆದರೆ ಉಳಿದ ವೇಳೆಯಲ್ಲಿ ದಿನವಿಡೀ ನಾನು ಏನು ಮಾಡುತ್ತಿದ್ದೆನೆಂಬುದನ್ನು ಲಾಲಾಜಿಯವರು ಗಮನಿಸುತ್ತಿದ್ದರು.

ನನಗೆ ಮೊದಲಿನಿಂದಲೂ ಸಾಧನೆಯಲ್ಲಿ ಯಾವ ಗುರಿಯೂ ಇದ್ದಿಲ್ಲ. ಮುಕ್ತಿಯೆಂದರೇನೆಂಬುದೂ ನನಗೆ ತಿಳಿದಿರಲಿಲ್ಲ. ಶಾಂತಿಯ ಆವಶ್ಯಕತೆ ನನಗಿದ್ದಿಲ್ಲ; ಅದನ್ನು ನಾನು ಬಯಸುತ್ತಲೂ ಇದ್ದಿಲ್ಲ. ಆದರೆ, ಮನುಷ್ಯನ ಈ ಎಲ್ಲ ಓಡಾಟದ (ಸಾಧನೆ) ಕೊನೆಯಲ್ಲಿ ಏನಿದೆಯೆಂಬುದನ್ನು ತಿಳಿದುಕೊಳ್ಳುವ ಕುತೂಹಲ ಮಾತ್ರ ನನ್ನಲ್ಲಿದ್ದಿತು. ಮತ್ತು ನಾನು ಲಯಾವಸ್ಥೆಯನ್ನು ಪಡೆದುಕೊಳ್ಳುವ ಯತ್ನ ಮಾಡುತ್ತಿದ್ದೆ.

೬೨

ಧರ್ಮದ ತಳಹದಿಯಾದ ಭಯ ಮತ್ತು ಪ್ರಲೋಭನಗಳಿಂದ ಮುಕ್ತಿಯನ್ನು ಪಡೆಯುವುದೇ ಅಧ್ಯಾತ್ಮ.

೬೩

ನನ್ನ ದೃಷ್ಟಿಯಿಂದ 'ನಿರೋಧ' (ಯೋಗಶ್ಚಿತ್ತವೃತ್ತಿ ನಿರೋಧಃ) ವೆಂದರೆ 'ಮನಸ್ಸಿನ ತಿರುವು ಮುರುವನ್ನು ಸರಳ ಮಾಡುವುದೆಂ'ದರ್ಥ.

೬೪

ಈಗ ನನ್ನ ಸ್ಥಿತಿ ಉಪ್ಪಿಲ್ಲದ ಉಪ್ಪು–ಕಲ್ಲಿನಂತಿದೆ. ಅದರಲ್ಲಿ ಎಳ್ಳಷ್ಟೂ ಸ್ವಾರಸ್ಯವಿಲ್ಲ. ಆದರೂ ಅದರ ಮುಂದೆ ಶಾಂತಿಯು ಏನೂ ಅಲ್ಲ.

೮೫

ನಿಸರ್ಗದ ಶಕ್ತಿಗಳಲ್ಲಿ ಪ್ರತಿರೋಧವಿರುವುದಿಲ್ಲ; ಅವು ನಮ್ಮನ್ನು ಎದುರಿಸುವುದೂ ಇಲ್ಲ. ನಾವು ಅವುಗಳ ಪರಿಣಾಮವನ್ನು ನಿರಾಸಗೊಳಿಸಬಹುದು. ಆದರೆ ಅದಕ್ಕಾಗಿ ತುಂಬ ಆತ್ಮವಿಶ್ವಾಸ ಬೇಕು.

೮೬

ನೀವು ಯಾವ ಪ್ರಮಾಣದಲ್ಲಿ ಲಯ ಅವಸ್ಥೆಯನ್ನುಂಟು ಮಾಡಿಕೊಳ್ಳುವಿರೋ ಅದೇ ಪ್ರಮಾಣದಲ್ಲಿ ನೀವು ಶಕ್ತಿಯ ಮೇಲೆ ಪ್ರಭುತ್ವ ಪಡೆಯುವಿರಿ.

೮೭

ಯಾರಾದರೂ ನಮ್ಮ ಮೇಲೆ ಸಿಟ್ಟಿಗೆದ್ದರೆ ನಾವು ಅದರ ಕಡೆಗೆ ಲಕ್ಷ್ಯ ಕೊಡಬಾರದು. ನಾವು ಅದನ್ನು ಸ್ವಾಗತಿಸದೆ ಇದ್ದಮೇಲೆ ಅವರ ಸಿಟ್ಟಿನಿಂದ ಉಂಟಾದ ಉಷ್ಣತೆಯು ಅವರಲ್ಲಿಯೆ ಇಂಗಿಹೋಗುವುದು; ಮತ್ತು ಅದರಿಂದ ಅವರಿಗೇ ಹಾನಿಯಾಗಿ ಶಿಕ್ಷೆ ದೊರೆಯುವುದು. ಅಲ್ಲದೆ, ಪರರ ಸಿಟ್ಟಿನಿಂದ ನಾವು ಕ್ಷೋಭೆಗೊಳ್ಳದಿರುವುದು ಸಭ್ಯತೆಯೂ ಆಗಿದೆ.

೮೮

ನಾವು ಉಪವಾಸ ಮಾಡುವುದರಲ್ಲಿ ಅಡಕವಾದ ತತ್ತ್ವವೇನೆಂದರೆ : ದೇವರು ಎಂದೂ ಉಣ್ಣುವುದಿಲ್ಲ ಮತ್ತು ನಾವಾದರೂ ಉಪವಾಸ ವಿರುವುದರಿಂದ ಆತನ ಸಾಮೀಪ್ಯವುಂಟಾಗುವುದು. ಇದರಿಂದ ನಾವು ಆತನ ಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ನಮ್ಮಲ್ಲಿ ಹೀರಿಕೊಳ್ಳುವೆವು. ಆದರೆ, ಏನನ್ನಾದರೂ ಸ್ವಲ್ಪ ತಿಂದು ಇರುವುದು ಭಕ್ತನ ವಿನೆಯಕ್ಕೆ ಭೂಷಣ. ನಾವು ಆತನಂತೆ ಏನನ್ನೂ ತಿನ್ನದೆ ಇರಲಾರೆವೆಂಬುದನ್ನು ಅದು ತೋರಿಸಿ ಕೊಡುತ್ತದೆ. ಒಂದು ವೇಳೆ ನಾವು ನಿರ್ಜಲ ಉಪವಾಸ ಮಾಡಿದರೆ, ಅದರಿಂದ ನಮ್ಮ ಅಹಂಕಾರ ಹೆಚ್ಚುವುದು.

೫೯

ನಮಲ್ಲಿನ ಅನೇಕ ಸಂಪ್ರದಾಯಗಳು ಸ್ವಾರ್ಥಪೂರ್ಣವಾಗಿವೆ. ಅವುಗಳ ಗುರಿ ಸ್ವಾರ್ಥಪರವಾಗಿರುತ್ತದೆ. ನೀವು ಎಲ್ಲಿಯವರೆಗೆ ಮೂಲ ತತ್ತ್ವದಲ್ಲಿ ಜಿಗಿಯುವುದಿಲ್ಲವೋ, ಅಲ್ಲಿಯವರೆಗೆ ಸಂಪ್ರದಾಯದಿಂದ ಯಾವ ಲಾಭವೂ ಆಗುವುದಿಲ್ಲ. ಯೋಗದ ಪದ್ಧತಿಯಲ್ಲಿ ಮಾತ್ರ ಸ್ವಾರ್ಥವಿಲ್ಲ. ಉದಾಹರಣೆಗಾಗಿ, ನಮ್ಮ ಮನೆಗೆ ನಾವು ತಿರುಗಿ ಹೋಗುವುದು ಸ್ವಾರ್ಥವಲ್ಲ.

೬೦

ಒಂದು ಚಿಕ್ಕ ಹಳ್ಳವು ದೊಡ್ಡ ನದಿಯನ್ನು ಕೂಡಿಕೊಳ್ಳಬೇಕಾದರೆ ಭಾರೀ ಮಳೆಯಾದರೂ ಆಗಬೇಕು, ಇಲ್ಲವೆ ಆ ಚಿಕ್ಕ ಹಳ್ಳಕ್ಕಿದ್ದ ಪ್ರತಿಬಂಧವನ್ನಾದರೂ ಒಡೆದು ಹಾಕಬೇಕು. ಆಗ ಮಾತ್ರ ಹಳ್ಳವು ಹೊಳೆಯಲ್ಲಿ ಕೂಡಿಕೊಳ್ಳುವುದು. ನಮ್ಮ ಸಹಜಮಾರ್ಗ ಸಾಧನ ಪದ್ಧತಿಯಲ್ಲಿ ಅಭ್ಯಾಸಿಯ ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಯಾಗುವ ತೊಡಕುಗಳನ್ನೆಲ್ಲ ಕತ್ತರಿಸಿ ಹಾಕಲಾಗುವುದಲ್ಲದೆ ದೈವೀಕೃಪೆಯ ಪ್ರವಾಹವನ್ನು ಆತನ ಕಡೆಗೆ ತಿರುಗಿಸಲಾಗುವುದು.

೬೧

ಜೀವನದ ಮೇಲಿನ (ಅಥವಾ ಪ್ರಾಣದ ಮೇಲಿನ) ನಮ್ಮ ಪ್ರೀತಿಯು ನಮ್ಮ ಜೊತೆಯಲ್ಲಿಯೆ ಹುಟ್ಟುವುದು.

೬೨

ಹಳೆಯದನ್ನು ಪುನಃಪುನಃ ಪರೀಕ್ಷಿಸಿ ಅದರಲ್ಲಿ ಕಾಲಕ್ಕೆ ತಕ್ಕ ಬದಲಾವಣೆಯನ್ನುಂಟುಮಾಡಲು ಅವತಾರಗಳ ಉದಯವಾಗುತ್ತದೆ.

೬೩

ತಮಾಷೆಗಾಗಿ ನಾನು ಸಾಕ್ಷಾತ್ಕಾರದಲ್ಲಿ ಎರಡು ವಿಧ ಎಂದು ಹೇಳುವೆನು. ಒಂದು ಭಗವತ್‌ಸಾಕ್ಷಾತ್ಕಾರ; ಇನ್ನೊಂದು ಆತ್ಮ ಸಾಕ್ಷಾತ್ಕಾರ. ಮೊದಲನೆಯ ಪ್ರಕಾರದಲ್ಲಿ ಸ್ವಲ್ಪವೂ ಅಹಂಕಾರ

ವಿರುವುದಿಲ್ಲ. ಎರಡನೆಯ ಪ್ರಕಾರದಲ್ಲಿ ಅಹಂಕಾರ ತುಂಬಿಹೋಗಿರುತ್ತದೆ. ಪ್ರಪಂಚದಲ್ಲಿ ಈ ಪ್ರಕಾರದ ಜನರ ಕೊರತೆಯಿಲ್ಲ.

೯೪

ಮನುಷ್ಯನು ಯಾವುದೇ ಅಭಿಲಾಷೆಯೊಂದಿಗೆ (ಅದು ಆಧ್ಯಾತ್ಮಿಕವೇ ಆಗಿದ್ದರೂ) ಕೇಂದ್ರಮಂಡಲವನ್ನು ಪ್ರವೇಶಿಸಿದಾಗ ಒಂದು ತರದ ತರಂಗವುತ್ಪನ್ನವಾಗುವುದು. ಕ್ರಮೇಣ ಅದು ಶಕ್ತಿಯಾಗಿ ಪರಿಣಮಿಸಿ ಪ್ರಗತಿಯನ್ನು ಅಡಗಿಸುವುದು. ಈ ತರಂಗವು ಶಾಂತವಾಗುವವರೆಗೆ ಕಾಯ್ದುಕೊಂಡಿದ್ದು ಅನಂತರ ಮೆಲ್ಲನೆ ಮುಂದಕ್ಕೆ ಜಾರಬೇಕು.

೯೫

ಸಂಗ್ರಹ ಮಾಡುವುದಕೋಸ್ಕರ ಕಲ್ಲು ಮತ್ತು ಹಣ ಎರಡೂ ಒಂದೇ.

೯೬

ಎಲ್ಲಿಯವರೆಗೆ ಮನುಷ್ಯನ ನಿಲುಕು ಇರುವುದೋ ಅಲ್ಲಿಯವರೆಗೆ ವಿಷ್ಣುವಿನದೂ ಇಲ್ಲ ಅಥವಾ ಬೇರೆ ದೇವತೆಗಳದೂ ಇಲ್ಲ.

೯೭

ನಾವು ಈಶ್ವರನನ್ನು ಯಾವುದೊಂದು ಆಕಾರದಿಂದಾಗಲಿ ಅನೇಕ ರೂಪಗಳಿಂದಾಗಲಿ ಬಂಧಿಸಿಬಿಟ್ಟರೆ ಆತನು ಈಶ್ವರನಾಗಿ ಉಳಿಯುವುದಿಲ್ಲ. ಮಂಗಳವಾರವನ್ನು ನಾವು ರವಿವಾರ, ಸೋಮವಾರ, ಶುಕ್ರವಾರ ಎಂದು ಕರೆದರೆ ಅದು ಹೇಗೆ ಯಾವ ದಿನವಾಗಿಯೂ ಉಳಿಯಲಾರದೋ ಹಾಗೆ.

೯೮

ಈ ಬ್ರಹ್ಮಾಂಡದಲ್ಲಿ ಎಲ್ಲೇ ಆಗಲಿ, ಯಾವುದಾದರೊಂದು ಹೊಸ ಸಂಗತಿಯುಂಟಾದರೆ ಅದು ಮೊಟ್ಟ ಮೊದಲು ನನಗೆ ತಿಳಿಯುವುದು. ಇದು ಪೂಜ್ಯ ಲಾಲಾಜಿಯವರ ಕೃಪೆ.

ಮನುಷ್ಯನಲ್ಲಿ ಸಿಟ್ಟು ಅವಶ್ಯ ಇರಬೇಕು. ಆದರೆ, ಅದರ ಉಪಯೋಗ ಸರಿಯಾಗಿ ಆಗಬೇಕು. ದೇವರು ನಮಗೆ ಕೊಟ್ಟಿರುವ ಎಲ್ಲ ಶಕ್ತಿಗಳ ಉಪಯೋಗವೂ ಯೋಗ್ಯ ರೀತಿಯಲ್ಲಾಗಬೇಕು. ಅಲ್ಲದಿದ್ದರೆ ಆ ಶಕ್ತಿಗಳನ್ನೆಲ್ಲ ನಮಗೆ ಕೊಟ್ಟಿರುವನಾದರೂ ಏಕೆ ?

೧೦೦

ನಾವು ಪೂರ್ವಜನ್ಮದಿಂದ ಬಹಳಷ್ಟು ತರುತ್ತೇವೆ. ಸೂಕ್ಷ್ಮ ಶರೀರವಂತೂ ಹಿಂದಿನ ಜನ್ಮದ್ದೇ ಇರುತ್ತದೆ; ಮತ್ತು ಈ ಜನ್ಮದಲ್ಲಿ (ಸಂಸ್ಕಾರಗಳನ್ನು) ಶೇಖರಿಸುತ್ತಲೇ ಹೋಗುವೆವು. ಹೀಗೆ, ಕೂಡಿಸುತ್ತಲೇ ಇರುವೆವಲ್ಲದೆ ಕಳೆಯುವ ಹೆಸರೇ ಇಲ್ಲ.

೧೦೧

ಕೆಲವರು ಮಹಾತ್ಮರೆನಿಸಿಕೊಳ್ಳುವವರು ತಮ್ಮ ವೃದ್ಧಾಪ್ಯದಲ್ಲಿಯೂ ತಪಸ್ಸು (ಸಾಧನೆ) ಮಾಡುತ್ತಿರುವುದು ಕಂಡುಬರುತ್ತದೆ. ಇದರರ್ಥವಿಷ್ಟೆ: ಇಂದಿನವರೆಗೂ ಅವರು ಏನನ್ನೂ ಗಳಿಸಿಲ್ಲ.

೧೦೨

ಕೆಲಜನರು ಧ್ಯಾನ ಮಾಡುತ್ತಿದ್ದರೂ ವಿಗ್ರಹಾರಾಧನೆ ಮಾಡುತ್ತಿರುತ್ತಾರೆ. ಇದು, ಹಾಲು ಕುಡಿದ ನಂತರವೂ ಉಪ್ಪಿನಕಾಯಿ ಬಾಡಿಸಿಕೊಂಡಂತೆ.

೧೦೩

ದೇವರನ್ನು ಸ್ಮರಿಸುತ್ತ ಹೋಗಿರಿ, ಒಂದಿಲ್ಲೊಂದು ದಿನ ದೇವರೇ ನಿಮ್ಮನ್ನು ಸ್ಮರಿಸುವ ಕಾಲ ಬರುವುದು.

೧೦೪

ಮೊದಲನೆಯ ಕ್ಷೋಭವು ಕೆಳಗಿಳಿದಾಗ ಆದಿ ಮನಸ್ಸೆಂಬ ಸಂಜ್ಞೆ ಪಡೆಯುವುದು. ಅದಕ್ಕಿಂತಲೂ ಕೆಳಗಿಳಿದಾಗ ಮಾನವೀಯ ಮನಸ್ಸಾಗುವುದು. ಭಗವತ್ ಸಾಕ್ಷಾತ್ಕಾರವನ್ನು ಶಕ್ಯಗೊಳಿಸುವ ಸಾಧನವೆಂದರೆ ಮನಸ್ಸೊಂದೇ.

೧೦೫

ವಿಜ್ಞಾನವನ್ನು ರಚನಾತ್ಮಕ ಕಾರ್ಯಗಳಿಗಾಗಿ ಹೇಗೆ ಬಳಸಬೇಕೆಂಬ ವಿಷಯದಲ್ಲಿ ನಾನು ವಿಜ್ಞಾನಿಗಳಿಗೆ ಸಹಾಯ ಮಾಡಬಲ್ಲೆ. ಅದನ್ನು ವಿನಾಶಕ ಪ್ರಯೋಜನಗಳಿಗಾಗಿ ಬಳಸುವ ರೀತಿ ನನಗೆ ತಿಳಿಯದು.

೧೦೬

ಮನುಷ್ಯನು ಯಾವುದಾದರೊಂದು ಚಟಕ್ಕೆ ಅಂಟಿಕೊಂಡ ದ್ದಾದರೆ ಅದೂ ಒಂದು ಬಗೆಯ ವಿಗ್ರಹಾರಾಧನೆಯೆಂದು ಪೂಜ್ಯ ಲಾಲಾಜಿಯವರು ಹೇಳುತ್ತಿದ್ದರು.

೧೦೭

ನಮ್ಮ ಪೂರ್ವಜರು ಮೂರ್ಖರಿದ್ದಿಲ್ಲವೆಂಬುದು ನಿಜ. ಆದರೆ ಅವರಿಗೆ ಒಳ್ಳೆಯ ವಿಧಾನಗಳು ದೊರೆಯಲಿಲ್ಲ. ಆದುದರಿಂದಲೇ ಅವರು ವಿಗ್ರಹಾರಾಧನೆ (ಮೂರ್ತಿಪೂಜೆ) ಯನ್ನು ಕೈಕೊಂಡರು.

೧೦೮

ಕೇಂದ್ರದಿಂದ ಬರುವ ಕಂಪನಗಳು ಮೆದುಳನ್ನು ಸ್ಪರ್ಶಿಸಿದಾಗ ಮನುಷ್ಯನ ಅಭಿರುಚಿ, ತಿರಸ್ಕಾರಗಳಿಗೆ ತಕ್ಕಂತೆ (ಅಥವಾ ಅವುಗಳ ಪರಿಣಾಮಗಳಿಗನುಗುಣವಾಗಿ) ವಿಚಾರಗಳು ಹುಟ್ಟಿಕೊಳ್ಳುತ್ತವೆ. ಆಕರ್ಷಣ–ವಿಕರ್ಷಣಗಳು ಆತನನ್ನು ಕೆಲವೊಂದು ಪದಾರ್ಥಗಳಿಗೆ ಸಂಬಂಧಪಡಿಸುವುವು. ಬೇಕು–ಬೇಡ (ಅಭಿರುಚಿ–ತಿರಸ್ಕಾರ)ಗಳನ್ನು ನಿರ್ಮಿಸುವುದರಲ್ಲಿ ಪರಿಸರವೂ ಕೆಲಮಟ್ಟಿಗೆ ಕಾರಣವಾಗಿದೆ.

೧೦೯

ಸತ್ಯವನ್ನು (Reality) ಕುರಿತು ವೈದಿಕ ಋಷಿಗಳು ಏನೂ ಹೇಳಿಲ್ಲ. ಉಪನಿಷತ್ತಿನ ಋಷಿಗಳು ಆ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಭಗವದ್ಗಿತೆಯು ಸಹ ಸತ್ಯದ ಬಗ್ಗೆ ಏನೂ ಹೇಳುವುದಿಲ್ಲ.

೧೧೦

ದೇವರಿಗೆ ತಾನು ದೇವರೆಂಬ ಅರಿವಿದ್ದರೆ ಆತನು ದೇವರಾಗಿ ಉಳಿಯಲಾರ. 'ನನ್ನನ್ನು ಪೂಜಿಸು' ಎಂದು ದೇವರು ಎಲ್ಲಿಯೂ ಹೇಳಿಲ್ಲ.

೧೧೧

ಜನರಿಗೆ ರುಚಿಸಲಿ ಅಥವಾ ರುಚಿಸದಿರಲಿ, ಸತ್ಯವನ್ನು (Reality) ಹೇಳುವುದು ನನ್ನ ಮುಖ್ಯ ಕರ್ತವ್ಯ.

೧೧೨

ಗುರು ಸಾಧಕನನ್ನು ಮುಂದಕ್ಕೊಯ್ಯಲು ಅಸಮರ್ಥನಾದಾಗ ದೇವರೇ ಆತನನ್ನು ತನ್ನ ವಶಕ್ಕೆ ತೆಗೆದುಕೊಳ್ಳುವನು. ಆದರೆ ದೇವರ ಕೆಲಸ ಯಾವಾಗಲೂ ಸಾವಕಾಶವಾಗಿ ಸಾಗುತ್ತದೆ.

೧೧೩

'ನೀನು ಸತ್ಯದ (Reality) ಅರ್ಹವಿರುವಿ' ಎಂದು ಪೂಜ್ಯ ಲಾಲಾಜಿಯವರು ನನಗೊಮ್ಮೆ ಹೇಳಿದ್ದರು.

೧೧೪

ಅವತಾರಗಳು ತಮ್ಮ ಕೆಲಸ ಮುಗಿದಮೇಲೆ ಕೇಂದ್ರಕ್ಕೆ ತಿರುಗಿ ಹೋಗುವುದಿಲ್ಲ. ಏಕೆಂದರೆ, ಅವರು ಮಹಾಮಾಯಾ ಮಂಡಲದಿಂದ ಅವತರಣ ಮಾಡಿರುತ್ತಾರೆ. ಆದರೆ ವಿಭೂತಿ ಪುರುಷರು ನೇರವಾಗಿ ಕೇಂದ್ರದಿಂದಲೇ ಇಳಿದು ಬಂದಿರುತ್ತಾರೆ.

೧೧೫

ಮನುಷ್ಯರೊಂದಿಗೆ ವ್ಯವಹರಿಸಲು ಮುಕ್ತಾತ್ಮರ ಬಳಿ ಯಾವ ಸಾಧನವೂ ಇರದಿದ್ದರೂ ಅವರೊಂದಿಗೆ ನಮ್ಮ ಕಲ್ಪನೆಯನ್ನು ಜೋಡಿಸಿದಾಗ ವ್ಯವಹಾರವು ಸಾಧ್ಯವಾಗುವುದು.

೧೧೬

ನನ್ನ ಸಾಧನಕಾಲದಲ್ಲಿಯ ಅನುಭವಗಳು ಈಗ ನನ್ನ ನೆನಪಿನಲ್ಲಿಲ್ಲ. ನೀವು ಈಗ ನನಗೆ ಕೇಳುತ್ತಿರುವ ಪ್ರಶ್ನೆಗಳ ವಿಷಯವಾಗಿ ನಾನೆಂದಿಗೂ ವಿಚಾರಮಾಡಲೇ ಇಲ್ಲ. ಅಂಥ ಪ್ರಶ್ನೆಗಳು ನನ್ನ ತಲೆಯಲ್ಲಿ ಸುಳಿಯಲೇ ಇಲ್ಲ. ಈಗ ನಿಮ್ಮೆಲ್ಲರ ಮೂಲಕ ನನಗೆ ಅನುಭವಗಳಾಗಹತ್ತಿವೆ (ಅರ್ಥಾತ್ ನಿಮ್ಮ ಅನುಭವಗಳು ನನ್ನವೇ). ಇವೆಲ್ಲ ಬಲು ಸೂಕ್ಷ್ಮ ವಿಷಯಗಳು. ಇವನ್ನು ಯಾರೂ ಅರಿಯರು.

೧೧೭

ನಿಮ್ಮ ಗೃಹಸ್ಥಜೀವನದಲ್ಲಿ ಅವಶ್ಯಕವಾದ ಎಲ್ಲವನ್ನೂ ಮಾಡಿರಿ, ಆದರೆ ಅದೆಲ್ಲಕ್ಕೂ ನೀವೇ ಹೊಣೆಯೆಂದು ಮಾತ್ರ ತಿಳಿಯಬೇಡಿರಿ.

೧೧೮

ಒಮ್ಮೆ ಒಬ್ಬ ಮಹಾನುಭಾವರು ಪ್ರಶ್ನೆ ಮಾಡಿದರು : 'ದೇವರು ಮನುಷ್ಯನೊಂದಿಗೆ ಅನುರಕ್ತನಾಗಿಲ್ಲವೆ ? ಮತ್ತೆ ನಾವೇಕೆ ಆತನ ಕಡೆಗೆ ತಿರುಗಬೇಕು ?' ನಾನು ಹೇಳಿದೆ : 'ಅವಶ್ಯವಾಗಿ ದೇವರು ನಮ್ಮೊಂದಿಗೆ ಅನುರಕ್ತನಾಗಿದ್ದಾನೆ. ಇದು ಆತನ ಸಜ್ಜನಿಕೆ. ಆದರೆ ನಮ್ಮ ಸೌಜನ್ಯವೆಂದರೆ ನಾವೂ ಆತನೊಂದಿಗೆ ಅನುರಕ್ತರಾಗಬೇಕು.'

೧೧೯

ನಮ್ಮ ತಂದೆಯವರು ನನ್ನ ವಿಷಯದಲ್ಲಿ 'ಈತನು ಯಾವ ಕೆಲಸಕ್ಕೂ ಬಾರದವ'ನೆಂದು ಹೇಳುತ್ತಿದ್ದರು. ನಾನು ಯಾವಾಗಲೂ ಪ್ರತಿಯೊಬ್ಬರೊಂದಿಗೂ ಅನಾಸಕ್ತನಾಗಿಯೆ ಇರುತ್ತಿದ್ದೆ. ಮನೆಯ ಕಾರ್ಯಕಲಾಪಗಳ ಹಾಗೂ ವ್ಯವಸ್ಥೆಯ ಬಗೆಗೆ ಎಂದಿಗೂ ಆಸ್ಥೆ

ತೋರಿಸಲಿಲ್ಲ. ಆದುದರಿಂದಲೇ ನಮ್ಮ ತಂದೆಯವರಿಗೆ ನಾನೆಂದರೆ ಅಷ್ಟಕ್ಕಷ್ಟೆ.

೧೨೦

ಕೆಲಜನರು ತಿಳಿಯುವಂತೆ, ನಾವು 'ಪ್ರಾಣಾಹುತಿ'ಯಲ್ಲಿ 'ಪ್ರಾಣಶಕ್ತಿ'ಯನ್ನು ಬಳಸುವುದಿಲ್ಲ. ಸತ್ ತತ್ತ್ವದ ಅಥವಾ ಕೊನೆಯ ತತ್ತ್ವದ (ಅಥವಾ ಅನಂತದ) ಶಕ್ತಿಯನ್ನು ಪ್ರಾಣದ ಮೂಲಕವಾಗಿ ಬಳಸುವೆವು.

೧೨೧

ಎಷ್ಟೇ ಸೂಕ್ಷ್ಮರೂಪದಲ್ಲಿಯೆ ಆಗಲಿ, 'ಸತ್-ಚಿತ್-ಆನಂದ'ದಲ್ಲಿ ಮಾಯೆಯ ಛಾಯೆ ಇರುವುದು. ಆದರೆ ಚರಮ ತತ್ತ್ವವು (Ultimate) ಇವೆಲ್ಲವುಗಳ ಆಚೆಗಿದೆ.

೧೨೨

ಉನ್ನತ ಸ್ತರಗಳಲ್ಲಿ ಇಂದ್ರಿಯಗಳೊಂದಿಗಿನ ಆತ್ಮದ ಸಂಬಂಧ ತರಲ (ಕ್ಷೀಣ) ವಾಗುತ್ತದೆ. ಒಂದು ವೇಳೆ ಮೊದಲಿದ್ದಂತೆ ದೃಢವಾಗಿಯೆ ಇದ್ದರೆ ಆತ್ಮದಲ್ಲಿಯೂ ಅದೇ ಹರಿದು ಬರುತ್ತಿತ್ತು. (ಅರ್ಥಾತ್ ಆತ್ಮವು ಹಗುರವಾಗಿ ಮೇಲಕ್ಕೇರಲು ಅಥವಾ ಉನ್ನತಿ ಹೊಂದಲು ಸಾಧ್ಯವಾಗುತ್ತಿದ್ದಿಲ್ಲ.)

೧೨೩

ನಾವು ಪ್ರತಿಯೊಂದು ಕಲ್ಪನೆಗೂ ಒಂದು ಅರ್ಥವನ್ನು ಕೊಡುತ್ತ ಹೋದೆವು; ಮತ್ತು ಅದು ಒಂದು ಸಂಯುಕ್ತವಾಗಿ ವಿಸ್ತಾರಹೊಂದಿತು. ನಮ್ಮ ಭಾಷೆಯೆಲ್ಲ ಈ ಸಂಯುಕ್ತದ ಆಟವೇ ಆಗಿದೆ. ನಾವು ಈ ಸಂಯುಕ್ತವನ್ನು ಬೇರ್ಪಡಿಸಿದಾಗ ಅದೇ ಮೂಲ ಪದಾರ್ಥವೇ ಉಳಿದುಕೊಳ್ಳುತ್ತದೆ.

೧೨೪

ಯಾವಾಗ ಸತ್ಯವು (Reality) ತನ್ನ ರೂಪವನ್ನು ಬದಲಾಯಿಸಿತೋ ಆಗ ಪ್ರತಿಯೊಂದೂ ಕೃತ್ರಿಮವಾಯಿತು. ಆದರೆ ಆ ಕೃತ್ರಿಮದಲ್ಲಿಯೂ ಸತ್ಯದ ಗಂಧ ಇದ್ದೇ ಇರುತ್ತದೆ. ಆಲೂಗಡ್ಡೆಯನ್ನು ಕುದಿಸಿದಾಗ ಅದು ಬೇರೆ ರುಚಿಯನ್ನು ಕೊಟ್ಟರೂ ಅದನ್ನು ಹೇಗೆ ಆಲೂಗಡ್ಡೆಯೆಂದೇ ಹೇಳುತ್ತೇವೆಯೋ ಹಾಗೆ.

೧೨೫

ವಿಚಾರವು ಸತ್ಯದ ತುಕ್ಕು (Thought is the rust of reality).

೧೨೬

ನಿಷ್ಕ್ರಿಯತೆಯು ಕ್ರಿಯಾಶೀಲತೆಯ ಬೀಜ.

೧೨೭

ಒಂದು ಪದಾರ್ಥವು ಹುಟ್ಟಿ ಬಂದಮೇಲೆ, ಸ್ಥಿತಿ, ಲಯಗಳೆಂಬ ಪ್ರಕ್ರಿಯೆಗೆ ಒಳಪಡಲೇಬೇಕು.

೧೨೮

ಮಹಾಪ್ರಳಯದ ಕಾಲದಲ್ಲಿ ಭಾರವು ಇಲ್ಲದಂತಾಗುತ್ತದೆ.

೧೨೯

ಎರವಲು ವಿಚಾರಗಳೇ ನನ್ನಲ್ಲಿಯೂ ಬರುವವೆಂಬ ದೃಷ್ಟಿಯಿಂದ ನಾನು ತತ್ತ್ವಶಾಸ್ತ್ರವನ್ನು ಅಭ್ಯಸಿಸಲಿಲ್ಲ. ಪೂಜ್ಯ ಲಾಲಾಜಿಯವರು, ಮೊದಲು ನಾನು ಸತ್ಯವನ್ನು (Reality) ಪಡೆದು ನಂತರ ಅಭ್ಯಾಸಮಾಡಬೇಕೆಂದು ಹೇಳಿದರು. ನಾನು ಹಾಗೆಯೆ ಮಾಡಿದೆ. ನಾನು ಪುಸ್ತಕಗಳನ್ನು ಬರೆಯುವೆನೆಂದೂ ಲಾಲಾಜಿಯವರು ಹೇಳಿದ್ದರು. ಆ ಮಾತು ಸತ್ಯವಾಯಿತು.

೧೩೦

ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರಾರೂ ಸತ್ಯವನ್ನು (Reality) ತಲುಪಿಲ್ಲ. ಅವರು ಕೇವಲ ನಿರರ್ಥಕವಾದ ಕಲ್ಪನೆಯಲ್ಲಿಯೆ ಸಮಯ ಕಳೆಯುವರು.

೧೩೧

ನಾನು ನನ್ನ ಗುರುಗಳೊಂದಿಗೆ ಗಾಢವಾದ ಸಂಬಂಧ ಪಡೆದಿದ್ದರೂ ಅವರ ಆಳವನ್ನು ಅಳೆಯಲು ನನ್ನಿಂದ ಸಾಧ್ಯವಾಗಲೊಲ್ಲದು. ಇಷ್ಟಿದೆ ಅವರ ಮಹಿಮೆ!

೧೩೨

ಪ್ರತಿಯೊಬ್ಬ ಸತ್ಸಂಗಿಯೂ ಬೇರೆಯವರನ್ನು ಸಂಪೂರ್ಣವಾಗಿ ಪರಿವರ್ತನಗೊಳಿಸಬಲ್ಲನು. ಇದು ಸಹಜಮಾರ್ಗದ ವಿಶೇಷತೆ.

೧೩೩

ಮನುಷ್ಯನ ವಿಚಾರಗಳ ಪರಿಣಾಮವು ಆತನ ಎಲುಬುಗಳಲ್ಲಿಯೂ ವ್ಯಾಪಿಸಿರುತ್ತದೆ. ಎಲುಬುಗಳಿಂದ ಹೊರಸೂಸುತ್ತಿರುವ ಶಕ್ತಿಯ ಮೇಲಿಂದ ಸತ್ತುಹೋದ ಮನುಷ್ಯನ ಸ್ಥಿತಿಯನ್ನು ತಿಳಿದುಕೊಳ್ಳಬಹುದು.

೧೩೪

'ಮನುಷ್ಯನು ಲಯಹೊಂದದೆ ನಿಜವಾದ ಜೀವನವನ್ನು ಪಡೆಯಲಾರನು' –ಹೀಗೆಂದು ಪೂಜ್ಯ ಲಾಲಾಜಿಯವರು ತಮ್ಮ ಕೊನೆಯ ದಿನಗಳಲ್ಲಿ ಹೇಳುತ್ತಿದ್ದರು.

೧೩೫

ಒಮ್ಮೆ ನಾನು ಲಾಲಾಜಿಯವರಿಗೆ ಹೇಳಿದೆ: 'ನಿಮ್ಮ ಬಗ್ಗೆ ವಿಚಾರ ಮಾಡಿದಾಗಲೆಲ್ಲ ಸೀಸೆಯೊಂದಕ್ಕೆ ಬೂಚು ಹಾಕಿದಂತೆ

ಅನುಭವಿಸುತ್ತೇನೆ.' ಆಗ ಲಾಲಾಜಿ ಹೇಳಿದರು: 'ಇನ್ನು ನೀನು ನನ್ನನ್ನು ಕುರಿತು ಧ್ಯಾನಿಸಲಾರೆ' ನಾನು ಪೂರ್ಣವಾಗಿ ಅವರಲ್ಲಿ ಲಯ ಹೊಂದಿದ್ದೆನೆಂದು ಅವರ ಅಭಿಪ್ರಾಯವಾಗಿದ್ದಿತು.

೧೩೬

ಅಧ್ಯಾತ್ಮದಲ್ಲಿ ನಾವು ಪ್ರತಿಯೊಂದನ್ನೂ ನಿರ್ಲಕ್ಷ್ಯ ಮಾಡುತ್ತ ನಡೆಯುತ್ತೇವೆ. ಆದರೆ ಭೌತಿಕ ವಿಜ್ಞಾನದಲ್ಲಿ ಪ್ರತಿಯೊಂದನ್ನೂ ಸ್ವೀಕರಿಸುತ್ತ ಹೋಗುತ್ತೇವೆ.

೧೩೭

ನಮ್ಮ ಮಸ್ತಿಷ್ಕ (Brain)ದಲ್ಲಿ ಯಾವ ಮಾತು ಸೇರಿಕೊಂಡಿರುವುದೋ ಅದು ಹೊರಗೂ ನಮ್ಮ ವರ್ತನೆಯಲ್ಲಿ ಪ್ರಕಟವಾಗಿಯೆ ತೀರುವುದು.

೧೩೮

ವಾಸ್ತವವಾಗಿ, ನಮ್ಮ ಉಚ್ಚತಮ ವಿಕಾಸವೇ ಸಾಕ್ಷಾತ್ಕಾರ. ನಮ್ಮಲ್ಲಿಯ ಪ್ರತಿಯೊಂದು ವಸ್ತುವೂ ದಿವ್ಯತೆಯನ್ನು ಹೊಂದಬೇಕು.

೧೩೯

ಮತ-ಧರ್ಮಗಳೆಷ್ಟಿವೆಯೋ ಅವೆಲ್ಲವೂ ದೇವರನ್ನು ಸಾಕಾರವೆಂದು ತಿಳಿಯುತ್ತವೆ. ನಾವು ಮತಧರ್ಮದಿಂದ ಮೇಲಕ್ಕೇರಿದಾಗಲೇ ನಿರಾಕಾರದ ವಿಚಾರ ಸುಳಿಯುವುದು.

೧೪೦

ಭಗವಂತನ ಜ್ಞಾನ ಪಡೆಯುವುದರಲ್ಲಿ ನನಗೆ ವಿಶ್ವಾಸವಿಲ್ಲ. ಭಗವಂತನನ್ನೇ ಪಡೆಯಬೇಕೆಂದು ನನ್ನ ನಂಬುಗೆ. ಯಾವಾಗ ನೀವು ನಿಮ್ಮೊಂದಿಗೆ ಸಂಪರ್ಕವನ್ನು ಕಳೆದುಕೊಳ್ಳುವಿರೋ ಆಗ ನೀವು ಭಗವಂತನ ವೇದಿಕೆಯ ಮೇಲೆ ಬರುವಿರಿ.

೧೪೧

'ದಿವ್ಯಚಕ್ಷು'ವೆಂದರೆ 'ಅಂತರ್ಮುಖತೆ'. ನಮ್ಮ ಹೃದಯವು ಹೊರಗಿನ ವಸ್ತುಗಳ ಸಂಸ್ಕಾರವನ್ನು ಪಡೆಯದಂತಾದಾಗ ಈ ಚಕ್ಷು ತೆರೆಯಿತೆಂದು ತಿಳಿಯಬೇಕು. ಆಗ ಕೇವಲ ಆ ಒಂದೇ ವಸ್ತುವಿನ ಚಿತ್ರವು ಅಲ್ಲಿ ಸ್ಪಷ್ಟವಾಗಿ ಅಚ್ಚೊತ್ತಿದಂತಾಗುವುದು.

೧೪೨

ದುಃಖಗಳಿಂದ ಬಿಡುಗಡೆ ಹೊಂದುವ ಉತ್ತಮ ಉಪಾಯವೆಂದರೆ ಅವುಗಳನ್ನು ಅನುಭವಿಸಿ ಬಿಡುವುದು.

೧೪೩

ಇಲ್ಲಿ ವಸಂತ ಪಂಚಮಿ ಉತ್ಸವದ ಮೂರು ದಿನಗಳೆಂದರೆ ತಪಸ್ಸಿನ ದಿನಗಳೆಂದು ಸತ್ಸಂಗಿಗಳು ತಿಳಿಯಬೇಕು. ಪ್ರತಿಕ್ಷಣವೂ ಭಗವದ್ವಿಚಾರದಲ್ಲಿಯೆ ಇರಲು ಪ್ರಯತ್ನಿಸಬೇಕು.

೧೪೪

ಜ್ಯೋತಿರ್ಮಯ ವೃತ್ತಗಳನ್ನು ದಾಟಿದ ಮೇಲೆ ಮೂರು ಸಂಗತಿಗಳುಂಟಾಗುವುವು : ೧) ವಿಸ್ತಾರ, ೨) ದಿವ್ಯಜ್ಞಾನ (Divine wisdom), ೩) ಅನಂತದ ದರ್ಶನ (Vision of the Absolute). ನಾವು ವೃತ್ತಗಳನ್ನು ದಾಟಿದ ನಂತರವೇ ನಮಗೆ ನಿಜವಾದ ರುಚಿ ಬರುವುದು. ಇದಕ್ಕೆಲ್ಲ ಶ್ರದ್ಧೆ ಮತ್ತು ಪ್ರೇಮ ಬೇಕು. ಮೊದಲಿನ ಎರಡು ಸಂಗತಿಗಳಾದ ವಿಸ್ತಾರ ಹಾಗು ದಿವ್ಯಜ್ಞಾನಗಳಂತೂ ವೃತ್ತಗಳನ್ನು ದಾಟುವ ಮುಂಚೆಯೆ ಸ್ವಲ್ಪ ಮಟ್ಟಿಗೆ ಅನುಭವಕ್ಕೆ ಬರುವುವು. ಆದರೆ ಕೊನೆಯದಾದ ಅನಂತದ ದರ್ಶನವು ಕಟ್ಟಕಡೆಗೆಯೆ ಉಂಟಾಗುವುದು.

೧೪೫

ಆತ್ಮವು ಶರೀರದ ರಾಜ. ಅದು ಕೇವಲ ಸೂಚನೆ ಕೊಡುವ ಕೆಲಸವನ್ನು ಮಾತ್ರ ಮಾಡುವುದು. ಮನಸ್ಸಿನಲ್ಲಿ ಯಾವುದೇ ಇಚ್ಛೆ ಹುಟ್ಟಲಿ, ಆತ್ಮಕ್ಕೆ ತತ್‍ಕ್ಷಣವೇ ಗೊತ್ತಾಗಿ ಅದರ ಸೂಚನೆಯನ್ನು

ಕೊಡುವುದು. ನೀವು ಬೇಕಾದರೆ ಮನಸ್ಸಿನ ಇಚ್ಛೆಯಂತೆಯೆ ಕೆಲಸ ಮಾಡಬಹುದು ಅಥವಾ ಅದರ ವಿರುದ್ಧವಾದರೂ. ಆತ್ಮವು ಯಾವಾಗಲೂ ನಿರ್ಲಿಪ್ತವಾಗಿರುವುದು. ಅದು ಯಾವ ಕೆಲಸದ ಹೊಣೆಯನ್ನೂ ತನ್ನ ಮೇಲೆ ತೆಗೆದುಕೊಳ್ಳುವುದಿಲ್ಲ.

೧೪೬

ಯಾವಾಗ ನಾವು ಒಬ್ಬ ಒಳ್ಳೆಯ ಮನುಷ್ಯನೊಂದಿಗೆ ಸಂಬದ್ಧರಾಗುವೆವೋ ಆಗ ನಮ್ಮಲ್ಲಿ ಸಂಸ್ಕೃತಿ ಬೆಳೆಯಲಾರಂಭಿಸುತ್ತದೆ.

೧೪೭

ನಾವೆಷ್ಟು ಮೊಂಡರಾಗಿದ್ದೇವೆಂದರೆ, ನಾವು ಮಾಡುತ್ತಿರುವುದೆಲ್ಲ ತಪ್ಪು ಎಂದು ನಮಗೆ ತಿಳಿದಿದ್ದರೂ ಅದರ ವಿರುದ್ಧ ಒಂದು ಮಾತನ್ನೂ ಕೇಳಬಯಸುವುದಿಲ್ಲ.

೧೪೮

'ನಾವು ನಮ್ಮ ಮೇಲೆ ಏನೆಲ್ಲ ಮಾಡಿಕೊಂಡಿರುವೆವೋ ಹಾಗೆ ಒಬ್ಬ ಕುರುಡನು ಸಹ ಮಾಡಲಾರ. ಮನೆಯಲ್ಲಿಯೆ ನಾವು ಮನೆಯೊಡನೆಯನನ್ನು ಪತ್ತೆಯಿಲ್ಲದಂತೆ ಮಾಡಿದ್ದೇವೆ.' (ಒಂದು ಪಾರಸಿ ಶ್ಲೋಕ)

೧೪೯

ನಾವು ಪೂಜೆಮಾಡುತ್ತಲೇ ಹೋಗುವೆವಾದರೂ ನಮ್ಮಲ್ಲಿ ಎಷ್ಟು ಮಟ್ಟಿಗೆ ಪ್ರಗತಿಯಾಗುತ್ತಿದೆಯೆಂಬುದನ್ನು ಯೋಚಿಸುವುದೇ ಇಲ್ಲ. ದೇವರು ಸಂತುಷ್ಟನಾದನೆಂದು ತಿಳಿದು ಸುಮ್ಮನಿದ್ದು ಬಿಡುತ್ತೇವೆ. ಆದರೆ ವಾಸ್ತವವಾಗಿ ನಾವು ಪೂಜೆಮಾಡುತ್ತಿರುವುದು ದೇವರಿಗೆಲ್ಲಿ ಗೊತ್ತಿದೆ ? ನಮ್ಮ ಪೂಜೆ ಅಥವಾ ಕೂಗು ಆತನವರೆಗೆ ಮುಟ್ಟಿದಾಗಲೇ ಏನಾದರೂ ಆಗಬಹುದು. ನಾವು ಆತನ ಪೂಜೆ ಮಾಡುತ್ತಿರುವೆವೆಂಬುದು ಆತನಿಗೆ ಗೊತ್ತಾಗಬೇಕು.

೧೫೦

ಜನರು ಧ್ಯಾನವನ್ನೇನೋ ಮಾಡುತ್ತಾರೆ. ಅದರಿಂದ ಶಾಂತಿ ದೊರತ ಮಾತ್ರಕ್ಕೆ ತೃಪ್ತರಾಗುತ್ತಾರೆ. ಮುಂದೆ ಹೋಗಲು ಪ್ರಯತ್ನ ಹಾಗೂ ಧೈರ್ಯವನ್ನು ಮಾಡುವುದಿಲ್ಲ.

೧೫೧

ಯಾವಾಗ ಮನುಷ್ಯನ ಎಲ್ಲ ಬಂಧನಗಳೂ ಕತ್ತರಿಸಿ ಹೋಗುವುವೋ, ಆಗ ಆತನಲ್ಲಿ ಶಕ್ತಿಯು ಹೊಳೆಯಂತೆ ಹರಿಯತೊಡಗುವುದು. ಅಭ್ಯಾಸಿಗೆ ಅದನ್ನು ತಡೆದುಕೊಳ್ಳುವುದು ಕಠಿಣವಾಗುವುದು. ಆದುದರಿಂದಲೇ (ಲಾಲಾಜಿಯಂಥ) ಮಹಾತ್ಮರು ಒಂದರ್ಧ ಬಂಧನವನ್ನು ಹಾಕಿ ಬಿಡುವರು. ಇಂಥವರು ಎಲ್ಲೋ ಸಾವಿರಾರು ವರ್ಷಗಳಲ್ಲೊಮ್ಮೆ ನಿಸರ್ಗಕ್ಕೆ ಅಗತ್ಯವಿದ್ದಾಗ ಹುಟ್ಟಿ ಬರುವರು.

೧೫೨

ಲಯ ಅವಸ್ಥೆ ಹಾಗು ನಿರಂತರ ಸ್ಮರಣೆ, ಇವುಗಳಿಂದ ಪ್ರತಿಯೊಂದು ಸ್ಥಿತಿಯೂ ಅನುಭವಕ್ಕೆ ಬರುತ್ತ ಹೋಗುವುದು.

೧೫೩

ಸಂಕುಚಿತ ದೃಷ್ಟಿಗೆ ಜನರು 'ಅಭಿಮಾನ'ವೆಂಬ ಬೇರೆ ಹೆಸರನ್ನು ಕೊಟ್ಟು ಅದಕ್ಕಾಗಿ ಹೆಮ್ಮೆ ಪಡುವರು. ಆದರೆ ನಿಜವಾಗಿ ನಾವು ಅದಕ್ಕಾಗಿ ಅಳಬೇಕು.

೧೫೪

ಕಾರ್ಯ–ಕಾರಣಗಳ ಸರಪಳಿಯಲ್ಲಿ ಕಾರ್ಯಕ್ಕೆ ಕಾರಣ ವಿರಬಹುದೇ ವಿನಾ ಕಾರಣದ ಕಾರಣವಿರುವುದಿಲ್ಲ. ಏಕೆಂದರೆ, ಕಾರಣವು ಕಾರ್ಯ ಅಥವಾ ಪರಿಣಾಮವಲ್ಲ.

೧೫೫

ನಮ್ಮ ಮನೋರಂಜನಗಳು ಸಮಾಪ್ತವಾದಾಗ ಮತ್ತು ನಾವು ಅವುಗಳ ಚಮತ್ಕಾರಗಳಿಂದ ಮೇಲಕ್ಕೆ ಏರಿಹೋದಾಗ ಮಾತ್ರ ಭಗವಂತನ ನೆಲೆ ದೊರಕುವುದು.

೧೫೬

ನಮ್ಮನ್ನು ಸದಾ ತನ್ನೆಡೆಗೆ ಎಳೆಯುತ್ತಿರುವ ಭಗವಂತನ ಪ್ರೇಮಪೂರ್ಣ ಆಕರ್ಷಣವನ್ನು ಅನುಭವಿಸುವುದೇ ಶಾಶ್ವತ ಸುಖಕ್ಕೆ ದಾರಿ.

೧೫೭

ಸದ್‌ಭಾವನೆಯಿಂದೊಡಗೂಡಿದ ದಾನದಿಂದ ಮನಸ್ಸಿನ ಮಲಿನತೆ ಹೊರಟು ಹೋಗಿ ಶುದ್ಧತೆಯುಂಟಾಗುವುದು.

೧೫೮

ತನ್ನನ್ನು ತಾನು ಪೂರ್ಣ ಕಳೆದುಕೊಳ್ಳುವುದೇ ಪ್ರೇಮ. ಭಕ್ತಿಯು ಅದರ ಪರಿಣಾಮ.

೧೫೯

ಭಗವತ್‌ಪ್ರಾಪ್ತಿಯ ಅಗತ್ಯ ಎಲ್ಲರಿಗೂ ಇದೆ. ಆದರೆ ಅದರ ಬಗೆಗಿನ ಉತ್ಕಟೇಚ್ಛೆ ಎಲ್ಲೋ ಕೆಲವರಿಗಿದೆ.

೧೬೦

ನಿಜವಾದ ತತ್ಪರತೆಯಿರದಿದ್ದರೆ ಮನಸ್ಸಿನ ಸುಧಾರಣೆಯೂ ಆಗುವುದಿಲ್ಲ. ಜೀವನದಲ್ಲಿ ಪರಿವರ್ತನೆಯೂ ಸಾಧ್ಯವಿಲ್ಲ.

೧೬೧

ಆತ್ಮನಿವೇದನದಿಂದ ಅಭ್ಯಾಸಿಯಲ್ಲಿ ರಿಕ್ತತೆ ಹುಟ್ಟಲಾರಂಭಿಸುವುದು. ಆ ರಿಕ್ತಸ್ಥಳದಲ್ಲಿ ದೈವೀಕತೆ ತಾನಾಗಿಯೆ ತುಂಬತೊಡಗುವುದು.

ವ್ಯಾಕುಲತೆಯು ಸುಪ್ತಚೇತನದಲ್ಲಿ ಸೇರಿದಾಗಲೇ ನಿಜವಾದ ಭಕ್ತಿಯು ಪ್ರಾರಂಭವಾಯಿತೆಂದು ತಿಳಿಯಬೇಕು.

೧೬೩

ನಾನು ಆಧ್ಯಾತ್ಮಿಕ ಗ್ರಂಥಗಳನ್ನಾಗಲಿ, ಶಾಸ್ತ್ರಗಳನ್ನಾಗಲಿ ಎಂದೂ ಓದಿದವನಲ್ಲ. ನಾನು ಹೇಳುವುದು, ಬರೆಯುವುದು, ಎಲ್ಲಾ ಕೇವಲ ಸ್ವಾನುಭವ. ಪೂರ್ವಾಚಾರ್ಯರು, ಪಂಡಿತರು ಏನು ಹೇಳಿರುವರೆಂಬುದರ ಗೊಡವೆಗೆ ನಾನೆಂದೂ ಹೋಗಿಲ್ಲ.

೧೬೪

ಬೇರೆಯವರಿಗಾಗಿ ಮಾತನಾಡು; ಸ್ವಂತಕ್ಕಾಗಿ ಮೌನ ತಾಳು.

೧೬೫

ನಾವು ಈಗ ಮಾಡುತ್ತಿರುವಂತೆ ದೇವರಪೂಜೆ ಮಾಡುವುದೂ ಒಂದು ಮೂಢನಂಬಿಕೆಯೆ. ಎಲ್ಲ ಮೂಢನಂಬಿಕೆಗಳಿಂದಲೂ ಮುಕ್ತರಾಗಿ ಕೇವಲ ಒಂದನ್ನೇ ಅರ್ಥಾತ್ ಪರಮಾತ್ಮನನ್ನೇ ಹಿಡಿಯಿರಿ.

೧೬೬

ಪ್ರತಿಯೊಂದು ವಸ್ತುವೂ ತನ್ನ ಮೂಲಕ್ಕೆಳೆಯುವುದು. ಅದಕ್ಕೆ ಸರಿಯಾದ ಮಾರ್ಗವನ್ನು ಕಲ್ಪಿಸಿ ಕೊಡುವುದು ನಮ್ಮ ಕರ್ತವ್ಯ. ಇಲ್ಲದಿದ್ದರೆ ನಿಸರ್ಗವು ಕಠಿಣಶಿಕ್ಷೆ ವಿಧಿಸುವುದು.

೧೬೭

ಅನೇಕರು ತಮ್ಮ ಪ್ರಗತಿಯಾಗಿಲ್ಲವೆಂದು ದೂರುತ್ತಾರೆ. ಆದರೆ ಅವರು ತಮ್ಮ ಎಲ್ಲ ಹೊಣೆಯನ್ನು ನನ್ನ ಮೇಲೆ ಎಲ್ಲಿ ಬಿಟ್ಟಿದ್ದಾರೆ?

೧೬೮

ದೇವರು ಸ್ವತಃ ಏನನ್ನೂ ಮಾಡಲಾರ, ಯಾರು ದೇವರಿಗೆ ಅಧೀನರಾಗಿದ್ದಾರೋ ಅವರು ಎಲ್ಲವನ್ನೂ ಮಾಡಬಲ್ಲರು. ಆದ್ದರಿಂದ ದೇವರಿಗೆ ಅಧೀನರಾದವರ ಅಧೀನರಾಗಬೇಕು.

೧೬೯

ವ್ಯಾಪಾರವು ಹಣವನ್ನು ಗಳಿಸಿಕೊಳಬಲ್ಲುದು; ಮೋಕ್ಷವನ್ನು ಕೊಡಲಾರದು. ಯೋಗವು ಮೋಕ್ಷವನ್ನು ಮಾತ್ರ ಕೊಡಬಲ್ಲುದು; ಹಣವನ್ನು ಕೊಡಲಾರದು.

೧೭೦

ನಮ್ಮ ಹಾಗೂ ಭಗವಂತನ ನಡುವೆ ನೇರವಾದ ಸಂಬಂಧವಿದೆ. ನಾವು ಸ್ವತಃ ನಿರ್ಮಿಸಿಕೊಂಡ ಪ್ರಪಂಚವನ್ನು ನಾಶಗೊಳಿಸಲು ಮಾತ್ರ ಗುರುವಿನ ಸಹಾಯ ಪಡೆಯುವೆವು. ಅನ್ಯಥಾ ಗುರುವಿನ ಅಗತ್ಯವೇ ಇಲ್ಲ.

೧೭೧

'ಅಹಂ' ಎಂಬುದು ಒಮ್ಮೆ ಹೊರಟು ಹೋಯಿತೆಂದರೆ ಮತ್ತೆ ತಿರುಗಿ ಬರುವುದಿಲ್ಲ. ಈ 'ಅಹಂ' ಬೇರೆ ಮತ್ತೊಂದರ ಸೃಷ್ಟಿ. ಅದು ಹೊರಟು ಹೋದಾಗ 'ಅಹಂ' ತಾನಾಗಿಯೆ ಹೊರಟು ಹೋಗುವುದು.

೧೭೨

'ಪ್ರಾಣಾಹುತಿ'ಯೆಂದರೆ ಮನುಷ್ಯನಿಗೆ ದೈವೀಶಕ್ತಿಯಿಂದ ಕಾವುಕೊಡುವದು. ಅರ್ಥಾತ್ 'ಪ್ರಾಣದ ಪ್ರಾಣ'ವನ್ನು ಅಭ್ಯಾಸಿಯಲ್ಲಿ ಸಂಚಾರ ಮಾಡಿಸುವುದು.

೧೭೩

'ಕೇವಲ ಈಶ್ವರ'ನು ಧರ್ಮದ ಈಶ್ವರನ ಪ್ರಾಣವೆಂದು ಹೇಳಬಹುದು.

೧೭೪

ಸಾಮಾನ್ಯವಾಗಿ ನಾವು ದೇವರ ದರ್ಶನಕ್ಕೆಂದು ಗುಡಿಗಳಿಗೆ ಹೋಗುವೆವು. ಇದು ಭಕ್ತನನ್ನೂ ಭಗವಂತನನ್ನೂ ಕೂಡಿಯೆ ಬಂಧಿಸುವ ಒಂದು ಪರಿಮಿತಿ. ನಾವು ಗುಡಿಗಳಿಗೇನೋ ಹೋಗುವೆವು. ಆದರೆ ದೇವರನ್ನು ಬಿಟ್ಟೇ ತಿರುಗಿ ಬರುವೆವು.

೧೭೫

ಧರ್ಮವು ಸಾಮಾನ್ಯ ಜನರಿಗಾಗಿ; ಅಧ್ಯಾತ್ಮವು ವಿಚಾರವಂತರಾದ ಕೆಲವರಿಗಾಗಿ.

೧೭೬

ಪಶುಗಳದು ಭೋಗಯೋನಿ, ಅವುಗಳಿಗೆ ಕರ್ಮ ಸಿದ್ಧಾಂತ ಅನ್ವಯಿಸುವುದಿಲ್ಲ.

೧೭೭

ಕುಂಡಲಿನಿ ಜಾಗೃತವಾಗುವುದರಿಂದ ಈ ಮೂರು ಸಂಗತಿಗಳು ಪ್ರಾಪ್ತವಾಗುವುವು;

ಅ) ಏಕಾಗ್ರತೆ; ಆ) ಊರ್ಧ್ವಲೋಕಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯ; ಹಾಗು ಇ) ನಿಸರ್ಗವು ತೆರೆದ ಪುಸ್ತಕದಂತೆ ಆಗುವುದು.

೧೭೮

ನಾನು ಮೊದಲು ತುಂಬ ಮೂಕಸ್ವಭಾವದವನಾಗಿದ್ದೆ. ಆದರೆ ಧ್ಯಾನಾಭ್ಯಾಸವನ್ನು ಆರಂಭಿಸಿದಂದಿನಿಂದ ಬಹಳ ವಾಚಾಳಿಯಾದೆ.

೧೭೯

ಧ್ಯಾನವನ್ನು ಎಲ್ಲಿಯವರೆಗೆ ಮಾಡುತ್ತಿರಬೇಕು ? ಎಲ್ಲಿಯವರೆಗೆ ಗುರಿಯ ಸಾಕ್ಷಾತ್ಕಾರವಾಗುವುದಿಲ್ಲವೋ ಅಲ್ಲಿಯವರೆಗೆ. ಧ್ಯೇಯಸಿದ್ಧಿಯಾದ ನಂತರ ಯಾರ ಧ್ಯಾನವನ್ನು ಮಾಡುವಿರಿ ?

ನೀವು ನಿಮ್ಮ ಊರನ್ನು ತಲಪುವವರೆಗೂ ರೈಲಿನಲ್ಲಿ ಕುಳಿತಿರುವಿರಿ. ಊರನ್ನು ಮುಟ್ಟಿದನಂತರ ಗಾಡಿಯಿಂದ ಇಳಿದುಬಿಡುವಿರಿ.

೧೮೦

ನಾವು ಈಶ್ವರನನ್ನು ಆತನು ಇರುವಂತೆಯೆ ನೋಡಬೇಕು. ಆಗ ಮಾತ್ರವೇ ವಸ್ತುಸ್ಥಿತಿಯ (ತತ್ತ್ವದ) ಅರಿವಾಗುವುದು. ನಾವು ಈಶ್ವರನನ್ನು ನಮ್ಮ ದೃಷ್ಟಿಯಿಂದ ನೋಡಿ ಆತನಲ್ಲಿಯೂ 'ಅಹಂ'ತನವನ್ನು (I-ness) ನಿರ್ಮಿಸಿ ಬಿಡುವೆವು.

೧೮೧

'ನಾವು ಮದಿರೆಯ ಪಾತ್ರೆಯಲ್ಲಿ ಸಹ ಭಗವಂತನ ನೆರಳನ್ನು ಕಂಡೆವು. ಈಗ ನಮ್ಮ ಕೆಲಸ ಪೂರ್ತಿ ಮುಗಿದು ಹೋಯಿತು.' (ಒಂದು ಪಾರಸಿ ಶ್ಲೋಕ)

೧೮೨

ಒಂದು ವೇಳೆ ಈಶ್ವರನು ಸೃಷ್ಟಿಯನ್ನು ನಿರ್ಮಿಸದಿದ್ದರೆ ಆತನ ಶಕ್ತಿಯು ಸ್ವಯಂ ಒಂದು ಗ್ರಂಥಿಯಾಗಿ ಹೆಪ್ಪುಗಟ್ಟಿ ಕೂಡುತ್ತಿತ್ತು. ಮತ್ತು ಅದರಿಂದ ಆತನ ಅಸ್ತಿತ್ವವೇ ಇಲ್ಲದಂತಾಗುತ್ತಿತ್ತು. ಆದುದರಿಂದ ದೇವರು ತನ್ನ ಅಸ್ತಿತ್ವವನ್ನು ಪ್ರಕಟಿಸಲು ಸೃಷ್ಟಿಯನ್ನು ರಚಿಸಿದನು.

೧೮೩

ನಮ್ಮ ಮನಸ್ಸು ಆತ್ಮದ ಹತ್ತಿರವೇ ಇದೆ. ಆದುದರಿಂದ ನಮ್ಮ ವಿಚಾರಗಳು ಯಾವಾಗ ಬೇಕಾದರೂ ಆತ್ಮದ ಬಣ್ಣವನ್ನು ಪಡೆಯುವುವು.

೧೮೪

ಎಲ್ಲಿಯವರೆಗೆ ಪ್ರಜ್ಞಾನವು ಜಾಗೃತವಾಗುವುದಿಲ್ಲವೋ ಅದುವರೆಗೆ ಭಗವಂತನ ವಿಷಯಕ್ಕೆ ಏನೂ ಜ್ಞಾನವಾಗುವುದಿಲ್ಲ.

೧೮೫

ಯಾವ ಪ್ರಕಾರ ದೇವರ ವ್ಯಾಖ್ಯೆಯನ್ನು ಕೊಡಲು ಸಾಧ್ಯವಿಲ್ಲವೋ ಅದೇ ಪ್ರಕಾರ ಪ್ರಾಣಾಹುತಿಯ ವ್ಯಾಖ್ಯೆಯನ್ನೂ ಕೊಡಲು ಶಕ್ಯವಿಲ್ಲ. ಏಕೆಂದರೆ, ಇದು ಅದೇ ಮೂಲದಿಂದಲೇ ಬಂದಿದೆ.

೧೮೬

ಯಾವುದು ಸತ್‌ಪರಿಣಾಮವನ್ನುಂಟುಮಾಡುವುದೋ ಅದೇ ಒಳ್ಳೆಯ ವಸ್ತು. ನಾವು ಹೃದಯದ ಮೇಲೆ ಪ್ರಾಣಾಹುತಿಕೊಟ್ಟರೂ ಅದು ಇಡೀ ದೇಹದಲ್ಲೆಲ್ಲ ವ್ಯಾಪಿಸುವುದು. ಕಾರಣವಿಷ್ಟೆ: ದೇಹದಲ್ಲಿ ಎಲ್ಲ ಕಡೆಗೂ ಟೆಲಿಫೋನಿನಂತೆ ಸಂಬಂಧವಿದೆ.

೧೮೭

ಜನರು ಇಷ್ಟೇಕೆ ಪ್ರಕಾಶದ ಬೆನ್ನುಹತ್ತಿರುವರೋ ತಿಳಿಯದು. ಕೇವಲ ಮಂದ ದೃಷ್ಟಿಯುಳ್ಳವರಿಗೆ ಮಾತ್ರ ಪ್ರಕಾಶದ ಅಗತ್ಯವಿರುತ್ತದೆ.

೧೮೮

ದುರ್ದೈವದ ಸಂಗತಿಯೆಂದರೆ, ಇಂದು ಭಾರತದಲ್ಲಿ ಸಂತರೊಬ್ಬರೂ ಉಳಿದಿಲ್ಲ. ಆದರೆ ಅದರ ಜೊತೆಗೇ ಈ ಪುಣ್ಯಭೂಮಿ ಸಂತರಿಲ್ಲದೆ ಎಂದೂ ಉಳಿದಿಲ್ಲ.

೧೮೯

ವಿಚಾರದ ಹಿಂದೆ ಇರುವ ವಿಚಾರವಾವುದು ? ಅಲ್ಲಿ ಯಾವ ವಿಚಾರವೂ ಇರುವುದಿಲ್ಲ. ಆದರೆ ಆ ವಿಚಾರಕ್ಕೆ ಆಧಾರ ರೂಪವಾದ ಕಂಪನಗಳು ಮಾತ್ರ ಇರುತ್ತವೆ.

೧೯೦

ನಾನು ಗೃಹಸ್ಥನಿರುವುದರಿಂದ ಜನರು ನನ್ನನ್ನು ಪರೀಕ್ಷಿಸಲು ಬರುವುದುಂಟು. ಆದರೆ ಅಂಥವರಲ್ಲಿ ಯಾರೂ ನನ್ನ ಬಗ್ಗೆ ಒಳ್ಳೆಯ

ಅಭಿಪ್ರಾಯವನ್ನು ಪಡೆದುಕೊಂಡು ಹೋಗಿಲ್ಲವೆಂದು ನನ್ನ ಎಣಿಕೆ. ನಿಜ ಹೇಳುವುದಾದರೆ, ಇದು ಆತ್ಮರಕ್ಷಣೆಗಾಗಿ ನಾನು ಹೂಡುವ ಒಂದು ಹಂಚಿಕೆ, ಅಷ್ಟೆ.

೧೯೧

ಸ್ವಾತಂತ್ರ್ಯ ಅಥವಾ ಬಿಡುಗಡೆ ಎಂದರೇನು ? ನಮ್ಮ ಹೆಗಲ ಮೇಲಿನ ನೊಗವನ್ನು ಕಳಗಿಸುವುದು.

೧೯೨

ಶ್ರೀರಾಮ ಹಾಗೂ ಶ್ರೀಕೃಷ್ಣರು ಯಾವ ದೇವರನ್ನು ಪೂಜಿಸಿದರೋ ಆ ದೇವರನ್ನೇ ನಾವು (ಸಹಜಮಾರ್ಗ ಸಾಧನೆಯಲ್ಲಿ) ಪೂಜಿಸುವೆವು.

೧೯೩

'ಪ್ರಾಣಾಹುತಿ' ಎಂದರೆ ಕೇಂದ್ರಶಕ್ತಿಯನ್ನು ಅಥವಾ ದೈವೀಶಕ್ತಿಯನ್ನು ಬಳಸುವುದು. ಅದರಲ್ಲಿ ಕಂಪನಗಳೇನೋ ಇವೆ. ಆದರೆ ಅನೇಕರಿಗೆ ಅವುಗಳ ಅನುಭವವೇ ಆಗುವುದಿಲ್ಲ. ಅದಕ್ಕೆ ಅಭ್ಯಾಸ ಬೇಕಾಗುತ್ತದೆ.

೧೯೪

ಭಕ್ತಿಯನ್ನು ನಿಮ್ಮ ಬಣ್ಣದಲ್ಲಿ ಅದ್ದಬೇಡಿರಿ. ಅದು ನೈಜವಾಗಿರಲಿ, ಮುಖಸ್ತುತಿ ಭಕ್ತಿಯಲ್ಲ.

೧೯೫

ಸದಾಕಾಲ, ನಮ್ಮ ಜೀವನದ ಗುರಿಯಾದ ಭಗವಂತನನ್ನೇ ಚಿಂತಿಸುತ್ತಿದ್ದರೆ ಬೇರೆ ಸಂಸ್ಕಾರಗಳೇ ಆಗುವುದಿಲ್ಲ.

೧೯೬

ನಾವೆಲ್ಲರೂ ವಿಚಾರಗಳನ್ನು ತಿರಸ್ಕರಿಸುವೆವು. ಆದುದರಿಂದಲೇ ಧ್ಯಾನಸಮಯದಲ್ಲಿ ಅವು ನಮ್ಮನ್ನು ಪೀಡಿಸುವುವು. ಅವುಗಳನ್ನು ಪ್ರೀತಿಸಿ ನೋಡಿ; ಆಗ ಅವು ತಾವಾಗಿಯೆ ಬಯಲಾಗುವುವು.

೧೯೭

ವಿಚಾರಗಳು ದೈವಿಕತೆಯ (Divine) ಸಂಪರ್ಕದಲ್ಲಿ ಬಂದಾಗ ಕಿಡಿಗಳನ್ನು ಹುಟ್ಟಿಸುವುವು. ಅದರಿಂದ ಬೆಳಕಿನ ಅನುಭವವುಂಟಾಗುವುದು. ಆದರೆ ಚರಮಸ್ಥಿತಿಯು ಬೆಳಕಿನ ಆಚೆಗಿರುವುದು.

೧೯೮

ಸಾಕ್ಷಾತ್ಕಾರ ಹೊಂದಿದಾಗ ಸ್ವಾರ್ಥವು ಸಂಪೂರ್ಣವಾಗಿ ತೊಳೆದು ಹೋಗುತ್ತದೆ.

೧೯೯

ಧ್ಯಾನ ಸಮಯದಲ್ಲಿ ಬರುವ ವಿಚಾರಗಳನ್ನು ಅದುಮಲು ಯತ್ನಿಸುವುದು ಒಳ್ಳೆಯದಲ್ಲ. ಕರೆಯದೆ ಬಂದ ಅತಿಥಿಗಳಂತೆ ಅವನ್ನು ಉಪೇಕ್ಷಿಸಬೇಕು. ವಾಸ್ತವವಾಗಿ, ವಿಚಾರಗಳು ಬರುವುದು ಕೆಟ್ಟದಲ್ಲ. ಒಳಗಿನ ವಿಷದ್ರವ್ಯವು ವಿಚಾರಗಳ ರೂಪದಲ್ಲಿ ಹೊರದೂಡಲ್ಪಡುತ್ತದೆ. ನೀವು ಅದನ್ನು ಅದುಮಲು ಪ್ರಯತ್ನಿಸಿದಷ್ಟೂ ಅವು ಬಲಗೊಳ್ಳುತ್ತವೆ.

೨೦೦

ನಾವು ಸಂಪೂರ್ಣವಾಗಿ ನಿರ್ವಿಚಾರರಾಗಿರುವುದು ಸಾಧ್ಯವಿಲ್ಲ. ಪ್ರಾಪಂಚಿಕ ಹಾಗು ನಿರುಪಯುಕ್ತ ವಿಚಾರಗಳ ಬದಲು ದೈವೀ ವಿಚಾರಗಳು ಇರುವುವು, ಇಷ್ಟೆ. ಪೂರ್ಣ ನಿರ್ವಿಚಾರನಾಗುವುದೆಂದರೆ ಪೂರ್ಣ ಸಮತ್ವವನ್ನು ಹೊಂದಿದಂತೆ. ಆಗ ಅಸ್ತಿತ್ವವೇ ಇಲ್ಲದಂತಾಗಿ ಪ್ರಳಯವುಂಟಾಗುವುದು. ಆದುದರಿಂದಲೇ ನಿರ್ವಿಚಾರರಾಗಿರುವುದು ಸಾಧ್ಯವಿಲ್ಲ.

೨೦೧

ನಮ್ಮ ದೇಶದ ಸಂತರು ಹೊರದೇಶದವರನ್ನು (ಅದರಲ್ಲಿಯೂ ಪಾಶ್ಚಾತ್ಯರನ್ನು) ಏಕೆ ಪ್ರೀತಿಸುವರು ಗೊತ್ತೆ? ಅವರು ಭೌತಿಕತೆಯ ಆರಾಧಕರೆನಿಸಿದರೂ ಪ್ರಾಮಾಣಿಕರಾಗಿದ್ದಾರೆ. ಯಾವುದೇ ಕೆಲಸವನ್ನು

ಕೈಗೆ ತೆಗೆದುಕೊಂಡರೂ ತುಂಬ ಪ್ರಾಮಾಣಿಕತನದಿಂದ ಮಾಡುತ್ತಾರೆ. ಆದರೆ ಈ ಸ್ವಭಾವ ನಮ್ಮ ದೇಶದ ಜನರಲ್ಲಿಲ್ಲದಿರುವುದು ದುರ್ದೈವವೇ ಸರಿ. ನಾವೆಲ್ಲ ಡಾಂಭಿಕರು. ನಮ್ಮ ಗತವೈಭವದಲ್ಲಿ ನಮಗೆ ಬಹಳ ಅಭಿಮಾನವಿದೆ. ಆದರೆ ನಾವು ಸ್ವತಃ ಏನೂ ಇಲ್ಲ. ನಾವು ಗತಕಾಲದಲ್ಲಿಯೆ ಜೀವಿಸಿದರೆ ಪಾಶ್ಚಾತ್ಯರು ವರ್ತಮಾನ ಕಾಲದಲ್ಲಿ ಜೀವಿಸುವರು. ನಾವು ನಮ್ಮ ಕರ್ತೃತ್ವದ ಬಲದಿಂದ ಮುಂದುವರಿಯಬೇಕೇ ಹೊರತು ನಮ್ಮ ಪೂರ್ವಜರ ಪ್ರಖ್ಯಾತಿಯ ಬಲದಿಂದಲ್ಲ.

೨೦೨

ನಾವು ನಮ್ಮ ಇಚ್ಛೆಗಳ ದಾಸರೆಂದು ಏಕೆ ತಿಳಿಯಬೇಕು ? ಕಾರಣವಿಷ್ಟೆ: ಅದು ನಾವು ಉನ್ನತ ಮಟ್ಟಕ್ಕೇರಲು ಭೂಮಿಕೆ ಯನ್ನೊದಗಿಸುವುದು. ಏತದ್ವಿರುದ್ಧ, ನಾವು ಪರಿಪೂರ್ಣರೆಂದು ತಿಳಿದರೆ ನಮ್ಮ ಪ್ರಗತಿಯೆ ನಿಂತುಬಿಡುವುದು. ನಾವು ಕೆಳಮಟ್ಟದಲ್ಲಿರುವೆವೆಂದು ಭಾವಿಸಿದಾಗಲೆ ಮೇಲಕ್ಕೇರುವ ವಿಚಾರ ಬರುವುದು.

೨೦೩

ಯಾವಾಗ 'ನಾನು' ಎಂಬ ಪದವು ಯಾರಿಗೂ ಅನ್ವಯಿಸುವುದಿಲ್ಲವೋ ಆಗ ಅಹಂಕಾರವು ಅಪ್ಪಣೆ ತೆಗೆದುಕೊಳ್ಳುವುದು ಮತ್ತು ಅತ್ಯುತ್ಕೃಷ್ಟ ಲಯಾವಸ್ಥೆ ಬರುವುದು.

೨೦೪

ಕರ್ಮ ಸಿದ್ಧಾಂತದ ತಿರುಳೇನು ? ಕ್ರಿಯೆ ಮತ್ತು ಪ್ರತಿಕ್ರಿಯೆಗಳ ನಿಯಮ. ಇವೆರಡನ್ನೂ ತೊಡೆದು ಹಾಕುವವರೆಗೆ ಮುಕ್ತಿಯು ಸಾಧ್ಯವಿಲ್ಲ.

೨೦೫

ಪ್ರತಿಯೊಂದು ಪ್ರಶ್ನೆಗೂ ಸರಿಯಾದ ಉತ್ತರವನ್ನೂ ಪ್ರತಿಯೊಂದು ಸಮಸ್ಯೆಗೂ ಯೋಗ್ಯ ಪರಿಹಾರವನ್ನೂ ದೊರಕಿಸಿಕೊಡುವುದೇ ನಿಜವಾದ ಶಿಕ್ಷಣ.

## ೨೦೬

ಮುಕ್ತಿ ಅಥವಾ ಸಾಕ್ಷಾತ್ಕಾರಕ್ಕಾಗಿ ದೇವರಲ್ಲಿ ಇಲ್ಲವೆ ಗುರುವಿನಲ್ಲಿ ಶ್ರದ್ಧೆ ಆವಶ್ಯಕ. ಕೊನೆಯ ಪಕ್ಷ ಗುರುವಿನ ಬಗೆಗೆ ವಿನಮ್ರಭಾವನೆಯಾದರೂ ಅಗತ್ಯ ಬೇಕು. ಇದರಿಂದ ಶ್ರದ್ಧೆ ತಾನಾಗಿಯೆ ಬೆಳೆದು ಬರುವುದು ಮತ್ತು ಅಶ್ರದ್ಧೆಗೆ ಅವಕಾಶವಿರುವುದಿಲ್ಲ.

## ೨೦೭

ಉನ್ನತ ಸ್ತರಗಳನ್ನು ಮುಟ್ಟಿದಾಗಲೂ ಮೆದುಳಿನಲ್ಲಿ ವಿಚಾರಗಳು ಅವಶ್ಯ ಬರುವುವು. ಆದರೆ ಅವುಗಳಲ್ಲಿ ಬಲವಿರುವುದಿಲ್ಲ. ಪುನಃ ಪುನಃ ಅವುಗಳನ್ನು ಕುರಿತು ಚಿಂತಿಸಿದಾಗ ಮಾತ್ರ ಶಕ್ತಿಯಾಗಿ ಪರಿಣಮಿಸುವುದು. ಉದಾಹರಣೆಗೆ, ಬಿರುಗಾಳಿ ಎದ್ದಿದೆಯೆಂದು ತಿಳಿಯಿರಿ. ಅದು ತಾನಾಗಿಯೆ ಬೀಸಿ ಹೊರಟುಹೋಗುವುದು. ಆದರೆ ಎಲ್ಲಿಯಾದರೂ ಗುಂಡಿ (ತಗ್ಗು) ಇದ್ದರೆ ಎಲ್ಲ ಧೂಳು ಅದರಲ್ಲಿಯೆ ಬಿದ್ದುಬಿಡುವುದು. ನಾವು ಮನೆಯ ಬಾಗಿಲು ಅಥವಾ ಕಿಟಕಿಗಳನ್ನು ತೆರೆದರೂ ಒಳಗೆ ಬರುವುದು.

## ೨೦೮

ಮಂತ್ರಗಳಲ್ಲಿ ಬಹಳ ಶಕ್ತಿ ಇರುವುದು. ಆದರೆ ಅದರಿಂದ ಕೇವಲ ಬಾಹ್ಯ ವಿಕಾಸವೇ ಆಗುವುದು, ಆಂತರಿಕ ವಿಕಾಸವಾಗುವುದಿಲ್ಲ.

## ೨೦೯

ಸಂಸ್ಕಾರಗಳ ಪರಿಣಾಮ ಎಲ್ಲಿಯವರೆಗೆ ಇರುವುದೆಂದು ಹೇಳುವುದು ಕಠಿಣ. ಇಷ್ಟು ಮಾತ್ರ ನಿಜ; ಅವು ಸಂಪೂರ್ಣ ನಷ್ಟ ಹೊಂದುವುದಿಲ್ಲ. ಮೇಲಿನ ಸ್ತರಗಳಿಗೆ ಹೋದಂತೆಲ್ಲ ಅವು ತಮ್ಮ ಕ್ಷೇತ್ರವನ್ನು ಬಿಡುವವಾದರೂ ಭೋಗಕ್ಕಾಗಿ ಸ್ವಲ್ಪವಾದರೂ ಆಸ್ಪದ ಇದ್ದೇ ಇರುತ್ತದೆ. ಈ ಶರೀರದ ಮಟ್ಟಿಗೆ ಹೇಳುವುದಾದರೆ ಎಲ್ಲಿಯವರೆಗೆ ಶರೀರವಿರುವುದೋ ಅಲ್ಲಿಯವರೆಗೆ ಒಂದಿಲ್ಲೊಂದು ಭೋಗವು ಇದ್ದೇ ಇರುವುದು.

## ೨೧೦

ನಮ್ಮ ಮೇಲೆ ಯಾರಾದರೂ ಅಸೂಯೆಪಟ್ಟರೆ ನಾವು ಅಸಮಾಧಾನ ಪಟ್ಟುಕೊಳ್ಳಬಾರದು. ಬದಲು, ಅವರು ತಮ್ಮನ್ನು ತಾವೇ ಕೆಡಿಸಿಕೊಳ್ಳುವರಾದ ಕಾರಣ, ಅವರ ಬಗೆಗೆ ಕನಿಕರ ಹುಟ್ಟಬೇಕು.

## ೨೧೧

ಮನುಷ್ಯನು ಕೆಟ್ಟುದನ್ನು ಬಲುಶೀಘ್ರವಾಗಿಯೂ ನಿರಾಯಾಸವಾಗಿಯೂ ಮಾಡಬಲ್ಲ. ಏಕೆಂದರೆ, ಅವನ ವೃತ್ತಿಗಳು ಯಾವಾಗಲೂ ಕೆಳಮಟ್ಟದಲ್ಲಿಯೆ ಇರುತ್ತವೆ. ಮತ್ತು ನಿಮ್ನ ಸ್ತರದಲ್ಲಿ ವೃತ್ತಿಗಳು ಅತ್ಯಂತ ಶಕ್ತಿಯುತವಾಗಿರುವುವು. ಆದರೆ, ಅದೇ ಒಳ್ಳೆಯದನ್ನು ಮಾಡಲು ತುಂಬ ಸಮಯ ಬೇಕು. ಮೆಟ್ಟಿಲುಗಳನ್ನು ಹತ್ತಿ ಮೇಲೆ ಏರುವುದು ಕಷ್ಟ. ಅದೇ ಕೆಳಗೆ ಇಳಿಯುವುದು ಸುಲಭ. ಅದರಂತೆ ಅಧ್ಯಾತ್ಮದಲ್ಲಿಯೂ ಮೇಲೇರುವುದು ಕಷ್ಟ; ಬೀಳುವುದು ಸುಲಭ.

## ೨೧೨

ದೂರ್ವಾಸ ಋಷಿಗಳು ರುದ್ರನ ಶಕ್ತಿಯೊಂದಿಗೆ ಅಂಟಿಕೊಂಡಿದ್ದರಿಂದ (ಜನರನ್ನು) ಅಳಿಸುವ ಸ್ವಭಾವವುಳ್ಳವರಾಗಿ ಶಾಪ ಕೊಡುತ್ತ ಹೋಗುತ್ತಿದ್ದರು. ಅವರು ಶೀಘ್ರಕೋಪಿಗಳೂ ಆಗಿದ್ದರು.

## ೨೧೩

ಪವಿತ್ರತೆಯ ಪರಿಣಾಮವನ್ನು ಮನಸ್ಸಿನ ಎಲ್ಲ ಪದರುಗಳಲ್ಲಿ ಮೂಡಿಸುವುದೇ ಉತ್ತಮ ತರಗತಿಯ ಪ್ರಾಣಾಹುತಿ.

## ೨೧೪

ಅತ್ಯಂತ ಕೆಳಮಟ್ಟದ ವಿಚಾರದಲ್ಲಿ ಮನಸ್ಸಿನೊಂದಿಗೆ ಇಂದ್ರಿಯಗಳೂ ಕೆಲಸ ಮಾಡುವುವು. ಇಂದ್ರಿಯಗಳನ್ನು ಮನಸ್ಸಿನಿಂದ ಬೇರ್ಪಡಿಸಿದರೆ ವಿಚಾರವು ಉನ್ನತ ಮಟ್ಟದ್ದಾಗುವುದು. ಎರಡನೆಯದಾಗಿ, ಮನಸ್ಸು ಶುದ್ಧವಾಗಬೇಕು.

೨೧೫

ನಾನು ಮಾಡುವ ತಮಾಷೆಯಲ್ಲಿ ಸಹ ನಿರರ್ಥಕತೆಯಾಗಲಿ ಮೂರ್ಖತೆಯಾಗಲಿ ಇರುವುದಿಲ್ಲ. ಅದರಲ್ಲಿ ಏನಾದರೊಂದು ಉಪದೇಶವಿದ್ದೇ ಇರುತ್ತದೆ; ಅದಕ್ಕೆ ಏನಾದರೊಂದು ಅರ್ಥ ಇದ್ದೇ ಇರುತ್ತದೆ.

೨೧೬

ಪ್ರಾಮಾಣಿಕತೆಯು ಹೃದಯದಲ್ಲಿಯೆ ಇದ್ದಾಗ ಅದು ಕೇವಲ ಸತ್ ಎನಿಸುವುದು. ಅದು ಪ್ರಕಟವಾದಾಗ ಮಾತ್ರ ಪ್ರಾಮಾಣಿಕತೆ ಎನಿಸುವುದು.

೨೧೭

ಯಾವುದನ್ನು ಪಡೆಯುವುದರಿಂದ ಎಲ್ಲವನ್ನೂ ಪಡೆದಂತಾಗುವುದೋ ಅದನ್ನು ಪಡೆಯಲು ನಾವು ಪ್ರಯತ್ನಿಸಬೇಕು.

೨೧೮

ಎಲ್ಲಿಂದ ಸೃಷ್ಟಿಯು ಪ್ರಾರಂಭವಾಗುವುದೋ ಅದನ್ನೆಲ್ಲ ಹೃದಯಮಂಡಲವೆಂದು ಕರೆಯುವರು.

೨೧೯

ಯಾವುದಾದರೊಂದು ವಸ್ತುವನ್ನು ಅರಿಯಬೇಕಾದರೆ ನಾವು ಉಳಿದ ವಸ್ತುಗಳನ್ನು ಆ ಕ್ಷಣ ಮರೆಯಬೇಕಾಗುವುದು. ಆದುದರಿಂದ ಒಂದು ಅರ್ಥದಲ್ಲಿ ಮರೆವೇ ಅರಿವೆಂದು ಹೇಳಬಹುದು.

೨೨೦

ತತ್ತ್ವಜ್ಞಾನಿಗಳೆಂದು ಯಾರನ್ನು ಕರೆಯಬೇಕು ಗೊತ್ತೆ ? ಯಾರು ಜನಸಾಮಾನ್ಯರಿಗೆ ತಿಳಿಯದ ಮಾತನ್ನು ಹೇಳುವರೋ ಹಾಗೂ ಸ್ವತಃ ಎಂದಿಗೂ ಆಚರಣೆಯಲ್ಲಿ ತರುವುದಿಲ್ಲವೋ ಅವರೇ ತತ್ತ್ವಜ್ಞಾನಿಗಳು !

೨೨೧

ನಾನು ಬೇರೆಯವರಿಂದ ಏನನ್ನೂ ಮುಚ್ಚಿಡುವುದಿಲ್ಲ; ಮತ್ತು ನನ್ನ ತಪ್ಪುಗಳನ್ನೂ ನಿಸ್ಸಂಕೋಚವಾಗಿ ಒಪ್ಪಿಕೊಳ್ಳುತ್ತೇನೆ.

೨೨೨

ಮನಸ್ಸು ಎಲ್ಲಿಗೇ ಹೋಗಲಿ–ದೂರ ಹೋಗಲಿ ಅಥವಾ ಸಮೀಪವೇ ಹೋಗಲಿ – ಅಷ್ಟೇ ಕಾಲ ತೆಗೆದುಕೊಳ್ಳುತ್ತದೆ. ಏಕೆ ಗೊತ್ತೆ ? ಮಾನವನ ಮನಸ್ಸು ಸರ್ವವ್ಯಾಪಿ ಹಾಗು ಸರ್ವಶಕ್ತವಾದ ಪರಾಮನಸ್ಸಿನ ಅಂಶವೇ ಆಗಿದೆ. ಆದುದರಿಂದ ಅದರ ಶಕ್ತಿಯೂ ಅನಂತವಾಗಿದೆ.

೨೨೩

ನಾವು ನಮ್ಮ ಅಭಿಮಾನವನ್ನು ಬಿಟ್ಟಾಗಲೇ ಭಗವಂತನನ್ನು ಪಡೆಯಲು ಸಾಧ್ಯವಾಗುವುದು.

೨೨೪

ನನ್ನನ್ನು ನೋಡಲು ಅನೇಕರು ಬರುವರು. ಆದರೆ ಯಾರೂ ನನ್ನನ್ನು ನೋಡುವುದೇ ಇಲ್ಲ.

೨೨೫

ಮನುಷ್ಯನು ಆಧ್ಯಾತ್ಮಿಕ ಕ್ಷೇತ್ರವನ್ನು ಪ್ರವೇಶಿಸಿದಾಗ ಆತನಲ್ಲಿ ಅಂತರ್ಜ್ಞಾನವು ತಾನಾಗಿಯೇ ಬೆಳೆದು ಬರುವುದು.

೨೨೬

ನಿಸರ್ಗದ ಶಕ್ತಿಗಳ ಮೇಲೆ ನಿಯಂತ್ರಣ ಸಂಪಾದಿಸುವುದೇ ಯೋಗಿಯ ಧ್ಯೇಯ.

೨೨೭

ನೀವು ಗುರುವಿನಲ್ಲಿ ಪ್ರತಿಧ್ವನಿಯನ್ನು ಹುಟ್ಟಿಸಬಲ್ಲಿರಾದರೆ ಗುರುವು ನಿಮಗಾಗಿ ನಿರಂತರ ಸ್ಮರಣೆಯನ್ನು ಮಾಡುವನು. ಈ

ವಿಷಯವನ್ನು ಕುರಿತು 'ಅನಂತದೆಡೆಗೆ' ಎಂಬ ಪುಸ್ತಕದಲ್ಲಿ ಸಾಕಷ್ಟು ಹೇಳಿದ್ದೇನೆ.

೨೨೮

ಅಜ್ಞಾನವು ಇರದಿದ್ದರೆ ಜ್ಞಾನವೂ ಇರುತ್ತಿದ್ದಿಲ್ಲ. ನಾವು ಅಜ್ಞಾನದ ಸಹಾಯದಿಂದಲೇ ಜ್ಞಾನವನ್ನು ಪಡೆಯುವೆವು. ಆದುದರಿಂದಲೇ ನಾನು ತಮಾಷೆಗಾಗಿ ಅಜ್ಞಾನವೇ ನಿಜಾರ್ಥದಲ್ಲಿ ಜ್ಞಾನವೆಂದು ಹೇಳುತ್ತೇನೆ. ಅಜ್ಞಾನದ ತಳದಲ್ಲಿಯೇ ನಾವು ಪದಾರ್ಥಗಳ ಸ್ವರೂಪವನ್ನು ಅರಿತುಕೊಳ್ಳುವೆವು (ಅಥವಾ ವಿಷಯಗ್ರಹಣ ಮಾಡುವೆವು); ಮತ್ತು ನಮಗೆ ತಿಳಿವಳಿಕೆಯಿಲ್ಲದಾಗ ಇಲ್ಲವೆಂಬುದರ ಅರಿವೇ ಮುಂದುವರಿಯಲು ಪ್ರೇರಿಪಿಸುವುದು.

೨೨೯

ಜ್ಞಾನದ ಬಗೆಗೆ ಅಹಂಭಾವ ತಾಳಿದಾಗ ಅದು ಅಜ್ಞಾನವಾಗಿ ಪರಿಣಮಿಸುವುದು.

೨೩೦

ಕೇವಲ ಶಾಂತಿಗಾಗಿ ಸಹಜಮಾರ್ಗವನ್ನು ಸೇರುವವರು ಅಫೀಮು ತಿನ್ನುವವರಂತೆ. ಅವರಿಗೆ ಕೇವಲ ಅಮಲು ಬೇಕೇ ಹೊರತು ಮತ್ತೇನೂ ಬೇಡ. ಅವರಿಗೆ ದೇವರು ಬೇಕಾಗಿಲ್ಲ. ಶಾಂತಿಯನ್ನಷ್ಟೇ ಅನ್ವೇಷಿಸಿದಾಗ ದೇವರು ದೂರನಾಗುವನು. ಏಕೆಂದರೆ, ಅವರು ಶಾಂತಿಯಲ್ಲಿಯೇ ಸಿಲುಕಿಬಿಡುವರಾದ್ದರಿಂದ ಅದರಾಚೆಗಿನ ಜ್ಞಾನವು ಹೊಳೆಯದಂತಾಗಿ ದೇವರಿಂದ ದೂರವುಳಿಯುವರು. ಬದಲು, ನಾವು ದೇವರನ್ನು ಅನ್ವೇಷಿಸಿದರೆ ಶಾಂತಿ ತಾನಾಗಿಯೆ ದೊರೆಯುವುದು. ಹೀಗೆ, ಪ್ರವಾಹದ ಮೇಲಿನ ಗುಳ್ಳೆಗಳನ್ನರಸದೆ ನದಿಯನ್ನೇ ಅರಸುವಂಥವರಿಗೆ ಮಾತ್ರ ದೇವರು ಸಿಗುವನು.

೨೩೧

ಚಟವನ್ನು ಬಿಡುವುದು ಬಹಳ ಕಠಿಣ. ಪ್ರತಿಯೊಬ್ಬ ಕಳ್ಳನಿಗೂ ಕಳವು ಮಾಡಬಾರದೆಂದು ಗೊತ್ತಿದೆ. ಆದರೂ ಅದನ್ನಾತ ಬಿಡಲಾರ.

ಎಲ್ಲ ಕೆಟ್ಟ ಚಟಗಳಿಂದ ಮುಕ್ತನಾಗಲು ಪ್ರಾರ್ಥನೆಯೊಂದೇ ದಿವ್ಯೋಪಾಯ.

೨೩೨

ಯಾರಾದರೂ ನನ್ನ ವಯಸ್ಸನ್ನು ಕೇಳಿದರೆ ಮಾತ್ರ ನನಗೆ ಮುಪ್ಪು ಬಂತೆಂಬ ಅರಿವಾಗುತದೆ. ಇಲ್ಲದಿದ್ದರೆ ನಾನು ನನ್ನನ್ನು ಯಾವಾಗಲೂ ತರುಣನೆಂದೇ ಭಾವಿಸುತ್ತೇನೆ.

೨೩೩

ನಮ್ಮ ಪೂರ್ವಜರಾದ ಋಷಿ–ಮುನಿಗಳು ಏನೇನು ಹೇಳಿರುವರೋ ಅದಕ್ಕಿಂತ ಮುಂದಿನದನ್ನಾಗಲಿ, ಹೆಚ್ಚಿನದನ್ನಾಗಲಿ ನಾವು ವಿಚಾರಮಾಡಲು ಸಾಧ್ಯವಿಲ್ಲವೆಂದು ತಿಳಿದಿರುವುದೇ ನಮ್ಮ ದೊಡ್ಡ ತಪ್ಪು. ಇದರಿಂದ ನಮ್ಮ ಪ್ರಗತಿಯೆ ಆಗುವುದಿಲ್ಲ.

ನಮ್ಮ ಇನ್ನೊಂದು ದೋಷವೆಂದರೆ, ನಾವು ನಮ್ಮ ಬುದ್ಧಿಯನ್ನು ಉಪಯೋಗಿಸದೆ ಮುಂದೆ ಸಾಗುವೆವು. ಯಾರಾದರೂ ದೇವರ ಅಸ್ತಿತ್ವವನ್ನು ಅಲ್ಲಗಳೆದರೆ ಅವರನ್ನು ಬಹು ದೊಡ್ಡ ತತ್ತ್ವವೇತ್ತರೆಂದು ತಿಳಿಯುವೆವು.

೨೩೪

ನಿಜವಾದ ಬಂಧನ ಯಾವುದೆಂದು ನಾವು ವಿಚಾರಮಾಡಿದಾಗ ಮಮಕಾರವೇ ಆ ಬಂಧನವೆಂದು ನನಗೆ ಹೊಳೆಯಿತು.

೨೩೫

ನಾನು ಒಮ್ಮೊಮ್ಮೆ ಎಷ್ಟು ವಿಚಾರಶೂನ್ಯನಾಗುವೆನೆಂದರೆ ಪ್ರಯತ್ನಪಟ್ಟರೂ ಒಂದೂ ವಿಚಾರ ಬರುವುದಿಲ್ಲ.

೨೩೬

ಪ್ರಪಂಚದ ಒಳಗೆ ಇರುವವರಿಂದ ಪ್ರಾಪಂಚಿಕ ಸಮಸ್ಯೆ (ಜಾಗತಿಕ ಸಮಸ್ಯೆ)ಗಳನ್ನು ಬಿಡಿಸಲಾಗುವುದಿಲ್ಲ. ಯಾರು

ಪ್ರಪಂಚದಿಂದ ದೂರವಿರುವರೋ ಅವರಿಂದ ಮಾತ್ರ ಬಿಡಿಸಲು ಸಾಧ್ಯ.

೨೩೭

ನಾನು ನೋಡಿದುದನ್ನು ನುಡಿಯುತ್ತೇನೆ.

೨೩೮

ಬೇಕಾದಂಥ ದೊಡ್ಡ ಸಂತನಿರಲಿ, ನನ್ನ ಸ್ಥಿತಿಯನ್ನು ತಿಳಿದುಕೊಳ್ಳಲಾರ. ಏಕೆಂದರೆ, ಯಾರೂ ಆತ್ಮನಿರಸನದ ಸ್ಥಿತಿಯಲ್ಲಿರುವುದಿಲ್ಲ.

೨೩೯

ಪರಿಪೂರ್ಣತೆಯನ್ನು ಹೊಂದುವುದು ಕಠಿಣವೇ ? ಹೌದು, ಅಲ್ಲ ಎಂದು ಎರಡೂ ಉತ್ತರ ಕೊಡಬಹುದು. ಮನುಷ್ಯನಲ್ಲಿಯ ಪಶುತ್ವವನ್ನು ತೆಗೆದು ಬಿಟ್ಟಿದ್ದೇ ಆದರೆ ಪರಿಪೂರ್ಣತೆ ತಾನಾಗಿಯೇ ಮೈದೋರುವುದು.

೨೪೦

ಪ್ರೀತಿ ಅಥವಾ ಪ್ರೇಮವೆಂದರೇನು ? ಏತಕ್ಕಾಗಿ ಅಥವಾ ಯಾವ ಲಾಭಕ್ಕಾಗಿ ಎಂಬುದನ್ನೇ ಅರಿಯದ ಒಂದು ಅಗಾಧ ಆಂತರಿಕ ಸಂಬಂಧ.

೨೪೧

ಯಾರು ನನ್ನಿಂದ ದೂರವಿದ್ದರೂ ಸದಾ ನನ್ನನ್ನೇ ನೆನೆಯುತ್ತಿರುತ್ತಾರೋ ಅವರಿಗೆ ಸತ್ಸಂಗದ ಅನುಕೂಲತೆಯಿರದಿದ್ದರೂ ತುಂಬ ಲಾಭವಾಗುತ್ತದೆ. ಆದರೆ ಯಾರು ನನ್ನ ಹತ್ತಿರವಿದ್ದೂ ಆಂತರ್ಯದಲ್ಲಿ ನನ್ನಿಂದ ದೂರವಿರುವರೋ ಅವರು ಯಾವ ಲಾಭವನ್ನೂ ಪಡೆಯಲಾರರು.

೨೪೨

ನನ್ನ ಅಭಿಪ್ರಾಯದಲ್ಲಿ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ಸಮಾಜಸೇವೆಯಲ್ಲ. ನೀವು ಅಶಾಂತಜೀವಿಗಳಿಗೆ ಸ್ವಲ್ಪಾದರೂ ಸಮಾಧಾನವನ್ನು ನೀಡಬಲ್ಲಿರಾದರೆ ಅದಕ್ಕಿಂತ ದೊಡ್ಡ ಸಮಾಜಸೇವೆ ಮತ್ತೊಂದಿರಲಾರದು. ಅದಕ್ಕಾಗಿ ಆತ್ಮೋದ್ಧಾರದ ಉಪಾಯವನ್ನು ಕುರಿತು ಚಿಂತಿಸುವುದೇ ಮೊದಲನೆಯ ಹೆಜ್ಜೆ. ಆದರೆ ನಮ್ಮ ಸಮಾಜಸೇವಕರೆನ್ನಿಸಿ ಕೊಳ್ಳುವವರು ಪರರ ಬಗೆಗೆ ಹೆಚ್ಚು ಚಿಂತೆ ಮಾಡುವವರಂತೆ ತೋರಿಸಿಕೊಳ್ಳುತ್ತ ಆತ್ಮವನ್ನೇ ಮರೆತುಬಿಡುವುದು ವಿಷಾದಕರ.

೨೪೩

ವ್ಯಕ್ತಿಯ ಸಮಸ್ಯೆಯೆ ಸಮೂಹದ ಸಮಸ್ಯೆ. ಏಕೆಂದರೆ ವ್ಯಕ್ತಿಯಿಲ್ಲದೆ ಸಮೂಹವಿಲ್ಲ. ವ್ಯಕ್ತಿಯು ತನ್ನ ಪಾಲಿನ ಕರ್ತವ್ಯವನ್ನು ಮಾಡಿದರೆ ದೇವರು ತನ್ನ ಕರ್ತವ್ಯವನ್ನು ಮಾಡುವನು. ಸಾಮಾನ್ಯವಾಗಿ ನಾವು ನಮ್ಮ ಕರ್ತವ್ಯಗಳ ಕಡೆಗೆ ಗಮನ ಕೊಡದೆ ಆತನ ಅಧಿಕಾರವನ್ನು ಆಕ್ರಮಿಸುವೆವು.

೨೪೪

ನಾವು ಮನುಷ್ಯಮಾತ್ರರಿಗೆ ಕೊಡಬಯಸುವ ಎರಡೇ ಎರಡು ಶಬ್ದಗಳ ಸಂದೇಶವೆಂದರೆ 'ನಿಮ್ಮನ್ನು ಮರೆತು ಬಿಡಿರಿ' ಎಂಬುದು.

೨೪೫

ಜನರು ದೇವರ ಅಸ್ತಿತ್ವದ ಬಗ್ಗೆ ಸಂಶಯಪಡುವರೇ ಹೊರತು ಆತನ ನಾಸ್ತಿತ್ವದಲ್ಲಿ ಸಂಶಯ ತಾಳುವುದಿಲ್ಲ. ಯಾವುದಾದರೊಂದು ವಸ್ತುವು ಇದ್ದರೆ ತಾನೆ ಅದರ ಬಗ್ಗೆ ಸಂಶಯವುಂಟಾಗುವುದು! ಅದು ಇಲ್ಲದಿದ್ದರೆ ಯಾವ ಸಂಶಯವೂ ಇರುವುದಿಲ್ಲ.

೨೪೬

ನಾವು ಸೂರ್ಯನನ್ನು (ಅರ್ಥಾತ್ ದೇವರನ್ನು) ನೋಡಬೇಕೆಂದೇನೋ ಬಯಸುವೆವು. ಆದರೆ ದುರ್ದೈವದ ಸಂಗತಿಯೆಂದರೆ ಆತನ ಕಡೆಗೆ ಬೆನ್ನು ತಿರುಗಿಸಿಯೆ ನಡೆಯುತ್ತಿದ್ದೇವೆ.

೨೪೭

ನಿಜವಾದ ಗುರು ನಿಜವಾದ ಸೇವಕನಾಗುತ್ತಾನೆ.

೨೪೮

ಅನುಭವವೆಂಬುದು ಕಣ್ಣುಗಳಿಲ್ಲದೆ ನೋಡಿದಂತೆ.

೨೪೯

ಸ್ವಾತಂತ್ರ್ಯದಿಂದ ಸ್ವಾತಂತ್ರ್ಯಪಡೆಯುವುದೇ ಮುಕ್ತಿ; ಸಾವಿನ ಸಾವೇ ಸಾಕ್ಷಾತ್ಕಾರ.

೨೫೦

ಉನ್ನತ ಸ್ತರಗಳಲ್ಲಿ ಕರ್ಮವೆಲ್ಲ ಅಕರ್ಮವಾಗುವುದು.

೨೫೧

ದೇವರ ವರ್ಣನೆಯನ್ನಾಗಲಿ, ವ್ಯಾಖ್ಯೆಯನ್ನಾಗಲಿ ಮಾಡಲು ಬರುವುದಿಲ್ಲ. ಒಂದು ವೇಳೆ ಹಾಗೆ ಮಾಡಿದುದೇ ಆದರೆ ನಾವು ಆತನನ್ನು ಇತರ ಪದಾರ್ಥಗಳೊಡನೆ ಹೋಲಿಸತೊಡಗುವೆವು. ಇದು ತೀರ ಅಸಂಬದ್ಧ. ಆದುದರಿಂದ ನಾವು ಆತನನ್ನು 'ನೇತಿ, ನೇತಿ' ಎಂದು ವ್ಯತಿರೇಕದಿಂದಲೇ ವರ್ಣಿಸಲು ಸಾಧ್ಯ.

೨೫೨

ಪ್ರಕಾಶವು ನಮ್ಮ ಧ್ಯೇಯವಲ್ಲ. ಪ್ರಕಾಶದ ಆಚೆಗಿರುವ ಭಗವಂತನೇ ನಮ್ಮ ಗುರಿ. ನೀವು ಕೇವಲ ಪ್ರಕಾಶವನ್ನೇ ನೋಡಲಪೇಕ್ಷಿಸಿದರೆ ದೇವರನ್ನು ನೋಡಲಾರಿರಿ. ಏಕೆಂದರೆ, ಆತನು ಪ್ರಕಾಶದ ಆಚೆಗಿರುವನು.

೨೫೩

ದೇವರು ನಮ್ಮೊಳಗೇ ಇರುವನೆಂದು ಸಾಮಾನ್ಯವಾಗಿ ಜನರು ಹೇಳುವರು. ಆದರೆ ದುಃಖದ ಸಂಗತಿಯೆಂದರೆ ನಾವು ದೇವರೊಳಗೆ ಇರುವುದಿಲ್ಲ.

೨೫೪

ಜನರು ಸರಿಯಾದ ದಾರಿಗೆ ಬರಲೆಂಬ ಉದ್ದೇಶದಿಂದ ನಾನೊಂದು ಕ್ರಾಂತಿಯನ್ನುಂಟು ಮಾಡಬಯಸುತ್ತೇನೆ. ನಮ್ಮ ಸಹಜಮಾರ್ಗ ಸಾಧನಾ ಪದ್ಧತಿಯೇ ಅಂತಹುದಾಗಿದೆ.

೨೫೫

ರಾಜಯೋಗವು ಯಾವ ಮಂತ್ರದ ಜಪವನ್ನೂ ಹೇಳುವುದಿಲ್ಲ. ಜಪದ ಅರ್ಥವನ್ನು ವಿವರಿಸುತ್ತ 'ಜಪ ಎಂದರೆ ಧ್ಯಾನ' ಎಂದು ಹೇಳುತ್ತದೆ.

೨೫೬

ಮೊದಲು ನೀವು ನಿರ್ಮಿಸಿದ ರಾಜ್ಯವನ್ನು ನಾಶಮಾಡಿರಿ. ಆಗ ಮಾತ್ರ ದೇವರ ರಾಜ್ಯವು ದೊರೆಯುವುದು.

೨೫೭

ಮೂರ್ಖನನ್ನು ಹುಡುಕಬೇಕಾದರೆ ಸುಶಿಕ್ಷಿತರಲ್ಲಿಯೇ ಹುಡುಕಿರಿ. ಅವರಿಗೆ ತಮ್ಮ ಜ್ಞಾನ ಹಾಗು ಬುದ್ಧಿವಂತಿಕೆಯ ಬಗೆಗೆ ಬಹಳ ಅಹಂಕಾರವಿರುತ್ತದೆ.

೨೫೮

ದೇವರ ಕಡೆಗೆ ನಮ್ಮ ಹೃದಯದ ಬಾಗಿಲನ್ನು ತೆರೆದಿಡದಿದ್ದರೆ ಜ್ಞಾನವು ಕಿವುಡಾಗುವುದು. (ಅರ್ಥಾತ್ ಜ್ಞಾನಪ್ರಾಪ್ತಿಯಾಗುವುದಿಲ್ಲ.)

೨೮೩

ನಾನು ಸಾಧನ ಕಾಲದಲ್ಲಿ ಏಕಕಾಲಕ್ಕೆ ಮೂರು ಕೆಲಸಗಳನ್ನು ಮಾಡುತ್ತಿದ್ದೆ :

೧) ನಿರಂತರ ಸ್ಮರಣೆ;

೨) ಉನ್ನತ ಅವಸ್ಥೆಯಲ್ಲಿ (Higher Region) ಯಾವ ವಸ್ತುವು ಕಾಣಿಸಿಕೊಳ್ಳಲಿದೆಯೋ ಅದರಲ್ಲಿ ತನ್ಮಯನಾಗುವುದು;

೩) ಲಯ ಅವಸ್ಥೆ – ಮುಂದಿನ ಘಟ್ಟದ ಅವಸ್ಥೆಯು ನನಗೆ ಅದಕ್ಕಿಂತ ಹಿಂದಿನ ಮಜಲಿನಲ್ಲಿಯೆ ತಿಳಿದುಬಿಡುತ್ತಿತ್ತು.

೨೮೪

ಮನಸ್ಸು ಒಂದು ಕಾಲಕ್ಕೆ ಒಂದೇ ವಿಷಯವನ್ನು ಕುರಿತು ಯೋಚಿಸಬಲ್ಲುದು. ಕಾರಣವೇನೆಂದರೆ; ಮೊಟ್ಟ ಮೊದಲು ನಿಜತತ್ತ್ವದ ಒಡಲಿನಿಂದ ಒಂದೇ ಒಂದು ವಸ್ತು ಹುಟ್ಟಿಕೊಂಡಿತು.

೨೮೫

ಪರಿವರ್ತನದ (Transformation) ಅರ್ಥವಿಷ್ಟೆ: ಭೌತಿಕತೆಯಿಂದ ದೈವಿಕತೆಯ ಕಡೆಗೆ ಸಾಗುವುದು. ಆದುದರಿಂದ ಇದಕ್ಕಾಗಿ ನಿಮಗೆ ಯಾವ ಪದ್ಧತಿ ಸರಿಯೆಂದೆನಿಸುವುದೋ ಅದನ್ನೇ ಅನುಸರಿಸಿರಿ.

೨೮೬

ಒಂದು ಮಣ್ಣಿನ ಬೊಂಬೆಯನ್ನು ಚಿನ್ನವೆಂದು ತಿಳಿದು ಎದೆಗೆ ಅವಚಿಕೊಂಡರೆ ಅದು ಚಿನ್ನವಾಗಬಲ್ಲುದೆ ? ಅದರಂತೆ ಪ್ರತಿಮೆಯು ಪ್ರತಿಮೆಯೆ ಹೊರತು ಮೂಲವಾಗಲಾರದು.

೨೮೭

ಯಾವ ಇಚ್ಛೆಗೆ ಬೇರು (ಮೂಲ) ಇರುವುದಿಲ್ಲವೋ ಅದು ಇಚ್ಛೆಯೆನಿಸುವುದಿಲ್ಲ. ಯಾವುದರೊಂದಿಗೆ ಮನಸ್ಸು

ಅಂಟಿಕೊಂಡಿದೆಯೋ ಅಲ್ಲಿ ಇಚ್ಛೆ ಹುಟ್ಟಿಕೊಳ್ಳುವುದು. ಏಕೆಂದರೆ, ಮನಸ್ಸು ಅಲ್ಲಿ ಅಸಕ್ತವಾಗಿದೆ.

೨೮೮

ಎಲ್ಲಿಯವರೆಗೆ ನಾವು ಸಾಧನೆಯ ಒಳಗೆ ಆಳವಾಗಿ ಪ್ರವೇಶಿಸುವುದಿಲ್ಲವೋ ಅಲ್ಲಿಯವರೆಗೆ ಉನ್ನತ ಅನುಭವಗಳು ಪ್ರಾಪ್ತವಾಗುವುದು ಶಕ್ಯವಿಲ್ಲ.

೨೮೯

ಶಾಸ್ತ್ರಗಳಲ್ಲಿ ಸಾಯುಜ್ಯತೆಯ ಅವಸ್ಥೆಯು ಎಲ್ಲಕ್ಕಿಂತ ಉತ್ತಮವೆಂದು ವರ್ಣಿಸಲಾಗಿದೆ. ಆ ಸ್ಥಿತಿಯಲ್ಲಿ ನಾವು ಪರಮಾತ್ಮನೊಂದಿಗೆ ಬೆರೆತು ಸ್ವಲ್ಪ ಮಟ್ಟಿಗೆ ಆತನ ಬಣ್ಣವನ್ನು ಪಡೆಯುವೆವು. ಸಹಜಮಾರ್ಗದಲ್ಲಿ ಈ ಸ್ಥಿತಿಯನ್ನು ಬಹಳ ಸುಲಭವಾಗಿ ಪಡೆಯಲಾಗುವುದು.

೨೯೦

ನನ್ನ ಕೆಲಸಕ್ಕೆ ಪ್ರೋತ್ಸಾಹ ಸಿಗಬೇಕೆಂದು ನನಗೂ ಅಪೇಕ್ಷೆ ಇರುತ್ತದೆ. ಯಾರಾದರೂ ನಾನು ಕೊಟ್ಟ ಪ್ರಾಣಾಹುತಿಯಿಂದ ತಮಗೆ ಯಾವ ಅನುಭವವೂ ಉಂಟಾಗಲಿಲ್ಲವೆಂದು ಹೇಳಿದರೆ ನನಗೆ ತುಂಬ ನಿರುತ್ಸಾಹವಾಗುವುದು.

೨೯೧

ನಮ್ಮ ಸಾಧನದ ಗುರಿಯೆಂದರೆ, ಸಾಧ್ಯವಾದ ಮಟ್ಟಿಗೆ ನಾವು ಪರಮಾತ್ಮನಿಗೆ ಹತ್ತಿರವಾಗುತ್ತ ನಡೆಯಬೇಕು. ಅದರ ಲಕ್ಷಣವೆಂದರೆ ಪರಮಾತ್ಮನ ಗುಣಗಳಾದ ಸೂಕ್ಷ್ಮತೆ, ಸಮತೆ ಮುಂತಾದವು ನಮ್ಮಲ್ಲಿಯೂ ಬರಬೇಕು.

೨೫೯

ಭಗವಂತನನ್ನು ಪಡೆಯಬೇಕೆಂಬ ಇಚ್ಛೆ ನಿಜವಾಗಿ ಇಚ್ಛೆಯೆನಿಸುವುದಿಲ್ಲ. ಅದು ನಮ್ಮ ಕರ್ತವ್ಯ

೨೬೦

ನೀವು ಹಸಿದಾಗ 'ಹಸಿದವರಿಗೆ ಉಣ್ಣಿಸುತ್ತಿದ್ದೇವೆ' ಎಂಬ ಭಾವನೆಯಿಂದ ಊಟಮಾಡಿದರೆ ಅದು ಉತ್ತಮ ದಾನವಾಗಿಯೂ ಯಜ್ಞವಾಗಿಯೂ ಪರಿಣಮಿಸುವುದು. ಏಕೆಂದರೆ, ಆಗ ನೀವು (ನಿಮ್ಮ ಹೊಟ್ಟೆಯೆಂಬ) ಮಮಕಾರದಿಂದ ಮುಕ್ತರಾಗುವಿರಿ.

೨೬೧

ನಿರ್ವಿಕಲ್ಪ ಸಮಾಧಿಯು ಮೂಲತತ್ತ್ವದ (Reality) ಕಸ.

೨೬೨

ಕೆಲವರು 'ಧ್ಯಾನಸಮಯದಲ್ಲಿ ಇಷ್ಟದೈವವನ್ನು ಚಿಂತಿಸಬಹುದೆ?' ಎಂದು ಕೇಳುವರು. ನಾನವರಿಗೆ ಹೇಳುವೆ: ದೇವರನ್ನು ಮಾತ್ರ – ಅವನು ಹೇಗೆಯೆ ಇರಲಿ – ಚಿಂತಿಸಿರಿ. ಆತನ ಸೇವಕರಿಂದ ಏನೂ ಪ್ರಯೋಜನವಿಲ್ಲ.

೨೬೩

ಮಾಡುವವರು ನಾವು ಎಂದು ಭಾವಿಸಿದಾಗ ವಸ್ತುಗಳು ನಮ್ಮಲ್ಲಿಯೆ ಉಳಿದು ಪರರಿಗೆ ಯಾವ ಲಾಭವೂ ಆಗುವುದಿಲ್ಲ. ಆದರೆ ಮಾಡುವವರು ನಾವಲ್ಲ ಎಂದು ತಿಳಿದು ಮಾಡಿದ್ದಾದರೆ ಶಕ್ತಿಯು ದೂರದವರೆಗೆ ಸಂಚರಿಸಿ ಅದರಿಂದ ಪರರಿಗೆ ಲಾಭವಾಗುವುದು.

೨೬೪

ಸಿಟ್ಟು ಬಂದಾಗ ಆಕಾಶದ ಕಡೆಗೆ ನೋಡಿರಿ; ಇಲ್ಲವೆ ಕೃತ್ರಿಮವಾಗಿಯೆ ಏಕಾಗಲೊಲ್ಲದು, ನಕ್ಕುಬಿಡಿರಿ.

೨೬೫

ಮದ್ಯಪಾನವು ಆಧ್ಯಾತ್ಮಿಕ ಪ್ರಗತಿಯನ್ನು ತಡೆಗಟ್ಟುತ್ತದೆ. ಅದರ ಉನ್ಮಾದವು ದೈವೀ ಉನ್ಮಾದವನ್ನು ಹತ್ತಿಕ್ಕುತ್ತದೆ.

೨೬೬

ನನ್ನೊಂದಿಗೆ ಸ್ನೇಹ ಬೆಳೆಸಿದರೂ ಅದರಿಂದ ಲಾಭವಾಗುತ್ತದೆ. ಆದರೆ ಮಾಡಲೇನು ? ಜನರು ನನ್ನೊಡನೆ ಸ್ನೇಹ ಬೆಳೆಸಲು ಕೂಡ ಸಿದ್ಧರಿಲ್ಲ.

೨೬೭

ಲಯ ಅವಸ್ಥೆಯನ್ನುಂಟುಮಾಡಲು ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಪ್ರತಿರೋಧಗಳನ್ನೆಲ್ಲ ತೆಗೆದೊಗೆಯಬೇಕು. ಭಗವಂತನಲ್ಲಿ ಲಯ ಹೊಂದುವುದು ನಮ್ಮ ಕರ್ತವ್ಯವಾಗಿದೆ.

೨೬೮

ಗಾಯತ್ರೀ ಮಂತ್ರವು ನಿಜವಾಗಿಯೂ ಬಹಳ ಶ್ರೇಷ್ಠವಾದುದು. ಆದರೆ ಜನರಿಗೆ ಅದರ ಜಪದ ವಿಧಾನ ತಿಳಿಯದುದರಿಂದ ಬುದ್ಧಿಯು ತೀಕ್ಷ್ಣವಾಗುವ ಬದಲು ಮಂದವಾಗುತ್ತದೆ. ನನ್ನ ಕಡೆಗೆ ಇಂಥ ಎಷ್ಟೋ ಜನರು ಬಂದರು. ಅವರಲ್ಲೆಲ್ಲ ವಿಪರೀತ ಸ್ಥೂಲತೆ ಕಂಡುಬಂದಿತು. ತಾವು ಸಾವಿರಗಟ್ಟಲೆ, ಲಕ್ಷಗಟ್ಟಲೆ ಗಾಯತ್ರೀ ಮಂತ್ರದ ಜಪ ಮಾಡಿರುವುದಾಗಿ ಹೇಳಿದರು. ಈಗ ನೀವೇ ನೋಡಿ, ಅವರಿಗೆ ಅದೆಷ್ಟು ಹಾನಿಯಾಯಿತು.

೨೬೯

ಉಪ್ಪಿನ ಖನಿಯಲ್ಲಿ ಯಾವ ಪದಾರ್ಥ ಬಿದ್ದರೂ ಉಪ್ಪೇ ಆಗುವುದು. ಅದರಂತೆ ಸಂತನ ಸ್ಥಿತಿ ಹೇಗಿರಬೇಕೆಂದರೆ, ಆತನ ಸಂಪರ್ಕದಲ್ಲಿ ಬಂದವರೆಲ್ಲ ಆತನಂತೆಯೇ ಆಗಬೇಕು.

೨೭೦

ಯಾವಾಗಲೂ ಜನರು ತಾವಾಗಿಯೆ ತಿಳಿದುಕೊಂಡು ಯೋಚಿಸಲು ತೊಡಗುವಂಥ ಸನ್ನಿವೇಶಗಳನ್ನೇ ನಾನು ನಿರ್ಮಿಸುವೆನು.

೨೭೧

ಆಧ್ಯಾತ್ಮಿಕ ವಿಷಯದಲ್ಲಿ ಹೆಜ್ಜೆಹೆಜ್ಜೆಗೂ ನಾನು ಮೇಲಿನಿಂದ ಸೂಚನೆ ಪಡೆಯುತ್ತೇನೆ.

೨೭೨

ಸತ್‌ತತ್ತ್ವದೊಂದಿಗಿನ ಆಂತರಿಕ ಸಂಬಂಧವೇ ಭಕ್ತಿ ಎಂದು ಹೇಳಬಹುದು.

೨೭೩

ದುಷ್ಟವಿಚಾರಗಳಿಂದ ನಮ್ಮನ್ನು ಉಳಿಸಿಕೊಳ್ಳುವುದೇ ನಾವು ಮಾಡಬೇಕಾದ ಸರ್ವೋಚ್ಚ ತ್ಯಾಗ.

೨೭೪

ನೀವು ಸತ್‌ತತ್ತ್ವದಿಂದ ದೂರವಿದ್ದಾಗ ನಿಮ್ಮ ಇಚ್ಛಾ ಶಕ್ತಿಯು ದುರ್ಬಲವಾಗುವುದು.

೨೭೫

ಪೂಜೆಯೆಂದರೇನು ? ದೇವರ ತೊಡೆಯಲ್ಲಿ ಮಲಗಿಕೊಳ್ಳುವುದು. ಆವಶ್ಯಕತೆ ಇದ್ದಾಗ ಆತನು ನಿಮ್ಮನ್ನು ಎಬ್ಬಿಸಿ ಹಾಲುಣಿಸುವನು.

೨೭೬

ನಾನು ನನ್ನಲ್ಲಿ ಯಾವ ಶಕ್ತಿಯನ್ನೂ ಅನುಭವಿಸುವುದಿಲ್ಲ. ಆದರೆ ನನ್ನಷ್ಟಕ್ಕೆ ನಾನು ಚೇತರಿಸಿಕೊಂಡಾಗ ಮಾತ್ರ ವಿಶ್ವದ ಅಧಿಪತಿಯೆಂಬುದನ್ನು ಕಾಣುತ್ತೇನೆ.

೨೭೭

ಪ್ರಾಣಾಹುತಿಯಿಂದ ಆಗುವ ಲಾಭಗಳೆಂದರೆ– ೧) ಮಾನಸಿಕ ಒತ್ತಡಗಳೆಲ್ಲ ದೂರವಾಗುವುವು; ೨) ಆಂತರಿಕ ತೊಡಕುಗಳೆಲ್ಲ ನಿವಾರಣೆ ಹೊಂದುವುವು.

೨೭೮

ಧ್ಯಾನದಲ್ಲಿ ನೀವು ಪಡೆಯುವ ಉತ್ತಮ ಅವಸ್ಥೆಯನ್ನು ಹೆಚ್ಚುಹೊತ್ತು ಇಟ್ಟುಕೊಳ್ಳಲು ಪ್ರಯತ್ನಿಸಿರಿ. ಆಗ ನೀವು ಪ್ರಗತಿ ಹೊಂದುತ್ತಿರುವುದನ್ನು ನೀವೇ ಅನುಭವಿಸುವಿರಿ.

೨೭೯

ನನಗೆ ಅಧ್ಯಾತ್ಮವು ಅಗ್ಗದಲ್ಲಿ ದೊರೆಯಿತು. ಅದ್ದರಿಂದ ನಾನದನ್ನು ಅಗ್ಗವಾಗಿಯೆ ಹಂಚುತ್ತಿದ್ದೇನೆ.

೨೮೦

ಮೆದುಳಿನ ಮೇಲೆ ಸ್ವಲ್ಪ ಬಲಕೊಟ್ಟರೆ ಸಾಕು, ತತ್‌ಕ್ಷಣ ಸಮಾಧಿ ಹತ್ತುವುದು. ಆದರೆ ಸಾಮಾನ್ಯವಾಗಿ ನಾನು ಹಾಗೆ ಮಾಡುವುದಿಲ್ಲ. ಪ್ರತಿಯೊಂದು ಅವಸ್ಥೆಯೂ ನೈಸರ್ಗಿಕವಾಗಿ ಬರಬೇಕೆಂಬುದೇ ನನ್ನ ಇಚ್ಛೆ. ಮೇಲಾಗಿ ಮನುಷ್ಯನ ವಿಕಾಸಕ್ಕೆ ಸಮಾಧಿಯ ಅಗತ್ಯವೂ ಇಲ್ಲ.

೨೮೧

ನಿಜವಾದ ಗುರುವಾಗಲಿ, ಶಿಷ್ಯನಾಗಲಿ ದೊರೆಯುವುದು ತುಂಬ ಕಷ್ಟ. “ 'ಶಿಷ್ಯ'ನೆಂದರೆ ಶಾಸನಕ್ಕೆ, ಶಿಸ್ತಿಗೆ ಒಳಪಟ್ಟವನು” ಎಂದರ್ಥ.

೨೮೨

ಯಾರ ಮೆದುಳು ದುರ್ಬಲವಾಗಿರುವುದೋ ಅವರಲ್ಲಿ ಅನುಭವಶಕ್ತಿ ಕಡಿಮೆಯಿರುವುದು.

೨೯೨

ಗುರಿಯ ಕಡೆಗೆ ಯಾರೂ ಲಕ್ಷ್ಯವಿಡುವುದಿಲ್ಲ. ಸುಮ್ಮನೆ ಅತ್ತಿತ್ತ ಅಲೆದಾಡುತ್ತಾರೆ. ಆದರೆ, ನಾನಂತೂ, ಬಂಧು. ಯಾವಾಗಲೂ ಧ್ಯೇಯವನ್ನೇ ಎದುರಿಗಿಟ್ಟುಕೊಂಡಿರುತ್ತೇನೆ.

೨೯೩

ಅರಸನು ಸಿಂಹಾಸನವನ್ನೇರಿದಾಗ ಗುಲಾಮನಾಗುತ್ತಾನೆ. ಕೆಳಗಿಳಿದಾಗ ಸಾಮಾನ್ಯ ಪೌರನಾಗುತ್ತಾನೆ.

೨೯೪

ಅಪ್ರಾಮಾಣಿಕತೆಯು ಮೊದಲು ಲಾಭವನ್ನು ಕೊಡುತ್ತದೆ; ಪ್ರಾಮಾಣಿಕತೆಯು ಅನಂತರ ಮೊದಲನೆಯದು ಅಸ್ಥಾಯಿಯಾಗಿದ್ದರೆ ಎರಡನೆಯದು ಸ್ಥಾಯಿಯಾಗಿರುತ್ತದೆ.

೨೯೫

ಉಚ್ಚಮಟ್ಟದ ಕಾರ್ಯದಲ್ಲಿ (Higher Work) ನನಗೆ ಬಹಳ ರುಚಿ ಬರುತ್ತದೆ. ಅಭ್ಯಾಸಿಗಳ ಒಳ್ಳೆಯ ಅವಸ್ಥೆಯನ್ನು ನೋಡಿ ನೋಡಿ ಸಂತೋಷಪಡುತ್ತೇನೆ. ಆದರೆ, ಅವರೂ ಸ್ವಲ್ಪಮಟ್ಟಿಗೆ ಸಂವೇದನಶೀಲ ರಾಗಿರಬೇಕು.

೨೯೬

ಭಗವಂತನೇ ನನ್ನ ಮಾತುಗಳ ಟಂಕಸಾಲೆ. ನನ್ನ ಮನಸ್ಸು ಆತನಿಂದಲೇ ಸಂಸ್ಕರಿಸಲ್ಪಟ್ಟಿದೆ.

೨೯೭

ನಮ್ಮೊಳಗೆ ಸುಳಿಯುವ ಅನೇಕ ವಿಚಾರಗಳನ್ನು ನಾವು ವಾಯುಮಂಡಲದಿಂದ ಸ್ವೀಕರಿಸುತ್ತೇವೆ. ಕೆಲವನ್ನು ಸ್ವತಃ ಬೆಳೆಸಿಕೊಳ್ಳುತ್ತೇವೆ. ಆದರೆ ಉನ್ನತ ಘಟ್ಟಗಳಲ್ಲಿ ಕೆಟ್ಟ ವಿಚಾರಗಳು

ಶುದ್ಧಿ ಹೊಂದಲು ಅಭ್ಯಾಸಿಯು ಮನಸ್ಸನ್ನು ತಟ್ಟಿ ಹೋಗುತ್ತವೆ. ನಿಮ್ಮೊಳಗೆ ಶುದ್ಧತೆ ಇದೆ; ಮತ್ತು ಶುದ್ಧತೆ ಇದ್ದಲ್ಲಿ ರಿಕ್ತತೆಯಿರುತ್ತದೆ. ವಿಚಾರಗಳು ರಿಕ್ತತೆಯ ಕಡೆಗೇ ಹೆಚ್ಚಾಗಿ ನುಗ್ಗುತ್ತವೆ.

೧೯೮

ಎಲ್ಲಿಯವರೆಗೆ ನೀವು ಸ್ವಮತಾಭಿಮಾನಿಗಳಾಗಿರುವಿರೋ (dogmatic) ಅಲ್ಲಿಯವರೆಗೆ ನಿಮ್ಮಲ್ಲಿ ಪ್ರಶ್ನೆಗಳುದ್ಭವಿಸುವುವು. ಯಾವಾಗ ನೀವು ಭಗವದಭಿಮಾನಿಗಳಾಗುವಿರೋ (godmatic) ಆಗ ಎಲ್ಲ ಪ್ರಶ್ನೆಗಳೂ ತಾವಾಗಿಯೆ ಕರಗಿ ಹೋಗುವುವು.

೧೯೯

ಪ್ರಾಪಂಚಿಕ ವಸ್ತುಗಳನ್ನು ಗಳಿಸುವುದೆಂದರೆ ಅಧ್ಯಾತ್ಮವನ್ನು ಕಳೆದುಕೊಳ್ಳುವುದು. ನಮ್ಮ ವಿಚಾರಗಳನ್ನು (Thoughts) ಕಳೆದುಕೊಳ್ಳುವುದೇ ನಿಜವಾದ ಲಾಭ.

೨೦೦

ಸತ್ಯದ (Reality) ಆಚೆಗೆ ಇಣುಕಿ ನೋಡಿದಾಗ ಜ್ಞಾನವು ಒಂದು ಆತಂಕವಾಗಿ ತೋರುತ್ತದೆ. ಏಕೆಂದರೆ ದಿವ್ಯಜ್ಞಾನವನ್ನು (intuitive knowledge) ನಾವು ಸಾಮಾನ್ಯ ಜ್ಞಾನದ ಸಹಾಯದಿಂದಾಗಲಿ ಪುಸ್ತಕಗಳಿಂದ ಪಡೆದ ಜ್ಞಾನದ ಮಾಪನದಂಡದಿಂದಾಗಲಿ ಅಳೆಯಲು ಬರುವುದಿಲ್ಲ.

೨೦೧

ಭಗವಂತನ ಸರ್ವವ್ಯಾಪಿತ್ವದಲ್ಲಿ ನಮಗೆ ವಿಶ್ವಾಸವಿಲ್ಲವೆಂದೇ ನಾವು ದೇವಾಲಯಗಳಿಗೆ ಹೋಗುತ್ತೇವೆ. ಅಲ್ಲದೆ, ನಾವು ಆತನಿಗೆ ನಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿಲ್ಲವೆಂಬುದನ್ನೂ ಇದು ತೋರಿಸಿಕೊಡುತ್ತದೆ. ಸಮರ್ಪಣವನ್ನು ಜೀವನದಲ್ಲಿ ಒಮ್ಮೆ ಮಾತ್ರ ಮಾಡಲಾಗುವುದೇ ಹೊರತು ದಿನಾಲು ಅಲ್ಲ.

೩೦೨

ನಾವು ಯಾವ ಮಹಾತ್ಮರ ದರ್ಶನಕ್ಕೆಂದು ಹೋಗುವೆವೋ ಅವರ ಆಧ್ಯಾತ್ಮಿಕ ಸ್ಥಿತಿಯನ್ನು ಕಿಂಚಿತ್ತಾದರೂ ಪಡೆದುಕೊಂಡು ಮರಳಬೇಕು. 'ದರ್ಶನ'ದ ಅರ್ಥವೇ ಇದು.

೩೦೩

ನಾವು ಹಿಂದುಗಳು, ಬಾಹ್ಯರೂಪದ ಮಡಿಮೈಲಿಗೆಗಳ ಕಡೆಗೇ ಹೆಚ್ಚು ಗಮನ ಕೊಡುವೆವು. ಕೆಳಗಿನ ಜಾತಿಯವನೊಬ್ಬನು ನಮ್ಮ ಆಹಾರವನ್ನು ಮುಟ್ಟಿದರೆ ನಾವದನ್ನು ತಿನ್ನುವುದಿಲ್ಲ. ಆದರೆ ವಿಚಾರಗಳ ಬಗೆಗೂ ಸ್ಪೃಶ್ಯಾಸ್ಪೃಶ್ಯತೆ ಯಿರುವುದೆಂಬುದನ್ನು ನಾವು ಮರೆತೇ ಬಿಟ್ಟಿದ್ದೇವೆ.

॥ ಓಂ ತತ್ ಸತ್ ॥

# ಶ್ರೀರಾಮಚಂದ್ರ ಮಿಷನ್ನಿನಲ್ಲಿ ಸದಾಚಾರ ಸಂಬಂಧದ ನಿಯಮಗಳು

೧. ನಮ್ಮ ಬಾಳು ಜಲಪಕ್ಷಿ (ನೀರಗೋಳಿ) ಯಂತಾಗಬೇಕು. ಅದು ನೀರಿನಿಂದ ಮೇಲಕ್ಕೆ ಬಂದಾಗ ಅದರ ರೆಕ್ಕೆಗಳು ಸ್ವಲ್ಪಾದರೂ ತೊಯ್ದಿರುವುದಿಲ್ಲ.

೨. ಸತ್ಸಂಗಿ ಬಾಂಧವರೊಂದಿಗೆ ಪ್ರೇಮ ಹಾಗು ನಿತ್ಯದ ನಡೆ–ನುಡಿಗಳಲ್ಲಿ ಮಾಧುರ್ಯ, ಕೋಮಲತೆಗಳು ತುಂಬಿರಬೇಕು.

೩. ಗೆಳೆಯರೊಂದಿಗೂ ಹಗೆಗಳೊಂದಿಗೂ ಸಮಾನ ವರ್ತನೆಯಿರಲಿ. ಅರ್ಥಾತ್ ಇಬ್ಬರಿಗೂ ಒಳಿತನ್ನೇ ಬಗೆಯಿರಿ.

೪. ಪತಿವ್ರತಾ ಸ್ತ್ರೀಯರಂತೆ ಕೇವಲ 'ಒಡೆಯ'ನ ನೆನಹಿಗೆ ಮನದಲ್ಲಿ ಸ್ಥಾನವಿರಲಿ. ಅನ್ಯ ವಿಚಾರಗಳನ್ನು ತಡೆಯಬೇಕು.

೫. ವ್ಯರ್ಥದ ಮಾತುಗಳನ್ನಾಡಬಾರದು; ವ್ಯರ್ಥ ಚರ್ಚೆಯಲ್ಲಿ ತೊಡಗಬಾರದು. ಕಾದಂಬರಿಗಳನ್ನೋದಕೂಡದು. ಮನಸ್ಸನ್ನು ಇತರ ವಿಷಯಕ ಪ್ರೇಮದಲ್ಲಿ ತೊಡಗಿಸಬಾರದು. ಗೆಳತನದ ವ್ಯರ್ಥಗುಂಗನ್ನು ಬಿಟ್ಟುಬಿಡಬೇಕು. ಕೇವಲ ಭಗವಂತನೊಬ್ಬನನ್ನೇ ತಮ್ಮ ಗೆಳೆಯನೆಂದು ಭಾವಿಸಬೇಕು. ಭಗವತ್‌ಪ್ರೇಮದಿಂದ ತುಂಬಿತುಳುಕುವ ಧಾರ್ಮಿಕ ಗ್ರಂಥಗಳನ್ನು ಓದಲಡ್ಡಿಯಿಲ್ಲ. ಅಪ್ಪಣೆಯಿಲ್ಲದೆ ಗೂಢ ತತ್ತ್ವಜ್ಞಾನವನ್ನು ಓದುವ ಅಗತ್ಯವಿಲ್ಲ. ಯೋಗ್ಯತೆಯಿದ್ದರೆ ನೇರವಾಗಿ ಭಗವಂತನಿಂದ ಅಪ್ಪಣೆ ಪಡೆಯಬೇಕು; ಇಲ್ಲದಿದ್ದರೆ ನನ್ನಿಂದ.

೬. ಪರಸ್ಪರ ಬಾಂಧವ್ಯದ ವ್ಯವಹಾರವಿರಲಿ. ಆಪತ್ತಿನಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕು.

೭. ಈ ಮಾರ್ಗದ ಜೀವನವೇ ಶ್ರೇಷ್ಠ ಸದಾಚಾರ. ಪೂಜೆ, ಉಪಾಸನೆ, ಮನೆಯ ಬೇರೆ ಕೆಲಸಗಳು ಮುಂತಾದ ಬಾಹ್ಯಕ್ರಿಯೆಗಳನ್ನು ಯಥೋಚಿತವಾಗಿ ಮಾಡುವುದು ಪ್ರತಿಯೊಬ್ಬನ ಕರ್ತವ್ಯ.

೮. ಮಕ್ಕಳ ಪಾಲನೆ–ಪೋಷಣೆಯಲ್ಲಿ ಹೇಗೆ ತೊಡಗಿರಬೇಕೆಂದರೆ ಅದು ಹೃದಯದಲ್ಲಿ ರವೆಯಷ್ಟೂ ಅಂಟಿಕೊಳ್ಳಬಾರದು. ಅರ್ಥಾತ್ ಅವರ ಪ್ರೇಮವು ನಮಗೆ ಕಷ್ಟದಾಯಕವಾಗಬಾರದು.

೯. ಹೆಂಡತಿಯನ್ನು ತನ್ನ ಸಹಾಯಕಳನ್ನಾಗಿ ಮಾಡಿಕೊಳ್ಳಬೇಕು. ತಾನು ಸಂಸಾರ ರಥದ ಒಂದು ಗಾಲಿಯಾದರೆ ಅವಳು ಇನ್ನೊಂದು ಗಾಲಿ ಎಂದು ಭಾವಿಸಬೇಕು.

೧೦. ಕೇರಿಯವರೆಲ್ಲ ತನ್ನವರೆಂಬಂತೆ ವರ್ತಿಸಬೇಕು. ತನ್ನ ಬಗೆಗೂ ಅವರಲ್ಲಿ ಇದೇ ಭಾವನೆ ಮೂಡುವಂತೆ ವ್ಯವಹರಿಸಬೇಕು. ಇದೇ ರೀತಿ ಎಲ್ಲರೊಂದಿಗೂ ನಡೆದುಕೊಳ್ಳತಕ್ಕದ್ದು.

೧೧. ಆಪ್ತೇಷ್ಟರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದರೆ, ಒಳಗಿನ ಸಂಬಂಧ ಕಡಿದಂತೆ ಭಾಸವಾಗಬೇಕು. ಆದರೆ ಅವರ ಪ್ರತಿಯೊಂದು ಕಷ್ಟನಷ್ಟದಲ್ಲಿ ನೆರವಾಗಬೇಕು. ಈ ವ್ಯವಹಾರವು ಎಲ್ಲರೊಂದಿಗೂ ಇರತಕ್ಕದ್ದು. ಹಣವನ್ನು ಕೊಡು–ಕೊಳ್ಳುವ ವ್ಯವಹಾರದಿಂದ ಆದಷ್ಟು ದೂರವಿರಬೇಕು. ಒಂದು ವೇಳೆ ತೀರ ಅಗತ್ಯವೆನಿಸಿದರೆ, ಕೊಟ್ಟ ಹಣವು ತಿರುಗಿ ಬಾರದಿದ್ದರೂ ಪಶ್ಚಾತ್ತಾಪವಾಗದಷ್ಟು ಹಾಗೂ ಸಂಬಂಧದಲ್ಲಿ ಕೊರತೆಯೆನಿಸದಷ್ಟು ಹಣವನ್ನೇ ಕೊಡುವುದೊಳಿತು.

೧೨. ತನ್ನ ಮೇಲಿನ ಅಧಿಕಾರಿಗಳಲ್ಲಿ 'ಈ ಮನುಷ್ಯನು ಕರ್ತವ್ಯಪಾಲನೆಯಲ್ಲಿ ಹಿಂಜರಿಯುತ್ತಿರುವನೆ'ಂಬ ಭಾವನೆಯುಂಟಾಗದಂತೆ ನಡೆದುಕೊಳ್ಳಬೇಕು. ಸೇವೆಗೆ ಪ್ರತಿಫಲವಾಗಿ ದೊರೆತುದನ್ನು ಭಗವಂತನ ಪ್ರಸಾದವೆಂದು ತಿಳಿಯಬೇಕು.

೧೩. ತನ್ನ ಅಭಿಪ್ರಾಯಕ್ಕೆ ಯಾವ ಬೆಲೆಯೂ ಇಲ್ಲವೆಂದು ತೋರುವ ಸ್ಥಳದಲ್ಲಿ ಅಭಿಪ್ರಾಯವನ್ನು ಕೊಡದಿರುವುದೇ ಒಳ್ಳೆಯದು. ರೋಗವು ಉಲ್ಬಣಾವಸ್ಥೆಯಲ್ಲಿರುವಾಗ, ರೋಗಿಯು ಕೈ ಬಿಡುವನೆಂದು ಖಚಿತವಾದಾಗ ತಾನು ಡಾಕ್ಟರನಿದ್ದಹೊರತು ಔಷಧಿಯನ್ನು ಕೊಡಬಾರದು.

೧೪. ಎಲ್ಲರೊಂದಿಗೂ ತನ್ನ ಗೌಪ್ಯವನ್ನು ಹೇಳುತ್ತ ಕೂಡಬಾರದು. ಅಥವಾ 'ಈತನು ಏನನ್ನೋ ಮುಚ್ಚಿಟ್ಟಿದ್ದಾನೆ' ಎಂಬ ಭಾವನೆಯನ್ನೂ ಬರಗೊಡಬಾರದು. ನಿಸ್ಪೃಹನಾಗಿ ಸಾಧಾರಣಜೀವನ ನಡೆಸಬೇಕು. ಆದಷ್ಟು ಮಟ್ಟಿಗೆ ಚಿಂತೆಯನ್ನು ಸಮೀಪ ಬರಗೊಡಬಾರದು. ಒಂದು ವೇಳೆ ಬಂದರೂ ಅದನ್ನು ಈಶ್ವರಕೃಪೆಯೆಂದು ತಿಳಿದು ದೇವರಿಗೆ ಧನ್ಯವಾದಗಳನ್ನರ್ಪಿಸಬೇಕು. ಮನೆಯ ಸಾಮಾನ್ಯ ವ್ಯವಹಾರಗಳಲ್ಲಿ ಈ ಅಭ್ಯಾಸವನ್ನು ಮಾಡಬಹುದು.

೧೫. ಊಟ-ಉಡುಗೆಗಳ ವಿಷಯದಲ್ಲಿ ಏಕರಸವಾಗಬೇಕು. ಶುದ್ಧ ಗಳಿಕೆಯ ಕಡೆಗೆ ಗಮನವೀಯಬೇಕು.

೧೬. ತನ್ನ ಗುರುವಿಗೆ ಎಲ್ಲವನ್ನೂ ಅರ್ಪಿಸಿ (ಇಲ್ಲಿ ಹಣವೆಂದು ನನ್ನ ಅಭಿಪ್ರಾಯವಲ್ಲ) ಆತನನ್ನು ತನ್ನವನೆಂದು ತಿಳಿಯಬೇಕು. ಆತನೊಂದಿಗೆ ವ್ಯವಹರಿಸುವಾಗ ಮಾನವತೆಯ ನಿಯಮಗಳನ್ನು ಪಾಲಿಸಬೇಕು.

೧೭. ಸತ್ಸಂಗಿ ಬಾಂಧವರೊಂದಿಗೆ ಪ್ರಫುಲ್ಲತೆಯ ವರ್ತನೆಯಿರಬೇಕು ಮತ್ತು ಅವರಿಗೆ ಉನ್ನತಿಯಾಗುವಂತಿರಬೇಕು.

**ಶ್ರೀ ರಾಮಚಂದ್ರಜಿ ಮಹಾರಾಜ**
ಅಧ್ಯಕ್ಷರು, ಶ್ರೀ ರಾಮಚಂದ್ರ ಮಿಷನ್
ಷಾಹಜಹಾನ್‌ಪೂರ್ (ಉ.ಪ್ರ.)

## ಪ್ರಾರ್ಥನೆ

ಓ ನಾಥ! ನೀನೇ ಮಾನವಜೀವನದ ಗುರಿ.
ನಮ್ಮ ಇಚ್ಛೆಗಳು ನಮ್ಮ ಆತ್ಮೋನ್ನತಿಯಲ್ಲಿ ಬಾಧಕಗಳಾಗಿವೆ.
ನೀನೇ ನಮ್ಮ ಏಕಮಾತ್ರ ಸ್ವಾಮಿ ಮತ್ತು ಇಷ್ಟದೈವ.
ನಿನ್ನ ಸಹಾಯವಿಲ್ಲದೆ ನಿನ್ನ ಪ್ರಾಪ್ತಿಯು ಅಸಂಭವ.

ಮಲಗುವುದಕ್ಕು ಮುಂಚೆ ನಮ್ರತೆಯಿಂದ ಕುಳಿತುಕೊಂಡು ಸ್ವಲ್ಪ ಸಮಯ ಪ್ರಾರ್ಥನೆ ಮಾಡಿರಿ. ಭಕ್ತಿಭಾವದಿಂದ ಮೇಲಿನ ಶಬ್ದಗಳನ್ನು ಒಂದೆರಡು ಸಲ ಮನಸ್ಸಿನಲ್ಲಿ ಉಚ್ಚರಿಸಿದ ನಂತರ ಅದರ ನಿಜಾರ್ಥದ ಮೇಲೆ ಧ್ಯಾನ ಮಾಡುತ್ತ ಅದರಲ್ಲಿಯೇ ಮುಳುಗಿಬಿಡಲು ಪ್ರಯತ್ನಿಸಿರಿ.

'ಸಹಜಮಾರ್ಗ'ದಲ್ಲಿ ಇದೇ ಸರಿಯಾದ ಪ್ರಾರ್ಥನಾ ವಿಧಾನ.

## ಸಹಜಮಾರ್ಗದ ಹತ್ತು ನಿಯಮಗಳು

೧. ಬೆಳಗು ಮುಂಜಾನೆ ಏಳಿರಿ, ಸಂಧ್ಯೋಪಾಸನೆಯನ್ನು ನಿಯಮಿತ ಸಮಯಕ್ಕೆ ಮುಗಿಸಿರಿ. ಸೂರ್ಯೋದಯಕ್ಕೆ ಮುಂಚಿತವಾದರೆ ಬಹಳ ಒಳಿತು. ಪೂಜೆಗಾಗಿ ಪ್ರತ್ಯೇಕ ಸ್ಥಳವನ್ನೂ, ಆಸನವನ್ನೂ ಇರಿಸಿಕೊಳ್ಳಿರಿ. ಶಾರೀರಿಕ ಹಾಗೂ ಮಾನಸಿಕ ಪವಿತ್ರತೆಯ ಕಡೆಗೆ ವಿಶೇಷ ಲಕ್ಷ್ಯವಿರಲಿ.

೨. ನಿಮ್ಮ ಪೂಜೆಯನ್ನು ಆತ್ಮೋನ್ನತಿಯ ಪ್ರಾರ್ಥನೆಯೊಂದಿಗೆ ಆರಂಭಿಸಿರಿ. ಹೃದಯವು ಪ್ರೇಮ-ಭಕ್ತಿಗಳಿಂದ ತುಂಬಿರಲಿ.

೩. ದೇವರಲ್ಲಿ 'ಪೂರ್ಣ ಸಮರಸ'ವಾಗುವುದೇ ನಿಮ್ಮ ಧ್ಯೇಯವನ್ನಾಗಿಟ್ಟುಕೊಳ್ಳಿರಿ. ಧ್ಯೇಯವು ಪ್ರಾಪ್ತವಾಗುವವರೆಗೆ ನಿಲ್ಲಬೇಡಿರಿ.

೪. ನಿಮ್ಮ ಜೀವನವು ನಿಸರ್ಗದ ಹಾಗೆ ಸರಳ ಮತ್ತು ಸಾಧಾರಣವಾಗಿರಲಿ.

೫. ಸತ್ಯವಂತರಾಗಿರಿ. ಕಷ್ಟಗಳು ನಿಮ್ಮ ಹಿತಕ್ಕಾಗಿಯೆ ಬಂದ ದೈವೀ ಕೃಪೆಯೆಂದು ತಿಳಿದು ಕೃತಜ್ಞರಾಗಿರಿ.


೬. ಎಲ್ಲರನ್ನೂ ನಿಮ್ಮ ಸಹೋದರರೆಂದು ತಿಳಿದು ಹಾಗೆ ವರ್ತಿಸಿರಿ.

೭. ಯಾರಾದರೂ ಕೇಡು ಮಾಡಿದರೆ ಸೇಡು ಬಗೆಯಬೇಡಿರಿ. ಬದಲು ದೈವೀ ಸಂಪತ್ತೆಂದು ತಿಳಿದು ಧನ್ಯವಾದಗಳನ್ನರ್ಪಿಸಿರಿ.

೮. ಊಟ ಮಾಡುವಾಗ ದೇವರನ್ನು ನೆನೆಯುತ್ತ ದೊರೆತದ್ದನ್ನು ಪ್ರಸನ್ನತೆಯಿಂದ ಸ್ವೀಕರಿಸಿರಿ. ಶುದ್ಧ ಹಾಗೂ ಪವಿತ್ರಗಳಿಕೆಯ ಕಡೆಗೆ ಲಕ್ಷ್ಯವಿರಲಿ.

೯. ಜನರಲ್ಲಿ ಪ್ರೇಮ ಹಾಗೂ ಪವಿತ್ರಭಾವನೆಗಳನ್ನು ಮೂಡಿಸುವ ಹಾಗೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿರಿ.

೧೦. ಮಲಗುವಾಗ ದೇವರು ಎದುರಿನಲ್ಲಿರುವನೆಂದು ತಿಳಿದು, ಮಾಡಿದ ಅಪರಾಧಗಳಿಗಾಗಿ ಪಶ್ಚಾತ್ತಾಪ ಪಡುತ್ತ ದೈನ್ಯದಿಂದ ಕ್ಷಮೆ ಬೇಡಿರಿ. ಮುಂದೆ ಎಂದಿಗೂ ಅಂಥ ಅಪರಾಧ ಮಾಡದಂತೆ ನಿರ್ಧರಿಸಿ ಪ್ರಾರ್ಥನೆ ಮಾಡಿರಿ.



ಮಾತನಾಡದಿರುವುದು ನಿಜವಾದ ಮೌನವಲ್ಲ,
ಅದರಿಂದ ಯಾವ ಲಾಭವೂ ಆಗುವುದಿಲ್ಲ.
ನಮ್ಮ ವಿಚಾರಗಳು, ಇಂದ್ರಿಯಗಳು ಮೌನ ತಾಳಬೇಕು.
ಅದೇ ನಿಜವಾದ ಮೌನ.

ಶ್ರೀ ಬಾಬೂಜಿ

**ಯೋಗಾಶ್ರಮ ಕಮಿಟಿ**
# 53 ಬನಶಂಕರಿ ನಗರ, ಕೆಲಗೇರಿ ರಸ್ತೆ
ಧಾರವಾಡ-580 008